ಹಿತ್ತಲ ಗಿಡ

ಚಾತುರ್ಮಾಸಿಕ

ಪೈರು 16 (ಕೊ 3), ಪೈರು 17 (ಕೊ 1, 2 ಮತ್ತು 3) 2010-2011

" ತಳಮಟ್ಟದ ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವತ್ತ ಕೈ ಜೋಡಿಸೋಣ "

ತೀರ್ಮಾನ ನಿಮ್ಮ ಕೈಯಲ್ಲಿದೆ...



ಗಣಪತಿ ಭಟ್ಟರ ಅಡಿಕೆಹಾರ



ಈ ಸಂಚಿಕೆಯಲ್ಲಿ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ಪಾರಂಪರಿಕ ಆಹಾರ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹನಿಬೀ ಬಳಗ

Honey Bee (English)
Prof. Anil.K. Gupta, Indian Institute of Management, Vastrapur, Ahmedabad-380 015, Ph: 079-26307241 email: anilg@nifindia.org,honeybee@sristi.org

Ama Akha Pakha (Oriya)
Dr.Balaram sahu, 3R BP 5/2, BP Colony, Unit-8, Bhubaneswar-751 012, Orissa, balaram_sahu@ hotmail.com

Loksarvani (Gujarati)
Dilip Koradiya, SRISTI, P.O. Box 15050 Ahmedabad, Gujarat-380015, loksarvani@sristi.org

Makhir (Pahari)
Dr.A.Chandan, ERA, Khundian, District Kangra, Himachal Pradesh-176030, Makhir@epatra.com

Num Vali Velanmai (Tamil)
P.Vivekanandan, 45, TPM Nagar,Virattipathu Tamilnadu-625 010, numvali@vsnl.com

Sujh-Bujh Aas Paas Ki (Hindi)
Shalini Sharma, H-12 ODS Flats Lajpat Nagar 4 NewDelhi-110024, sujhbuj@sristi.org

Palle Srujana (Telugu)
Brig. (Retd.)P.Ganesham, 55, Vayupuri, Secunderabad-500 094 (A.P.) Ph: 040-27118555 honeybeeap@gmail.com

and

Hittalagida (Kannada)

ಹಿತ್ತಲ ಗಿಡದ ಪೋಷಣೆಗೆ ಸಹಾಯ :-

PRITIVI (People Rewarding Initiatives in Technology, Values & Institutions, Bangalore, SRISTI (Society for Research and Initiatives for Sustainable Technologies and Institutions), & NIF (National Innovation Foundation, India), Ahmedabad

ಸಂಪಾದಕೀಯ

ಅನಿವಾರ್ಯ ಕಾರಣಗಳಿಂದ ಹಿತ್ತಲಗಿಡವನ್ನು ಕಳೆದ ಒಂದು ವರ್ಷಗಳಿಂದ ಪ್ರಕಟಿಸಲಾಗಲಿಲ್ಲ. ನಿಜಹೇಳಬೇಕೆಂದರೆ ಪ್ರಕಟಿಸುವ ಶಕ್ತಿ ಮತ್ತು ಉತ್ಸಾಹಗಳೆರಡೂ ಕ್ಷೀಣಿಸತೊಡಗಿತ್ತು. ಕಳೆದ 16 ವರ್ಷಗಳಿಂದ ಪ್ರಕಟಿಸಿ ಸಾದಿಸಿರುವುದೇನೆಂಬ ಪ್ರಶ್ನೆ ಎದ್ದು ನಿಲ್ಲುತ್ತಿತ್ತು. ಹಿತ್ತಲಗಿಡ ಜನರಿಗೆ ಹೇಳುವ ಪತ್ರಿಕೆಯಲ್ಲ ಕೇಳುವಂತಹದ್ದು. ರೈತರು, ಗ್ರಾಮೀಣ ಪ್ರದೇಶದ ತಳಮಟ್ಟದ ಸಾಮಾನ್ಯ ಜನರ ಅಸಾಮಾನ್ಯ ಅನುಭವ, ಶೋಧನೆಗಳನ್ನು ದಾಖಲಿಸುವಂತಹದ್ದು. ಇವುಗಳ ಹುಡುಕಾಟವೇ ಅತ್ಯಂತ ಪ್ರಯಾಸದ ಕೆಲಸ. ನುರಿತ, ಉತ್ಸಾಹಿ ಸಹಾಯಕರ ಕೊರತೆ. ಜೊತೆಗೆ ಕೆಲಸದ ಅತೀ ಒತ್ತಡ ಇವೆಲ್ಲಾ 'ಹಿತ್ತಲಗಿಡ' ವನ್ನು ಮೂಲೆಗೆ ತಳ್ಳಲು ಸಾಮಾನ್ಯವಾಗಿ ನೀಡುವ ಸಬೂಬುಗಳ. ಅಷ್ಟರಲ್ಲೇ ನಮ್ಮ ಕೃಷಿ ವಿಶ್ವ ವಿದ್ಯಾಲಯ 'ರಾಷ್ಟ್ರೀಯ ಕೃಷಿ ಮೇಳ'ವನ್ನು ಆಯೋಜಿಸಿತ್ತು. ನಮ್ಮ ಮಳಿಗೆಯಲ್ಲಿ ಬಿದ್ದು ಹಾಳಾಗುತ್ತಿದ್ದ ಹಳೆ ಪತ್ರಿಕೆಗಳನ್ನು ಬಂದಂತಹ ರೈತರು ಓದುವುದಾದರೆ ಪುಕ್ಕಟೆ ಪಡೆಯಲಿ ಎಂದು ಇಡಲಾಯ್ತು. ಬಂದಂತಹ ಪ್ರತಿಕ್ರಿಯೆ ದಂಗು ಬಡಿಯುವಂತೆ ಮಾಡಿತು. ಸಂಜೆ ಒಳಗಾಗಿ ಹಳೆ ಸಂಚಿಕೆಗಳೆಲ್ಲಾ ಖಾಲಿ. ದುಡ್ಡು ಕೊಟ್ಟು ಚಂದಾದಾರರಾಗಲು ಹಲವರ ಕಾತರ. ಸಹದ್ಯೋಗಿಗಳಿಗೆಲ್ಲಾ ಖುಷಿಯೋ ಖುಷಿ. ತಟ್ಟನೆ ತಪ್ಪಿನರಿವಾಯಿತು. ಪರಿಣಾಮ, ಬಹುದಿನಗಳ ನಂತರ ಹಿತ್ತಲಗಿಡ ನಿಮ್ಮ ಮುಂದಿದೆ. ಮುಂದುವರೆಸುವ ಪ್ರಾಮಾಣಿಕ ಪ್ರಯತ್ನ ಮಾಡುವೆವು.

❖ ❖ ❖

ಕಳೆದ ಹದಿನಾರು ವರ್ಷಗಳಿಂದ ಒಂದೊಂದು ವಿಚಾರಕ್ಕೆ ಸಂಬಂದಿಸಿದಂತೆ ಹಲವಾರು ಸಂಚಿಕೆಗಳಲ್ಲಿ ಅನುಶೋಧನೆಗಳನ್ನು ಪ್ರಕಟಿಸುತ್ತಾ ಬಂದಿರುವೆವು ಅವೆಲ್ಲವನ್ನು ಒಂದೇ ಶೀರ್ಷಿಕೆಯಡಿ ಮತ್ತು ಒಟ್ಟಿಗೇ ಪ್ರಕಟಿಸಿದರೆ, ವಿಚಾರಕ್ಕೆ ಹೊಸ ರೂಪ, ದಿಕ್ಕು ದೆಸೆಗಳು ಸಿಗಬಹುದೆಂಬ ಕಾರಣಕ್ಕೆ ಈ ಸಂಚಿಕೆಯಲ್ಲಿ ಇಲಿ ನಿಯಂತ್ರಣದ ಬಗೆಗಿನ ಹಲವಾರು ಪದ್ಧತಿಗಳನ್ನು ಒಟ್ಟಿಗೇ ಕೊಟ್ಟಿರುವೆವು.

❖ ❖ ❖

ನನ್ನೂರು, ಕಮ್ಮರಡಿಗೆ ಹೋದಾಗಲೆಲ್ಲ, ಕಾಡುನಾಶ, ಅರಣ್ಯ ಒತ್ತುವರಿ, ಊರು, ಮನೆ, ಮಠಗಳು ಬೆಳೆದಿರುವ ರೀತಿ ಕಂಡು ದಿಗಿಲಾಗುತ್ತಿತ್ತು. ನಾನು ಓದಿ, ಆಡಿ ಬೆಳೆದು, ಬದುಕಿನ ರೀತಿ ಕಂಡು ಕೊಳ್ಳಲು ಕಾರಣವಾಗಿದ್ದ ನನ್ನೂರಿನ ಪ್ರೌಢಶಾಲೆ ಸುವರ್ಣ ಮಹೋತ್ಸವ ಆಚರಿಸುವ ಸಂದರ್ಭದಲ್ಲಿ 'ಹೊಂಬೆಳಕು' ಸ್ಮರಣ ಸಂಚಿಕೆಗೆ ಲೇಖನ ನೀಡಿ ಎಂದು ಪ್ರಧಾನ ಸಂಪಾದಕಿ ಶ್ರೀಮತಿ ಉಮಾದೇವಿ ಕೇಳಿದರು. ಪರಿಣಾಮ, ಜೀವವೈವಿಧ್ಯ ನಾಶದ ಬಗೆಗಿನ ಲೇಖನ ಸಿದ್ಧವಾಯ್ತು. ಅದರ ಪ್ರತಿಯನ್ನು ಇಲ್ಲಿ ಪ್ರಕಟಿಸಲಾಗಿದೆ. ಮಲೆನಾಡಿಂದು ಸಮಸ್ಯೆಗಳ ಆಗರವಾಗಿದೆ. ಅಡಿಕೆ ಕೃಷಿಗೆ ಹಳದಿ ರೋಗ ಬಂದಿದೆ. ಬೆಲೆ ಕುಸಿತ ಸಾಲದ್ದಕ್ಕೆ ಅಡಿಕೆ ಉತ್ಪನ್ನಗಳ ಬಳಕೆಗೇ ನಿಷೇಧ ಬರುವ ಎಲ್ಲಾ ಸಾಧ್ಯತೆಗಳಿವೆ. ಇವೆಲ್ಲವುಗಳ ಪರಿಣಾಮವೆಂದರೆ ನಕ್ಸಲ್ ಸಮಸ್ಯೆಗಳಂತಹಾ ಗಂಭೀರ ಪಿಡುಗು ತಲೆ ಎತ್ತಿವೆ. ಇವೆಲ್ಲವುಗಳಿಂದ ಹೊರಬರಲು ಅಲ್ಲಿನ ಅರಣ್ಯ, ಪರಿಸರ, ಜೀವ ವೈವಿಧ್ಯಗಳ ನಾಶ ತಡೆದು ಗಟ್ಟಿ ಮಾಡುವುದು ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಈ ಲೇಖನ ಸ್ಫೂರ್ತಿದಾಯಕವಾಗಬಹುದೆಂದು ಬಹುದೆಂದು ಆಶಿಸಲಾಗಿದೆ.

ಡಾ. ಟಿ.ಎನ್. ಪ್ರಕಾಶ ಕಮ್ಮರಡಿ

ಹತ್ತಿ ಬೆಳೆಯಲ್ಲಿನ ಎಫಿಡ್ಸ್ (ನುಸಿ) ನಿಯಂತ್ರಣಕ್ಕೆ

ಗುಜರಾತಿನ, ಭಾವನಗರ್ ಜಿಲ್ಲೆಯವರಾದ ಕಲ್ಯಾಣಭಾಯಿ ಜೀವರಾಜ್ ಭಾಯಿಯವರಿಗೆ ಓದುವುದು ಅಚ್ಚು ಮೆಚ್ಚಿನ ಹವ್ಯಾಸ ಮತ್ತು ಅವರು ಉತ್ಸಾಹ ಭರಿತ ಪ್ರಯೋಗಶೀಲರು. ಹೆಚ್ಚು ಖರ್ಚು ಬರದೇ ಇರುವ ಹಾಗೆ ವ್ಯವಸಾಯವನ್ನು ಮಾಡುತ್ತಾರೆ. ತಮ್ಮ ಬೆಳೆಗಳಲ್ಲಿ ಬರುವ ರೋಗಗಳನ್ನು ತಾವೇ ಹತೋಟಿ ಮಾಡುತ್ತಾರೆ. ಇವರು ಹತ್ತಿ ಬೆಳೆಯಲ್ಲಿ ಕಂಡು ಬರುವಂತಹ ಎಫಿಡ್ಸ್‌ಗಳ (ನುಸಿಗಳ) ನಿಯಂತ್ರಣಕ್ಕೆ ಪಾಪಸುಕಳ್ಳಿ (*Euphorbia SP*) ಯಲ್ಲಿ ಬರುವಂತಹ ಹಾಲನ್ನು 100 ಗ್ರಾಂ ನಷ್ಟು ತೆಗೆದುಕೊಂಡು ಅದಕ್ಕೆ 15 ಲೀಟರ್ ನೀರನ್ನು ಮಿಶ್ರಣ ಮಾಡಿ ತಿಂಗಳಿಗೆ ಎರಡು ಬಾರಿಯಂತೆ ಸಿಂಪಡಿಸುತ್ತಾರೆ.

ವೈಜ್ಞಾನಿಕ ಹಿನ್ನಲೆ :- ಪಾಪಸು ಕಳ್ಳಿಯ ಕೀಟನಾಶಕ ಗುಣಗಳು ಈಗಾಗಲೇ Desilva et.al. (2008) ರಲ್ಲಿ ಪ್ರಕಟವಾಗಿದೆ. ವಿವರಕ್ಕೆ J. Natn.Sci. Foundation Sri Lanka; volume 36 (1); Pages 15-23 ಹಾಗೂ ಹನಿ ಬೀ ಸಂಚಿಕೆ 4 (2 & 3); 21, 1993 ರನ್ನು ನೋಡಿರಿ.

ಬಸವ ಅಥವಾ ಶಂಖದ ಹುಳಗಳ ಹತೋಟಿಗೆ

ಇತ್ತೀಚಿಗೆ ಬೆಳೆಗಳಿಗೆ ಬಸವನಹುಳು ಅಥವಾ ಶಂಖದ ಹುಳುಗಳ ಹಾವಳಿ ಕಂಡು ಬರುತ್ತಿದೆ. ಈ ಹುಳುಗಳ ನಿಯಂತ್ರಣಕ್ಕೆ ಶಿವಮೊಗ್ಗದ ಎನ್.ಎಮ್. ಗಿರೀಶ್ ಇವರು ಕಂಡುಕೊಂಡ ಉಪಾಯ ಈ ರೀತಿ ಇದೆ. ಸುಮಾರು ನೂರು ನೂರೈವತ್ತು ಹುಳುಗಳನ್ನು ಹೆಕ್ಕಿ, ಒಂದು ಪಾತ್ರೆ ಅಥವಾ ಡ್ರಮ್ಮು ಇಲ್ಲ ಎಂದರೆ ಎರಡು ಅಡಿಯ ಗುಂಡಿ ತೆಗೆದು ಇದಕ್ಕೆ ಪ್ಲಾಸ್ಟಿಕ್ ಹಾಳೆ ಹಾಕಿ, ಇದರಲ್ಲಿ ಈ ಹುಳುಗಳನ್ನು ತುಂಬಿ ಜಜ್ಜಬೇಕು ಸತ್ತ ಹುಳುಗಳಿಗೆ ಐದಾರು ಲೀಟರ್ ನೀರು ಹಾಕಿ ಬಾಯಿ ಮುಚ್ಚಿ ನಾಲ್ಕೈದು ದಿನ ಬಿಡುವುದು, ಅಷ್ಟರಲ್ಲಿ ಇವು ಕೊಳೆತು ವಾಸನೆ ಬರುತ್ತಿರುತ್ತದೆ. ಇದಕ್ಕೆ ಮತ್ತಷ್ಟು ನೀರು ಸೇರಿಸಿ ಒಂದು ಪಾತ್ರೆಯಲ್ಲಿ ತುಂಬಿಕೊಂಡು ಈ ಹುಳಗಳ ಬಾಧೆ ಇರುವ ಕಡೆ ತೆಳುವಾಗಿ ನೆಲಕ್ಕೆ ಚೆಲ್ಲಬೇಕು. ನಾಳೆ ಎನ್ನುವಷ್ಟರಲ್ಲಿ ಶಂಖದ ಹುಳುಗಳು ಆ ಪ್ರದೇಶ ಬಿಟ್ಟು ದೂರ ಸರಿಯುತ್ತವೆ ಎನ್ನುವರು ಗಿರೀಶ್.

ರೋಗ ಮುಕ್ತ ಅಡಿಕೆ ಬೆಳೆ

ಹನ್ನೊಂದು ಎಕರೆ ಜಮೀನಿನಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ 6500 ಅಡಿಕೆ ಮರಗಳನ್ನು ಬೆಳೆದಿರುವ ಸಂಗಯ್ಯನವರು ಹಾವೇರಿ ಜಿಲ್ಲೆ, ಕಾಗಿನೆಲೆ ಗ್ರಾಮದ ರೈತರು. 14 ವರ್ಷದ ಈ ಮರಗಳಿಗೆ ಇದುವರೆಗೂ ಯಾವುದೇ ರಾಸಾಯನಿಕ ಮತ್ತು ಕೀಟನಾಶಕಗಳನ್ನು ಬಳಸಿಲ್ಲ, ಸಾಮಾನ್ಯವಾಗಿ ಅಡಿಕೆ ಬೆಳೆಗೆ ಕೊಳೆ ರೋಗ ಹಾಗೂ ಅಣಬಿ ರೋಗಗಳು ಕಾಣಿಸಿಕೊಳ್ಳುತ್ತವೆ. ಆದರೆ ಇವರ ತೋಟದಲ್ಲಿ ಇದಾವುದೇ ರೋಗವಿಲ್ಲ, ರೋಗ ತಗುಲಿದ ನಂತರ ನಿಯಂತ್ರಣ ಕಷ್ಟ ಸಾಧ್ಯ. ರೋಗ ಬರದಂತೆ ತಡೆಯುವ ಕ್ರಮವೇ ಅತ್ಯಂತ ಮಹತ್ವದ್ದು. ಪ್ರತಿ ವರ್ಷ ಮಳೆಗಾಲಕ್ಕೆ ಮೊದಲು ಅಡಿಕೆ ಮರಗಳ ಬುಡಗಳ ಸುತ್ತಲೂ ಅಗೆದು ಗುಣಿ ಮಾಡುತ್ತಾರೆ. ಪ್ರತಿ ಬುಡಕ್ಕೆ ಸಗಣಿ ಗೊಬ್ಬರ ಹಾಗೂ ನಾಲ್ಕು ಬುಟ್ಟಿ ಹೊಸ ಮಣ್ಣನ್ನು ಹಾಕುತ್ತಾರೆ. ಇದರಿಂದ ಅಡಿಕೆ ಮರಗಳು ಹೊಸ ಚೈತನ್ಯವನ್ನು ಪಡೆದುಕೊಳ್ಳುತ್ತವೆ. ಬೇಸಿಗೆಗೆ ಮೊದಲು ಪ್ರತಿ ಮರಕ್ಕೂ ಒಂದು ಕೆ.ಜಿ. ಮೈದಾ ಹಿಟ್ಟು ಹಾಗೂ ಸುಣ್ಣದ ಉತ್ತೆ ಮಾಡಿ ಬುಡದಿಂದ ಆರು ಅಡಿಯವರೆಗೆ ಲೇಪಿಸುತ್ತಾರೆ. ಈ ಕ್ರಮ ಅಣಬಿ ರೋಗವನ್ನು ತಡೆಯಲು ಸಹಕಾರಿ ಎನ್ನುತ್ತಾರೆ. ಅವರ ಮೊಬೈಲ್ *ನಂಬರ್: 9448999230*

ಮೂಲ:-ಪ್ರಜಾವಾಣಿ ಡಿಸೆಂಬರ್ 8,2011.


ಕೀಟ ಬಾಧೆಗೆ ಸಸ್ಯ ಔಷಧಿ

ಬೆಳೆಗಳ ಕೀಟ ಬಾಧೆ ತಪ್ಪಿಸಲು ಕೀಟ ಭಾದೆ ಇಲ್ಲದ ಗಿಡಗಳ ಎಲೆಯ ಕಷಾಯ ತಯಾರಿಸಿಕೊಳ್ಳಬಹುದೆನ್ನುವರು ಹಾಸನ ಜಿಲ್ಲೆ ಬೇಲೂರು ತಾಲೂಕಿನ ಸೊಪ್ಪಿನಹಳ್ಳಿ ಗ್ರಾಮದ ಸಾವಯವ ಕೃಷಿಕರಾದ ರುದ್ರೇಶ್. ಮನೆ ಹಿತ್ತಲುಗಳಲ್ಲಿ ದೇವಸ್ಥಾನಗಳ ಸುತ್ತಮುತ್ತ ಪೂಜೆ ಮಾಡಲು ಬಹುವಾರ್ಷಿಕವಾಗಿ ವರ್ಷ ಪೂರ್ತಿ ಹೂ ಬಿಡುವ ಕಣಗಲ,ಬಿಲ್ವಪತ್ರೆ ಮುಂತಾದ ಮರಗಿಡಗಳನ್ನು ಹಾಕಿರುತ್ತಾರೆ. ರುದ್ರೇಶ ಒಂದು ದಿನ ದೇವರ ಪೂಜೆಗೆಂದು ಕಣಗಲ ಹೂ ಬಿಡಿಸುವಾಗ "ಹೂವು, ಎಲೆ, ಕಾಂಡಕ್ಕಾಗಲಿ ಯಾವುದೇ ರೀತಿಯ ಕೀಟ, ರೋಗಬಾಧೆ ನೋಡಲೇ ಇಲ್ಲವಲ್ಲ" ಎಂದು ಯೋಚಿಸಿದರಂತೆ. ಈ ಗಿಡಗಳಲ್ಲಿ ಕೀಟಗಳಿಗೆ ಕಹಿ ಅಥವಾ ವಿಷ ವಸ್ತು ಇರಬಹುದು ಆದ್ದರಿಂದ ಇದು ಈ ಬಾಧೆಗಳಿಂದ ಮುಕ್ತವಾಗಿದೆ ಎಂದು ತಿಳಿದುಕೊಂಡರಂತೆ. ಅದೇ ದಿನ ತಮ್ಮ ಜಮೀನಿನಲ್ಲಿ ಇದ್ದ ಬದನೆ, ಮೆಣಸು ಗಿಡಗಳ ಕೀಟಬಾಧೆಗೆ ಕಣಗಲ ಗಿಡದ 200 ಗ್ರಾಂ ಎಲೆಗಳನ್ನು ಕಿತ್ತುಕೊಂಡು ರುಬ್ಬಿ ರಸ ತೆಗೆದು 15 ಲೀಟರ್ ನೀರಿಗೆ ಸೇರಿಸಿ ಬೆಳೆಗೆ ಸಿಂಪರಣೆ ಮಾಡಿದರಂತೆ. ಬೆಳೆಗಳ ಎಲೆ, ಕಾಯಿ, ಹಾಳು ಮಾಡುತ್ತಿದ್ದ ಕೀಟ ಕಡಿಮೆಯಾಗಿದ್ದು ಅಲ್ಲದೆ ಗಿಡಗಳ ಬೆಳವಣಿಗೆಯಲ್ಲಿ ಉತ್ತಮ ಬದಲಾವಣೆ ಆಯಿತು ಎನ್ನುವರು. ಈ ಕಷಾಯವನ್ನೇ ಈಗಲೂ ತರಕಾರಿ ಬೆಳೆಗಳಲ್ಲಿ ಬಳಸುತ್ತಿರುವುದಾಗಿ ತಿಳಿಸಿರುವರು.

ಶೇಂಗಾ ರೋಗ ನಿವಾರಣೆಗೆ ನೆಲಬೇವು

ಸುಮಾರು 250 ಗ್ರಾಂ. ನೆಲಬೇವಿನ (ಕಾಲಮೇಘ) *(Andrographis paniculata)* ಕೊಂಬೆಗಳನ್ನು ಅರೆದು ಪೇಸ್ಟನ್ನು ಮಾಡಿಕೊಳ್ಳಬೇಕು. ಈ ಪೇಸ್ಟನ್ನು 5 ಲೀ. ನೀರಿನಲ್ಲಿ ಮಿಶ್ರಣ ಮಾಡಿಕೊಳ್ಳಬೇಕು. ತದನಂತರ ಈ ಮಿಶ್ರಣವನ್ನು ಒಂದು ತಿಂಗಳಲ್ಲಿ 2-3 ಬಾರಿ ಶೇಂಗಾ ಬೆಳೆಗೆ ಸಿಂಪರಣೆ ಮಾಡುವುದರಿಂದ ರೋಗ ನಿವಾರಣೆಯಾಗಿ ಗಿಡವು ಬಲಿಷ್ಟವಾಗಿ ಬೆಳೆಯುತ್ತದೆ. ಇದರಿಂದಾಗಿ ಹೆಚ್ಚು ಇಳುವರಿಯನ್ನು ನಿರೀಕ್ಷಿಸಬಹುದು. ಓರಿಸ್ಸಾ ರಾಜ್ಯದವರಾದ ಪ್ರಿಯಬಾತ್ರರವರು ಸತತ 10 ವರ್ಷಗಳಿಂದ ಈ ಕ್ರಿಯೆಯನ್ನು ತಮ್ಮ ತೋಟದಲ್ಲಿ ಮಾಡುತ್ತಾ ಬಂದಿದ್ದಾರೆ. ಹಾಗೆಯೇ ಇಳುವರಿಯಲ್ಲಿ ಒಳ್ಳೆಯ ಫಲಿತಾಂಶ ಪಡೆಯುತ್ತಾ ಬಂದಿದ್ದಾರೆ.

ಹೆಚ್ಚಿನ ವಿವರಕ್ಕೆ:- volume 21 (4); Page No 13 October-December 2010 ಹನಿ ಬೀ ಸಂಚಿಕೆಯನ್ನು ನೋಡಿರಿ.



ಪ್ಲಾಸ್ಟಿಕ್‌ಬಲೂನ್ ಗೋಬರ್ ಗ್ಯಾಸ್ ಘಟಕ

ಗೋಬರ್ ಗ್ಯಾಸ್ ತಯಾರಿಸಲು 60 ರಿಂದ 70 ಸಾವಿರ ರೂ.ಗಳಾದರು ಬೇಕು. ಹಾಗೂ ಕನಿಷ್ಟ ಹತ್ತು ಜಾನುವಾರುಗಳಾದರೂ ಇರಬೇಕು. ಆದರೆ ಕಡಿಮೆ ವೆಚ್ಚದ ಹಾಗೂ ಪ್ರತಿಯೊಬ್ಬರ ಮನೆಗಳಲ್ಲೂ ನಿರ್ಮಿಸಬಹುದಾದ ಗೋಬರ್ ಗ್ಯಾಸ್ ಘಟಕವನ್ನು ಮೂಡಿಗೆರೆ ತಾಲೂಕಿನ ದಾರದಹಳ್ಳಿ ಗ್ರಾಮದ ಹಿರಿಯ ಪಶುವೈದ್ಯಕೀಯ ಪರೀಕ್ಷಕರಾದ ಕ.ದಾ.ಕೃಷ್ಣರಾಜುರವರು ಅಭಿವೃದ್ಧಿ ಪಡಿಸಿದ್ದಾರೆ. ಈ ಘಟಕವು ತುಂಬಾ ಸರಳವಾಗಿದ್ದು ಇದನ್ನು ತಯಾರಿಸಲು ರೂ.3000 ವೆಚ್ಚವಾಗುತ್ತದೆಂದು ಹೇಳಿದ್ದಾರೆ. ಮನೆಯಲ್ಲೊಂದು ಆಕಳಿದ್ದು ದಿನಕ್ಕೊಂದು ಬುಟ್ಟಿ ಸಗಣಿ ಹಾಕಿದರೆ ಸಾಕು 4-5 ತಾಸು ಗೋಬರ್ ಗ್ಯಾಸ್ ಬಳಸಬಹುದಂತೆ. ಈ ಘಟಕವನ್ನು ತಯಾರಿಸಲು 10 ಅಡಿ ಉದ್ದ, 7 ಅಡಿ ಅಗಲ ಹಾಗೂ 5 ಅಡಿ ಎತ್ತರದ ಪ್ಲಾಸ್ಟಿಕ್ ಟಾರ್ಪಾಲಿನ್ ಬಳಸಲಾಗಿದೆ. ಇದನ್ನು ಸುತ್ತಲೂ ಹೊಲಿದು ಒಂದು ಬದಿಯಲ್ಲಿ ಸಗಣಿ ಹಾಕಲು 70ಎಂ ಎಂ ಗಾತ್ರದ 6 ಅಡಿ ಉದ್ದದ ಪಿವಿಸಿ ಪೈಪ್ ಹಾಗೂ ಸ್ಲರಿ ಹೊರಹಾಕಲು 50 ಎಂ ಎಂ ಗಾತ್ರದ 3 ಅಡಿ ಉದ್ದದ ಪಿವಿಸಿ ಪೈಪ್ ಅಳವಡಿಸಲಾಗಿದೆ.

ಜುಲೈ 2010 ರಲ್ಲಿ ಇವರೊಂದು ಗೋಬರ್ ಗ್ಯಾಸ್ ಘಟಕವನ್ನು ಲೋಕಾರ್ಪಣೆ ಮಾಡಿದ್ದಾರೆ. ಅದು ಈಗ ಗೋವಾ, ಹರಿಯಾಣ, ಮದ್ರಾಸ್‌ಗಳಲ್ಲಿ ತುಂಬಾ ಬೇಡಿಕೆಯಲ್ಲಿದ್ದು ದಕ್ಷಿಣ ಕನ್ನಡದ ಅಡಿಕೆ ಬೆಳೆಗೆ ಬಹಳ ಸಹಕಾರಿಯಾಗಿದೆ. ಒಂದೇ ಗಂಟೆಯಲ್ಲಿ ರೈತರೇ ತಯಾರಿಸಿಕೊಳ್ಳಬಹುದು. "ಅದರ ಜೈವಿಕ ಸ್ಲರಿ ರೈತರಿಗಿಲ್ಲ ವರ". ಅದಕ್ಕೆ 15 ದಿನಕ್ಕೊಮ್ಮೆ 2 ಕೆ.ಜಿ. ಬೆಲ್ಲ, 2 ಕೆ.ಜಿ. ಹುರುಳಿ ಹಿಟ್ಟು ಹಾಕಿದರೆ ಸ್ಲರಿ ಕೂಡ ಜೀವಾಮೃತವಾಗುತ್ತದೆ. ವಾರಕ್ಕೆ ಒಮ್ಮೆ 200 ಲೀಟರ್ ಸ್ಲರಿ ತೆಗೆದು ಅದಕ್ಕೆ 400 ಲೀಟರ್ ನೀರು ಸೇರಿಸಿ ಬಳಸಿದರೆ ತೋಟ ಗದ್ದೆಯಲ್ಲಾ ಸಮೃದ್ಧಿಯಾಗಿ ಫಲವತ್ತಾಗುತ್ತದೆ. ಒಂದು ಪಕ್ಷ ಜಮೀನು ಇಲ್ಲದಿದ್ದರೆ ಆ ಸ್ಲರಿಯನ್ನು ಒಣಗಿಸಿ ಉಂಡೆ ಮಾಡಿಟ್ಟುಕೊಂಡರೆ ಮರು ಇಂಧನವಾಗಿ ಬಳಸಬಹುದು. ಅಥವಾ ಎರೆಹುಳು ಉತ್ಪಾದಿಸಲು ಬಳಸಿದರು ಬಹಳ ಲಾಭಕಾರಿಯಾಗಿದೆ. ಇನ್ನೂ *ಹೆಚ್ಚಿನ ವಿವರಗಳಿಗೆ ಕೃಷ್ಣರಾಜುರವರನ್ನು ಸಂಪರ್ಕಿಸಬೇಕಾದ ಸಂಖ್ಯೆ 9448073711*

ಮೂಲ : ಅಚ್ಚೆನಹಳ್ಳಿ ಸುಚೇತನ, ಉದಯವಾಣಿ 30, ಆಗಸ್ಟ್ 2010




ಕೊಳವೆ ಬಾವಿ ಮೂಲಕ ಜೀವಾಮೃತ

ಹಾಸನ ಜಿಲ್ಲೆಯ ಬೇಲೂರು ತಾಲೂಕಿನ,ಅಡಗೂರು ಗ್ರಾಮದವರಾದ ಪದ್ಮಪ್ರಭುರವರು 5 ಎಕರೆ ಜಮೀನನ್ನು ಹೊಂದಿದ್ದು ತೆಂಗು, ಅಡಿಕೆ, ಬಾಳೆ ಮತ್ತು ಶುಂಠಿಯನ್ನು ಬೆಳೆಯುತ್ತಿದ್ದಾರೆ ಇವರು ಜೀವಾಮೃತ ಬಳಸಿ ಸಾವಯವ ಕೃಷಿ ಮಾಡುತ್ತಿದ್ದು ಬೆಳೆಗಳ ಕೀಟ ಹಾಗೂ ರೋಗಬಾಧೆಗಳಿಗಾಗಿ ಕೀಟನಾಶಕಗಳನ್ನು ಸ್ಥಳೀಯವಾಗಿ ಸಿಗುವ ಕಳೆರೂಪದ ಸಸ್ಯಗಳಾದ ಕಾಂಗ್ರೆಸ್, ಮುಟ್ಟಿದರೆ ಮುನಿ, ತುಂಬೆ, ನಾಯಿ ತುಳಸಿ ಇನ್ನು ಮುಂತಾದ ಸಸ್ಯಗಳನ್ನು ಬಳಸಿ ತಯಾರಿಸಿಕೊಳ್ಳುತ್ತಾರೆ. ಇವರು ಈ ಕೀಟನಾಶಕವನ್ನು ಮತ್ತು ಜೀವಾಮೃತವನ್ನು ಕೊಳವೆ ಬಾವಿಯಲ್ಲಿ ಹರಿಸಿ, ಮೋಟಾರ್ ಮುಖಾಂತರ ಸ್ಪ್ರಿಂಕ್ಲರ್ ಬಳಸಿ ಬೆಳೆಗಳ ಮೇಲೆ ಸಿಂಪಡಿಸುತ್ತಾರೆ. ಈ ವಿಭಿನ್ನ ರೀತಿಯ ಪ್ರಯೋಗವನ್ನು ಇವರು 2004 ರಲ್ಲಿ ಪ್ರಾರಂಭಿಸಿರುತ್ತಾರೆ. ಈ ವಿಧಾನಕ್ಕೆ ಒಂದು ಪ್ಲಾಸ್ಟಿಕ್ ಡ್ರಮ್ಮನ್ನು ಬಳಸಿ ಇದರ ತಳಭಾಗದಲ್ಲಿ ಸಣ್ಣ ಕಲ್ಲುಗಳನ್ನು ತುಂಬುತ್ತಾರೆ. ನಂತರ ಜಾಲರಿಯನ್ನು ಅಳವಡಿಸಿ ಅದರ ಮೇಲೆ ಕಳೆ ರೂಪದ ಸಸ್ಯಗಳನ್ನು ಅರೆದು ಹಾಕಿ 8 ರಿಂದ 10 ದಿನಗಳವರೆಗೆ ಕೊಳೆಯಲು ಬಿಡಲಾಗುತ್ತದೆ. ಡ್ರಮ್ಮಿನ ಕೆಳಭಾಗದಲ್ಲಿ ಜೋಡಿಸಲಾಗಿರುವ ಕೊಳವೆಯ ಮುಖಾಂತರ ತಳಭಾಗದಲ್ಲಿ ಶೇಖರಣೆಗೊಂಡಿರುವಂತಹ ಜೀವಾಮೃತವನ್ನು ಕೊಳವೆ ಬಾವಿಗೆ ಬಿಡಲಾಗುತ್ತದೆ. ನಂತರ ಮೋಟರ್ ಮುಖಾಂತರ ಬೆಳೆಗಳಿಗೆ ಚಿಮುಕಿಸಲಾಗುತ್ತದೆನ್ನುವರು. ಹೀಗೆ ನೀರು ಕೊಡುವಾಗಲೆಲ್ಲ ಕೊನೆಯ ಹಂತದಲ್ಲಿ ಜೀವಾಮೃತವನ್ನು ಬಿಡುತ್ತಾರೆ. *ಹೆಚ್ಚಿನ ಮಾಹಿತಿಗಳಿಗೆ ಪದ್ಮಪ್ರಭುರವರನ್ನು ಸಂಪರ್ಕಿಸಬಹುದಾದ ಸಂಖ್ಯೆ 9448066973*

ಅಡಿಕೆ ಹಾರ

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಹೊಸ್ತೋಟ ಗ್ರಾಮದ ಎಂ. ಗಣಪತಿಭಟ್ ಅಡಿಕೆ ಬೆಳೆಗಾರರು. ಅಡಿಕೆಗೆ ಔಷಧಿ ಗುಣ ಇರುವುದರಿಂದ ರುದ್ರಾಕ್ಷಿಯ ಹಾರದಂತೆ ಯಾಕೆ ಹಾರ ತಯಾರಿಸಬಾರದು ಎಂಬ ಆಲೋಚನೆ ಮೂಡಿತು. ಒಣಗಿದ ಚಾಲಿ, ಕೆಂಪು ದುಂಡನೆಯ ಒಂದೇ ಅಳತೆಯ ಅಡಿಕೆಗಳನ್ನು ಆರಿಸಿಕೊಂಡು ಕೆಲವನ್ನು ಬೇಕಾದ ಆಕಾರಕ್ಕೆ ಕೆತ್ತಿಕೊಂಡು ಬಣ್ಣ ಹಚ್ಚಿ ಅಡಿಕೆ ಕೊರೆದು ದಾರಕ್ಕೆ ಪೋಣಿಸುವರು. ಹಾರ ಹಗುರವಾಗಿರಲು ಮತ್ತು ಅಂದವಾಗಿ ಕಾಣಲು ಮಧ್ಯೆ ಔಷಧಿ ಗುಣವುಳ್ಳ ಮರ ಗಿಡಗಳ ತುಂಡುಗಳನ್ನು ಮಣಿಗಳಂತೆ ಬಳಸಬಹುದು ಎನ್ನುತ್ತಾರೆ ಭಟ್ಟರು. ಒಂದು ಹಾರದಲ್ಲಿ 20 ರಿಂದ 25 ರವರೆಗೆ ಅಡಿಕೆ ಬಳಸಿರುವರು. ಒಂದು ಹಾರಕ್ಕೆ 125 ರೂ ನಿಗದಿ ಮಾಡಿದ್ದಾರೆ. ದಿನ ಒಂದಕ್ಕೆ ಒಬ್ಬರು 25 ರಿಂದ 30 ಹಾರ ತಯಾರಿಸಬಹುದೆನ್ನುತ್ತಾರೆ. ಒಂದು ಹಾರದ ಖರ್ಚು ಕಳೆದು ರೂ 40 ಲಾಭಗಳಿಸಬಹುದೆನ್ನುತ್ತಾರೆ. ಈಗಾಗಲೇ 50 ಹಾರ ಮಾರಾಟ ಮಾಡಿರುವರು. ಅಡಿಕೆಗಳಿಂದ ಬಾಗಿಲ ತೋರಣ, ಮನೆಯ ಒಳಾಲಂಕಾರ, ಫ್ಯಾನ್ಸಿ ಮಾಲೆ, ದೇವರ ಪೂಜಾ ಮಂಟಪಗಳ ಅಲಂಕಾರಕ್ಕೆ ತಯಾರಿಸಿಕೊಳ್ಳಬಹುದೆನ್ನುತ್ತಾರೆ. ಪ್ಲಾಸ್ಟಿಕ್ ಹಾರ ಬಳಸುವ ಬದಲು ಅಡಿಕೆ ಹಾರಗಳನ್ನು ಬಳಸಬಹುದೆನ್ನುತ್ತಾರೆ. *ಹೆಚ್ಚಿನ ಮಾಹಿತಿಗೆ ಎಂ. ಗಣೇಶ್ ಭಟ್ ಅವರನ್ನು ಸಂಪರ್ಕಿಸಬೇಕಾದ ಸಂಖ್ಯೆ 9343455810*

ಮೂಲ : ಚಂದ್ರಹಾಸ ಚಾರ್ಮಾಡಿ,ಪ್ರಜಾವಾಣಿ , 8 ಡಿಸೆಂಬರ್ 2011.



ರೈತ ತಯಾರಿಸಿದ ಹೂಳೆತ್ತುವ ಯಂತ್ರ

ಅಕ್ಷರ ಬಾರದ ರೈತನೊಬ್ಬ ಕೈ ಚಾಲಿತ ಹೂಳೆತ್ತುವ ಯಂತ್ರ ತಯಾರಿಸುವ ಸುಲಭ ವಿಧಾನವೊಂದನ್ನು ಕಂಡು ಹಿಡಿದು ಅಚ್ಚರಿ ಮೂಡಿಸಿದ್ದಾರೆ. ಬೀದರ್ ಜಿಲ್ಲೆ ಔರಾದ ತಾಲ್ಲೂಕಿನ ಮುಂಗನಾಳ ಗ್ರಾಮದ ಯುವ ರೈತ ನಾಗನಾಥ ಗಣಪತಿರಾವ್ ಜಗದಾಳೆ ಎಂಬುವರು ಕೇವಲ ರೂ.2000 ವೆಚ್ಚದಲ್ಲಿ ಹೂಳೆತ್ತುವ ಕೈ ಚಾಲಿತ ಯಂತ್ರ ತಯಾರಿಸಿದ್ದಾರೆ. ಇದರ ಸಹಾಯದಿಂದ ಈಗಾಗಲೇ ಅವರು ತಮ್ಮ ಹೊಲದಲ್ಲಿ 12 ಅಡಿಯಷ್ಟು ಬಾವಿ ಕೊರೆದಿದ್ದಾರೆ.

16 ಅಡಿ ಮತ್ತು 18 ಅಡಿ ಉದ್ದದ ಮೂರು ಮರದ ಕೊಂಬೆ, ಎತ್ತಿನ ಬಂಡಿಗೆ ಬಳಸುವ ವೈರ್ ಸಹಾಯದಿಂದ ಯಂತ್ರ ಸಿದ್ಧಪಡಿಸಿದ್ದಾರೆ. 3 ಕ್ವಿಂಟಾಲ್‌ನಷ್ಟು ಭಾರ ಎತ್ತುವ ಸಾಮರ್ಥ್ಯ ಹೊಂದಿರುವ ಈ ಯಂತ್ರ ಹೊಸ ಬಾವಿ ಕೊರೆಯಲು, ಹೂಳೆತ್ತಲು ಅತ್ಯಂತ ಉಪಯುಕ್ತವಾಗಿದೆ.

ಸದ್ಯ ಈ ಯಂತ್ರಕ್ಕೆ 3 ಎಚ್.ಪಿ. ಹಳೆಯ ಮೋಟಾರ್ ಅಳವಡಿಸಿದ್ದಾರೆ. 3-4 ವ್ಯಕ್ತಿಗಳ ಸಹಾಯದಿಂದ 15 ರಿಂದ 20 ದಿನಗಳಲ್ಲಿ 30 ಅಡಿ ಆಳದ ಬಾವಿ ಕೊರೆಯಲಾಗುತ್ತದೆ ಎನ್ನುತ್ತಾರೆ. ಕೂಲಿ ಖರ್ಚು ಸೇರಿ 15 ರಿಂದ 20 ಸಾವಿರ ರೂಪಾಯಿಗಳಲ್ಲಿ ಬಾವಿ ತಯಾರಾಗುತ್ತದೆ. ವಿದ್ಯುತ್ ಮೋಟಾರು ಇಲ್ಲದೆಯೂ ಕೈಚಾಲಿತವಾಗಿ ಈ ಯಂತ್ರ ಬಳಸಬಹುದಾಗಿದೆ.

ಮಹಾರಾಷ್ಟ್ರದ ನಮ್ಮ ಸಂಬಂಧಿಕರೊಬ್ಬರ ಪ್ರೇರಣೆಯಿಂದ ನಾನು ಈ ಯಂತ್ರ ತಯಾರಿಸಲು ಸಾಧ್ಯವಾಯಿತು. ನಮ್ಮ ರೈತ ಬಾಂಧವರಿಗೆ ಇದರ ಉಪಯೋಗ ಸಿಕ್ಕರೆ ಮಾತ್ರ ನಾನು ಮಾಡಿದ ಕೆಲಸದಲ್ಲಿ ತೃಪ್ತಿ ಸಿಗುತ್ತದೆ ಎಂದು ಹೇಳುತ್ತಾರೆ ರೈತ ನಾಗನಾಥ ಜಗದಾಳೆ. *ಹೆಚ್ಚಿನ ಮಾಹಿತಿಗೆ ನಾಗನಾಥ ಅವರನ್ನು ಸಂಪರ್ಕಿಸಬಹುದಾದ ಸಂಖ್ಯೆ 9241679060 ಅಥವಾ 963279826*

ಅಡಿಕೆ ಹೆಕ್ಕುವ ಕೈ

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕು ಕಿರೆಕೋಡ ಗ್ರಾಮದ ರೈತ ರಾಜಾರಾಮ ಹೆಗಡೆ, ಅಡಿಕೆ ಹೆಕ್ಕುವ ಸರಳ ಸಾಧನವೊಂದನ್ನು ರೂಪಿಸಿದ್ದಾರೆ. ಮೂರುವರೆ ಅಡಿ ಉದ್ದ, ಮುಕ್ಕಾಲು ಇಂಚು ಅಗಲದ ಪಿವಿಸಿ ಪೈಪ್‌ನ ಒಂದು ತುದಿಯಲ್ಲಿ ಮಹಿಳೆಯರ ಕೂದಲಿಗೆ ಹಾಕುವ ಕ್ಲಿಪ್ ಅಳವಡಿಸಲಾಗಿದೆ. ಈ ಕ್ಲಿಪ್‌ಗೆ ಜೋಡಿಸಲಾದ ಬೈಕ್‌ನ ಕ್ಲಚ್ ಕೇಬಲ್ ಮತ್ತೊಂದು ತುದಿಯಲ್ಲಿರುವ ಹನಿ ನೀರಾವರಿ ಡ್ರಿಪ್‌ನ ಟಿ ಗೆ ಸಂಪರ್ಕ ಪಡೆದಿದೆ. ಕೇಬಲ್ ಮುಚ್ಚಳಕ್ಕೆ ಮೈಕ್ರೋವಾಲ್ ಹಾಕಲಾಗಿದೆ. ಇದರೊಂದಿಗೆ ಒಂದು ಎಂಡ್ ಕ್ಯಾಪ್ ಮತ್ತು ಎಂಟು ನಂಬರಿನ ಐದು ಬೋಲ್ಟ್ ನಟ್‌ಗಳನ್ನು ಉಪಯೋಗಿಸಿಕೊಂಡು ಸಾಧನವನ್ನು ತಯಾರಿಸಿದ್ದಾರೆ. ಇದರ ಖರ್ಚು ನೂರು ರೂಪಾಯಿಗಿಂತ ಹೆಚ್ಚು ಆಗುವುದಿಲ್ಲ ಎಂದಿದ್ದಾರೆ ರಾಜಾರಾಮ ಹೆಗಡೆ.

ಪೈಪ್‌ನ ಒಂದು ತುದಿಯಲ್ಲಿ ಅಳವಡಿಸಿದ ಹನಿ ನೀರಾವರಿ ಟಿ ಯನ್ನು ಎಳೆದರೆ ಮತ್ತೊಂದು ತುದಿಯಲ್ಲಿರುವ ಕ್ಲಿಪ್ ತೆರೆಯುತ್ತದೆ ಆಗ ಅಡಿಕೆಯನ್ನು ಆ ಕ್ಲಿಪ್‌ನಲ್ಲಿ ಎತ್ತಿಕೊಂಡು ಬುಟ್ಟಿಯೊಳಗೆ ಹಾಕಬಹುದು. *ಹೆಚ್ಚಿನ ಮಾಹಿತಿಗಾಗಿ ಅವರನ್ನು ಸಂಪರ್ಕಿಸಬೇಕಾದ ಸಂಖ್ಯೆ 9482699848 ಅಥವಾ 9481462006*


ಮೂಲ : ರವೀಂದ್ರ ಭಟ್ ಬಳಗುಳಿ, ಪ್ರಜಾವಾಣಿ 3 ಜನವರಿ 2012.

ವಿದ್ಯುತ್ ಸಂಗ್ರಹಕ್ಕೆ ಸಾಧನ

ಚಿಕ್ಕಮಗಳೂರಿನ ಮಹಮ್ಮದ್ ಸಮೀವುಲ್ಲಾ ಸುಹೇಲ್‌ರವರು ಎಸ್.ಎಸ್.ಎಲ್.ಸಿ ಯವರೆಗೆ ಓದಿದ್ದು 20 ವರ್ಷಗಳಿಂದ ಎಲೆಕ್ಟ್ರಿಕಲ್ ಟೆಕ್ನೀಷಿಯನ್ ಆಗಿ ಕೆಲಸ ಮಾಡುತ್ತಿದ್ದಾರೆ. ಇವರು ವಿದ್ಯುತ್ ಸಂಗ್ರಹಕ್ಕೆ ಪವರ್ ಸ್ಟೋರೇಜ್ ಸಿಸ್ಟಮ್ ಅನ್ನು ಅಭಿವೃದ್ಧಿ ಪಡಿಸಿದ್ದು ಇದು ಈಗಿರುವ ಸಿಸ್ಟಮ್‌ಗಳಂತೆ ಡಿ.ಸಿ. ವೋಲ್ಟೇಜ್ ಸಿಸ್ಟಮ್ ಅಲ್ಲದೆ ಹೆಚ್ಚು ಸಾಮರ್ಥ್ಯವಿರುವ ಎ.ಸಿ. ವೋಲ್ಟೇಜ್ ಸ್ಟೋರೇಜ್ ಸಿಸ್ಟಮ್ ಆಗಿದೆ. ಈಗಿರುವ ಸಿಸ್ಟಮ್‌ಗಳು ಎ.ಸಿ.ಯನ್ನು ಡಿ.ಸಿ.ಯಾಗಿ ಹಿಡಿದಿಟ್ಟು ಕೊಂಡು ನಮಗೆ ಬೇಕೆಂದಾಗ ಅದನ್ನು ಎ.ಸಿ. ಆಗಿ ಬದಲಾಯಿಸಿ ಕೊಡುತ್ತವೆ. ಇಲ್ಲಿ ವಿದ್ಯುತ್ ನಷ್ಟ ಜಾಸ್ತಿ. ಮನೆಗಳಲ್ಲಿ ಸಣ್ಣ ಪುಟ್ಟ ಉದ್ದೇಶಗಳಿಗೆ, ಆಫೀಸ್‌ಗಳಲ್ಲಿ ಕಂಪ್ಯೂಟರ್ ಉಪಯೋಗಿಸಲು ಇದು ಸಾಕು. ಆದರೆ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ, ಲೇಥಿಂಗ್ ಮಷೀನ್, ಪಂಪ್ ಸೆಟ್, ಪಲ್ವರ್ ವೆಲ್ಡಿಂಗ್‌ನಂತಹ ಕೆಲಸಗಳಿಗೆ ಇದರಿಂದ ಉಪಯೋಗವಾಗುವುದಿಲ್ಲ. ಆದರೆ ಇವರ ಸಾಧನವು ಹೆಚ್ಚು ಸಾಮರ್ಥ್ಯ ಇರುವ ಎ.ಸಿ. ವೋಲ್ಟೇಜ್ ಸಿಸ್ಟಮ್ ಒಂದು ಸಾರಿ ಪವರ್ ಹಿಡಿದಿಟ್ಟರೆ ಅದನ್ನು 6 ತಿಂಗಳು, ಒಂದು ವರ್ಷ ಹೀಗೆ ಎಷ್ಟು ದಿನಗಳಾದ ಮೇಲೂ ಬಳಸಿಕೊಳ್ಳಲು ಸಾಧ್ಯ.ವಿದ್ಯುತ್ ಉಪಕರಣಗಳೂ ಹಾಳಾಗುವುದಿಲ್ಲವೆಂದು ಸುಹೇಲ್ ಹೇಳಿದ್ದಾರೆ. ಈ ಸಾಧನವನ್ನು ತಯಾರಿಸಲು ಪ್ರೇರಣೆಯಾದ ಪ್ರಸಂಗವೆಂದರೆ ಏಳೆಂಟು ವರ್ಷಗಳ ಹಿಂದೆ ಎಲೆಕ್ಟ್ರಿಕ್ ಕಾರನ್ನು ಕಂಡು ಹಿಡಿದಿರುವ ವಿಷಯ ಹಾಗೂ ಅದರ ದೋಷಗಳ ಬಗ್ಗೆ ಪತ್ರಿಕೆಗಳಲ್ಲಿ ಓದಿ ಈ ದೋಷಗಳಿಗೆ ಪರಿಹಾರ ಕಂಡು ಹಿಡಿಯಲು ಮಾಡಿದ ಪ್ರಯತ್ನಗಳ ಫಲವೇ ವಿದ್ಯುತ್ ಸಂಗ್ರಹದ ಸಾಧನವನ್ನು ಕಂಡು ಹಿಡಿಯಲು ಕಾರಣವಾಯಿತೆಂದು ಹೇಳಿದ್ದಾರೆ. ತಾವು ತಯಾರಿಸಿದ್ದ 30 ಸೆಕೆಂಡ್ ವಿದ್ಯುತ್ ಸಂಗ್ರಹ ಸಾಮರ್ಥ್ಯದ ಮಾಡೆಲ್‌ನ್ನು ಆಗಿನ ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿದ್ದ ನವೀನ್ ರಾಜ್ ಸಿಂಗ್ ಅವರಿಗೆ ತೋರಿಸಿದ್ದಾರೆ , ಅಲ್ಲದೆ ಕೆಪಾಸಿಟರ್‌ಗಳನ್ನು ಬಳಸಿ ಈ ಮಾಡೆಲ್ ಮಾಡಿರಬಹುದೆಂಬ ಅವರ ಶಂಕೆಗೆ ಪ್ರತ್ಯುತ್ತರವಾಗಿ ಸುಹೇಲ್‌ರವರು 10 ನಿಮಿಷ ಸಾಮರ್ಥ್ಯದ ಮತ್ತೊಂದು ಮಾಡೆಲ್ ಮಾಡಿ ತೋರಿಸಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ ತಯಾರು ಮಾಡಿದರೆ ಅಂದಾಜು 20 ಸಾವಿರ ರೂಪಾಯಿ ಖರ್ಚಿನಲ್ಲಿ ಅರ್ಧ ಕೆ.ವಿ.ಯ ಸ್ಟೋರೇಜ್ ಸಿಸ್ಟಮ್ ಸಿದ್ಧ ಮಾಡಬಹುದೆಂದು ಸುಹೇಲ್ ಹೇಳಿದ್ದಾರೆ. *ಹೆಚ್ಚಿನ ವಿಷಯಗಳಿಗೆ ಸುಹೇಲ್‌ರವರನ್ನು ಸಂಪರ್ಕಿಸಬಹುದಾದ ಸಂಖ್ಯೆ 98844030822*

ಮಾಹಿತಿ : ಎಮ್. ಸಿ. ಮುರುಗೇಂದ್ರಯ್ಯ, ಚಿತ್ರದುರ್ಗ

ಮೂಲ : ಬಿ.ಎಸ್. ವೆಂಕಟೇಶ್ ಪ್ರಸಾದ್, ಪ್ರಜಾವಾಣಿ, 20 ಫೆಬ್ರವರಿ 2008




ಸತೀಶ್ ದೇವ್‌ರ ಕೃಷಿ ಯಂತ್ರ, ಸಲಕರಣೆಗಳು

ಉತ್ತರ ಕನ್ನಡ ಜಿಲ್ಲೆಯ, ಶಿರಸಿ ತಾಲೂಕಿನ ಬೆಳಲೆಂದದವರಾದ ಸತೀಶ ಪದ್ಮನಾಭರಾವ್ ದೇವ್‌ರವರು ಕೃಷಿಗೆ ಅನುಕೂಲವಾಗುವಂತಹ ಅನೇಕ ಸಾಧನಗಳನ್ನು ತಯಾರಿಸಿದ್ದಾರೆ. ಇವರು ಡಿಪ್ಲೊಮಾ ಇಂಜಿನಿಯರಿಂಗ್ ಓದಿದ್ದು ವ್ಯವಸಾಯ ಇವರ ಮುಖ್ಯ ಕಸುಬಾಗಿದೆ. ಇವರು ತಯಾರಿಸಿರುವ ಕೆಲವು ಸಾಧನಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ.


1. ಬ್ರಶ್‌ಕಟರ್/ಪವರ್‌ವೀಡರ್‌ಅಟಾಚ್‌ಮೆಂಟ್:- ಎಲ್ಲರಿಗೂ ತಲೆನೋವಾಗಿ ಪರಿಣಮಿಸಿದ ಕೂಲಿಗಾರ ಸಮಸ್ಯೆಗೆ ಸತೀಶ್‌ರವರು ತಮ್ಮದೇ ಆದಂತಹ ರೀತಿಯಲ್ಲಿ ಪರಿಹಾರವನ್ನು ಕಂಡುಕೊಂಡಿದ್ದಾರೆ. ಇವರು ತಯಾರಿಸಿರುವ ಬ್ರಶ್‌ಕಟರ್ ಅಟಾಚ್‌ಮೆಂಟ್ ಕಳೆ ತೆಗೆಯಲು ಹಾಗೂ ಭತ್ತದ ಪೈರನ್ನು ಕತ್ತರಿಸಲು ಉಪಯೋಗಿಸಲಾಗುತ್ತದೆ. ಹುಲ್ಲು ಅಥವಾ ಭತ್ತ ಸವರುವಾಗ ಅದು ಹರಡಿಬಿದ್ದು ಹಾಳಾಗುವುದನ್ನು ತಡೆಯುತ್ತದೆ ಮತ್ತು ಒಟ್ಟು ಗೂಡಿಸುವ ಕೆಲಸವನ್ನು ಅಟಾಚ್‌ಮೆಂಟ್ ಮಾಡುತ್ತದೆ. ಈ ಸಾಧನವನ್ನು ಸತೀಶ್‌ರವರು 3-4 ವರ್ಷಗಳಿಂದ ಬಳಸುತ್ತಿದ್ದಾರೆ.



2. ಕಾಯಿ ಕತ್ತರಿಸುವ ಕತ್ತರಿ :- ನುಸಿಪೀಡೆಯ ತೆಂಗಿನ ಕಾಯಿಗಳನ್ನು ಸುಲಿಯುವುದು ತುಂಬಾ ಪ್ರಯಾಸದ ಕೆಲಸ, ಇಂತಹ ಕಾಯಿಗಳನ್ನು ಸತೀಶ್‌ರವರು ತಯಾರಿಸಿರುವ ಕತ್ತರಿಯಲ್ಲಿ ಸುಲಭವಾಗಿ ಕತ್ತರಿಸಬಹುದು. ಇಂತಹ ಕಾಯಿಗಳನ್ನು ಒಣಗಿಸಲು ಹಾಕಿದಾಗ ಭಾರವಿರುವುದರಿಂದ ಕಾಗೆಗಳಿಗೆ ಇವುಗಳನ್ನು ತೆಗೆದುಕೊಂಡು ಹೋಗಲಿಕ್ಕಾಗುವುದಿಲ್ಲ, ಕರಟ ಹೊಂದಿದ ಸಿಪ್ಪೆ ಉತ್ತಮ ಉರುವಲಾಗಿ ಬಳಕೆಯಾಗುತ್ತದೆ. ಈ ಸಾಧನವನ್ನು ಸದ್ಯ 6-8 ಜನ ಬಳಸುತ್ತಿದ್ದಾರಂತೆ. ಹೆಚ್ಚಿನ ಪ್ರಮಾಣದ ಕಾಯಿ ಕತ್ತರಿಸಬೇಕಾದಲ್ಲಿ ಪವರ್ ಡ್ರೈವ್ ಮಾಡಿಕೊಳ್ಳಬಹುದು.



3. ಬದುಗಳ ಸನಿಹ ಉಳುಮೆ ಮಾಡುವುದು.:- ಸತೀಶ್‌ರವರು 18 ಎಚ್.ಪಿ. ಸಾಮರ್ಥ್ಯದ ಮಿನಿ ಟ್ರ್ಯಾಕ್ಟರ್‌ನ ಹೊಂದಿದ್ದು, ಕಬ್ಬು , ಭತ್ತದ ಕೃಷಿಯನ್ನು ಮಾಡುತ್ತಾರೆ. ಇಲ್ಲಿನ ಜಮೀನುಗಳು ಹಳ್ಳ, ದಿಣ್ಣೆ ಉಬ್ಬು ತಗ್ಗುಗಳಿಂದ ಕೂಡಿವೆ. ಟ್ರ್ಯಾಕ್ಟರ್, ಟಿಲ್ಲರ್ ಬಳಸಿ ಉಳುಮೆಮಾಡುವುದಕ್ಕೆ ಹೆಚ್ಚಿನ ನಿಪುಣತೆ ಬೇಕು. ಜಮೀನಿನ ಬದುಗಳ ಸನಿಹ ಉಳುಮೆ ಮಾಡುವಾಗ ಮಿನಿ ಟ್ರ್ಯಾಕ್ಟರ್‌ನ ಹಿಂಬದಿಯ ಎರಡು ಗಾಲಿಗಳಲ್ಲಿ ಒಂದು ಗಾಲಿ ಬದು ಏರುತ್ತಿತ್ತು. ಆಗ ಟ್ರ್ಯಾಕ್ಟರ್‌ನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಕಷ್ಟವಾಗುತ್ತಿತ್ತು. ಒಮ್ಮೊಮ್ಮೆ ಗಾಲಿಯ ಆ್ಯಕ್ಸೆಲ್ ಮುರಿಯುತ್ತಿತ್ತು.ಇದರಿಂದಾಗಿ ಬದುವಿನ ಪಕ್ಕದಲ್ಲಿ ಒಂದೂವರೆ ಅಡಿಯಷ್ಟು ಜಾಗ ಬಳಕೆಯಾಗಲಿಲ್ಲವೆಂದರೆ ಭಾರಿ ನಷ್ಟ ಇದನ್ನು ಸರಿಪಡಿಸಿಕೊಳ್ಳಲು ಯೋಚಿಸಿದ ಸತೀಶ್‌ರವರು ವರ್ಕಶಾಪ್ ನವರ ಸಹಾಯದಿಂದ ಉದ್ದನೆಯ ಗುದ್ದಲಿ ತರಹದ ವಿನ್ಯಾಸವೊಂದನ್ನು ರೂಪಿಸಿದ್ದಾರೆ. ಪ್ಲೋಟ್ ಎಂದು ಕರೆದಿರುವ ಈ ಸಾಧನವನ್ನು ಮಿನಿ ಟ್ರ್ಯಾಕ್ಟರ್ ಹಿಂದುಗಡೆ ಅಳವಡಿಸಿದ್ದಾರೆ. ಇದು ಉಳುಮೆ ಸಾಧನವನ್ನು ತೇಲುವ ಸ್ಥಿತಿಯಲ್ಲಿಡಲು ಸಹಾಯವಾಗುತ್ತದೆ. ಇದರ ಮೂಲಕ ಉಳುಮೆ ಸಾಧನವನ್ನು ಅಗತ್ಯಕ್ಕೆ ತಕ್ಕಂತೆ ಏರಿಸಿ ಇಳಿಸಬಹುದು, ಉಳುಮೆಯ ಆಳವನ್ನು ಹೊಂದಿಸಿಕೊಳ್ಳಬಹುದು ಹಾಗೂ ಬದುವಿಗೆ ತಾಗಿದಂತೆ ಉಳುಮೆಯನ್ನೂ ಮಾಡಬಹುದು ಎಂದು ಹೇಳಿದ್ದಾರೆ.



4. ಭತ್ತ ತೂರುವಿಕೆಗೆ ಫ್ಯಾನ್ :- ಹಳ್ಳಿಗಳಲ್ಲಿ ರೈತರು, ದವಸ, ಧಾನ್ಯಗಳನ್ನು ಸ್ವಚ್ಛಗೊಳಿಸಲು ಕೆಲವು ಸಂದರ್ಭಗಳಲ್ಲಿ ಗಾಳಿಯ ಸಹಾಯವನ್ನು ಪಡೆಯುತ್ತಾರೆ. ಹೀಗೆ ಗಾಳಿ ಬರುವುದನ್ನೇ ಕಾಯುತ್ತ ಕೂರುವುದರಿಂದ ಅಮೂಲ್ಯ ಸಮಯ ವ್ಯರ್ಥವಾಗುತ್ತದೆ. ಈ ಕಾರಣಕ್ಕಾಗಿ ಅಧಿಕ ಪ್ರಮಾಣದಲ್ಲಿ ಭತ್ತ ಬೆಳೆಯುವ ಸತೀಶ್‌ರವರು ದೊಡ್ಡ ದೊಡ್ಡ ರೆಕ್ಕೆಯುಳ್ಳ ಕೃತಕ ಫ್ಯಾನನ್ನು ವಿನ್ಯಾಸ ಮಾಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ದಿನದ ಬಹುಪಾಲು ಅವಧಿ ವಿದ್ಯುತ್ ಸರಬರಾಜು ಆಗದಿರುವುದರಿಂದ ಮಿನಿ ಟ್ರ್ಯಾಕ್ಟರ್‌ಗೆ ಇದರ ಸಂಪರ್ಕ ಕಲ್ಪಿಸಿದ್ದಾರೆ. ಇದಕ್ಕಾಗಿ ಅವರು ಮಿನಿ ಟ್ರ್ಯಾಕ್ಟರ್‌ಗೆ ಫ್ಯಾನ್‌ನ ಪಿ.ಟಿ.ಯು. ಸಾಫ್ಟ್ ಬೆಲ್ಟ್ ಅಳವಡಿಸಿ ಫ್ಯಾನ್‌ಗೆ ಸಂಪರ್ಕ ಕಲ್ಪಿಸಿದ್ದಾರೆ. ಟ್ಯಾಕ್ಟರ್‌ನ್ನು ಒಂದೆಡೆ ನಿಲ್ಲಿಸಿ ಎಂಜಿನ್ ಚಾಲನೆಗೊಳಿಸಿ ಎಕ್ಸಿಲರೇಟರ್ ನೀಡಿದರೆ ಫ್ಯಾನ್ ತಿರುಗುತ್ತದೆ. ದೊಡ್ಡ ಫ್ಯಾನ್ ಆಗಿರುವುದರಿಂದ ಗಾಳಿ ಚೆನ್ನಾಗಿ ಬೀಸುತ್ತದೆ. ಇದರ ಸಹಾಯದಿಂದ 6 ಅಡಿ ಎತ್ತರದವರೆಗೂ ಭತ್ತ ತೂರಲು ಅನುಕೂಲ. ಎಕ್ಸಿಲರೇಟರ್‌ನ್ನು ಅಗತ್ಯದಷ್ಟೇ ವೇಗಕ್ಕೆ ಹೊಂದಾಣಿಕೆ ಮಾಡಬಹುದು ಎಂದು ಸತೀಶ್‌ರವರು ಹೇಳಿದ್ದಾರೆ. *ಇನ್ನೂ ಹೆಚ್ಚಿನ ಮಾಹಿತಿಗೆ ಸತೀಶ್‌ರವರನ್ನು 08384279255 ನ ಮೂಲಕ ಸಂಪರ್ಕಿಸಬಹುದು.*

ಮೂಲ :ಕುಮಾರ್ ರೈತ, ಉದಯವಾಣಿ, 3 ಮಾರ್ಚ 2008

ರವಿಶಂಕರರ ನಾಟಿ ವೈದ್ಯ ಪದ್ಧತಿ

ಹಾಸನ ಜಿಲ್ಲೆ ಬ್ಯಾಟರಹಳ್ಳಿ ಗ್ರಾಮದ ಶ್ರೀಯುತ ರವಿಶಂಕರ ಮೂಲತಃ ಕೃಷಿಕರು. ಇವರು ಪಾರಂಪರಿಕ ನಾಟಿ ವೈದ್ಯರು ಕೂಡ. ರವಿಶಂಕರ್ ಚಿಕ್ಕಂದಿನಿಂದಲೇ ಅಜ್ಜ ತಂದೆಯವರು ಹೇಳಿದ ಗಿಡಮೂಲಿಕೆ ತರಲು ಹದಗೊಳಿಸಲು, ಮಿಶ್ರಣ ಮಾಡಲು ಸಹಾಯ ಮಾಡುತ್ತಾ ನಾಟಿ ವೈದ್ಯ ಪದ್ಧತಿಯನ್ನು ರೂಢಿಸಿಕೊಂಡರು. ಐವತ್ತು ವರ್ಷ ದಾಟಿದ ಇವರು ಜನಸಾಮಾನ್ಯರಿಗೆ ನಾಟಿ ಔಷಧಿಯನ್ನು ನೀಡುತ್ತಿರುವರು ಮತ್ತು ಬೇರೆಯವರಿಗೂ ಈ ಪದ್ಧತಿಗಳನ್ನು ಪರಿಚಯಿಸುತ್ತಿದ್ದಾರೆ.ಇವರ ಕೆಲ ಪದ್ಧತಿಗಳನ್ನು ಕೆಳಗೆ ಕೊಡಲಾಗಿದೆ.

ಕೆಮ್ಮು, ಕಫ, ಮೂಳೆ ದುರ್ಬಲತೆ, ಮೈಕೈ ನೋವು, ಆಲಸ್ಯ ಇಂತಹ ಕಾಯಿಲೆಗಳಿಗೆ ಒಂದು ಗ್ರಾಂ ಅಳಲೇಕಾಯಿ ಪುಡಿ, 4 ಗ್ರಾಂ ಜೇನು ತುಪ್ಪ ಮಿಶ್ರಣ ಮಾಡಿ ಬೆಳಿಗ್ಗೆ ಖಾಲಿ ಹೊಟ್ಟೆಗೆ ಸಂಜೆ ಊಟಕ್ಕೆ ಒಂದು ಗಂಟೆ ಮುಂಚೆ ತೆಗೆದುಕೊಳ್ಳುವುದು. ಹೀಗೆ ನಾಲ್ಕೈದು ದಿನ ಸೇವಿಸಿದರೆ ಈ ಖಾಯಿಲೆಗಳು ವಾಸಿಯಾಗುತ್ತವೆ ಎನ್ನುವರು.

ಜ್ವರ ಬಂದರೆ ಅಳಲೇ ಮರದ ತೊಗಟೆಯನ್ನು ಜಜ್ಜಿ ಸ್ವಲ್ಪ ರಸ ತೆಗೆದು, ವಗರು ಇರುವ ಈ ರಸವನ್ನು 5 ಗ್ರಾಂ ನಂತೆ ಬೆಳಿಗ್ಗೆ ಸಂಜೆ ತೆಗೆದುಕೊಳ್ಳುವುದರಿಂದ ಜ್ವರ ಕಡಿಮೆಯಾಗುತ್ತದೆ ಎನ್ನುವರು.

ಸಕ್ಕರೆ ಕಾಯಿಲೆ ಇರುವವರು ಮಧುನಾಶಿನಿಯ ಎರಡು ಎಲೆಗಳನ್ನು ಬೆಳಿಗ್ಗೆ ಖಾಲಿ ಹೊಟ್ಟೆಗೆ ಮತ್ತೆ ಸಂಜೆ ಎರಡು ಬಾರಿ ತಿನ್ನುವುದು. ಹೀಗೆ ನಾಲ್ಕೈದು ದಿನ ತೆಗೆದು ಕೊಂಡರೆ ಸಾಕೆನ್ನುವರು. ನಂತರ ಸಕ್ಕರೆ ಕಾಯಿಲೆ ಇದೆಯೇ ಇಲ್ಲವೂ ಎಂದು ಸುಲಭವಾಗಿ ಸ್ವತಃ ಪರೀಕ್ಷಿಸಿಕೊಳ್ಳಬಹುದೆನ್ನುವರು. ಇದು ಹೇಗೆಂದರೆ ಸಿಹಿ ಪದಾರ್ಥಗಳನ್ನು ತಿಂದಾಗ ಸಿಹಿ ಆದರೆ ಸಕ್ಕರೆ ಖಾಯಿಲೆ ಇನ್ನೂ ಇದೆ ಎಂದರ್ಥ. ಸಿಹಿ ಆಗಿಲ್ಲವೆಂದರೆ ಸಕ್ಕರೆ ಖಾಯಿಲೆ ವಾಸಿಯಾಗಿದೆ ಎಂದು ಅರ್ಥ. ಹೀಗೆ ಪದಾರ್ಥ ಸಿಹಿಯಾದರೆ ಔಷಧ ಮುಂದುವರೆಸಬೇಕು ಮತ್ತೆ ನಾಲ್ಕೈದು ದಿನ ಬಿಟ್ಟು ಪರೀಕ್ಷಿಸಿಕೊಳ್ಳಬೇಕು, ಪದಾರ್ಥ ಸಿಹಿಯಾಗಿಲ್ಲ ಎಂದರೆ ಔಷಧಿ ಮುಂದುವರಿಸುವುದು ಬೇಡ ಎಂದು ರವಿಶಂಕರ ತಿಳಿಸುವರು.

ಹುಣಸೆಯ ಔಷಧೀಯ ಗುಣಗಳು

ಹುಣಸೆ ರಸಕ್ಕೆ ಅಜೀರ್ಣ ಮತ್ತು ಮಲಬದ್ಧತೆ, ದೇಹದ ಕೊಬ್ಬಿನಾಂಶವನ್ನು ಕಡಿಮೆ ಮಾಡುವ ಶಕ್ತಿ ಇದೆಯಂತೆ. ಕುದಿಸಿದ ಹುಣಸೇ ರಸವನ್ನು ಒಂದು ಲೋಟ ಹಾಲಿನೊಂದಿಗೆ ಕುಡಿದರೆ ದೇಹಕ್ಕೆ ತಂಪು ಕೊಡುವುದರ ಜೊತೆಗೆ ಗಂಟಲಿನ ತೊಂದರೆ ನಿವಾರಿಸುತ್ತದೆ. ಹುಣಸೆ ಎಲೆ ಅರೆದು ಬಾವು ಅಥವಾ ಊತವಿರುವ ಭಾಗಕ್ಕೆ ಲೇಪಿಸಿದರೆ ತೊಂದರೆ ನಿವಾರಿಣೆಯಾಗುತ್ತದೆ. ಹುಣಸೆ ಬೀಜವನ್ನು ಹುರಿದು ಪುಡಿ ಮಾಡಿ ನೀರಿನೊಂದಿಗೆ ಕುದಿಸುವುದರಿಂದ ಗಂಜಿ ತರಹದ ಪದಾರ್ಥ ತಯಾರಾಗುತ್ತದೆ. ಇದೇ ರಸಕ್ಕೆ ಜೀರಿಗೆ, ಸಕ್ಕರೆ ಬೆರೆಸಿ ಕುಡಿಯುವುದರಿಂದ ಅತಿಸಾರ ಭೇದಿಯನ್ನು ನಿಯಂತ್ರಿಸಬಹುದು. ಕಣ್ಣು ಸೊಂಕು ಆದಾಗ ಹುಣಸೆ ಎಲೆ ಅಥವಾ ಅದರ ಹೂ ಹತ್ತು ಗ್ರಾಂ ಅನ್ನು 100 ಮಿ.ಲಿ. ನೀರಿನಲ್ಲಿ ಕುದಿಸಿ ಶೋಧಿಸಿದ ಆ ರಸದಿಂದ ಕಣ್ಣು ತೊಳೆದರೆ ಸೊಂಕು ನಿವಾರಣೆಯಾಗುತ್ತದೆ.

ಮೂಲ: ವಾಣಿಶ್ರೀ ಎಸ್. ಕೃಷಿ ಕಾಮಧೇನು, ಡಿಸೆಂಬರ್ 2011

ಭಗಿನಿ ಗ್ಲ್ಯಾಡಿಸ್ ಅವರ ನಾಟಿ ವೈದ್ಯ ಪದ್ಧತಿ

ಭಗಿನಿ ಗ್ಲ್ಯಾಡಿಸ್ ಮುಖ್ಯೋಪಾಧ್ಯಾಯಿನಿಯಾಗಿದ್ದು ನಿವೃತ್ತರಾದ ಮೇಲೆ ಸುಳ್ಯ ತಾಲೂಕು ಕಲ್ಲುಗುಂಡಿ ಗ್ರಾಮದಲ್ಲಿ ಅನುಗ್ರಹ ಹೆಸರಿನಲ್ಲಿ ಆರೋಗ್ಯ ಮತ್ತು ಸಮಾಜ ಸೇವಾ ಕೇಂದ್ರವನ್ನು ತೆರೆದಿರುವರು. ಈ ಕೇಂದ್ರದ 20 ಸೆಂಟ್ಸ್ ಜಾಗದಲ್ಲಿ ಅವರ ಕೈತೋಟವಿದೆ. ಇದರಲ್ಲಿ ನೂರಾರು ಜಾತಿಯ ಗಿಡ ಮೂಲಿಕೆಗಳನ್ನು ಬೆಳೆದಿರುವರು. ಸೋರಿಯಾಸಿಸ್, ತುರಿಕೆ, ಕೂದಲು ಉದುರುವುದು, ಕಣ್ಣುರಿ, ತಲೆಹೊಟ್ಟು, ತಲೆಸಿಡಿತ, ನಿದ್ರಾಹೀನತೆ, ಬಾಲನೆರೆ, ಜ್ವರ, ಚರ್ಮವ್ಯಾಧಿ ,ಡಯಾಬಿಟೀಸ್, ನೆನಪಿನ ಶಕ್ತಿಗೆ, ಇನ್ನೂ ಹಲವು ಕಾಯಿಲೆಗೆ ಗಿಡಗಳನ್ನು ಬೆಳೆಸಿರುವರು. ಈ ನಾಟಿ ವೈದ್ಯರು ಬೆನ್ನು, ಸೊಂಟ ನೋವುಗಳಿಗೆ ಎಣ್ಣೆ ತಿಕ್ಕಿ ನೋವು ವಾಸಿ ಮಾಡುವುದು ಇವರ ಇನ್ನೊಂದು ವಿಶೇಷ. ಈ ಚಿಕಿತ್ಸೆಗೆ ಕಿಂಚಿತ್ತೂ ಹಣ ಪಡೆಯುವುದಿಲ್ಲ, ರಕ್ತಹೀನತೆಗೆ ಅವರು ತಯಾರಿಸಿ ಕೊಡುವ ಲೇಹ್ಯ ತುಂಬ ಪರಿಣಾಮಕಾರಿ. ಎಣ್ಣೆ ತಯಾರಿಕೆಗೆ ಹೆಚ್ಚು ಖರ್ಚಾಗುವುದರಿಂದ ಅದಕ್ಕೆ ರೋಗಿಗಳು ಕೊಟ್ಟಷ್ಟು ಹಣವನ್ನು ಮಾತ್ರ ಪಡೆಯುತ್ತಾರೆ. ಸಮಾಜದ ಎಲ್ಲಾ ಜನರು ಆರೋಗ್ಯದಿಂದಿರಬೇಕು ಎಂಬುದೇ ಗ್ಲ್ಯಾಡಿಸ್ ಅವರ ಆಶಯ. ಜಿಲ್ಲೆಯ ಜನರಲ್ಲದೆ ಹೊರ ರಾಜ್ಯದವರೂ ಬರುತ್ತಾರೆ. ವಿದೇಶಗಳಲ್ಲಿ ನೆಲಸಿರುವ ದಕ್ಷಿಣ ಕನ್ನಡ ಜಿಲ್ಲೆಯ ಜನರು ಇವರಿಂದ ಎಣ್ಣೆ ತರಿಸಿಕೊಳ್ಳುತ್ತಾರೆ. ಇವರ

ದೂರವಾಣಿ ಸಂಖ್ಯೆ : 08257-266782

ಮೂಲ: ಸಹನಾ ಕಾಂತಬೈಲು, ಪ್ರಜಾವಾಣಿ -14 ಮೇ,2009

ದಾಳಿಂಬೆಯ ಔಷಧೀಯ ಗುಣಗಳು

ದಾಳಿಂಬೆ ತಿನ್ನಲು ರುಚಿಕರ. ಇದರಲ್ಲಿ ರಂಜಕ, ಸುಣ್ಣ, ಕಬ್ಬಿಣ ಅಂಶಗಳು ಸಾಕಷ್ಟಿವೆ. ಬಿ ಮತ್ತು ಸಿ ಜೀವಸತ್ವ ಕೂಡ ಅಧಿಕವಾಗಿವೆ. ಇತ್ತೀಚಿಗೆ ದಾಳಿಂಬೆ ಮೇಲೆ ನಡೆಸಲಾದ ಅಧ್ಯಯನದ ಪ್ರಕಾರ ಮೂತ್ರಕೋಶದ ರೋಗ, ಹೃದಯರೋಗ, ರಕ್ತದೊತ್ತಡ, ನರದೌರ್ಬಲ್ಯ, ಸ್ತನ ಕ್ಯಾನ್ಸರ್‌ಗಳಂತಹ ಗಂಭೀರ ಕಾಯಿಲೆಗಳಿಗೂ ದಾಳಿಂಬೆಯ ಹಣ್ಣು ಸೇವನೆಯಿಂದ ಗುಣಮುಖವಾಗಬಹುದು ಎಂದು ತಿಳಿದು ಬಂದಿರುತ್ತದೆ. ಹಾಗೇ ಜೀರ್ಣಶಕ್ತಿ ಮತ್ತು ತಲೆ ಹೊಟ್ಟಿಗೆ ಇದರ ಹಣ್ಣಿನ ಸಿಪ್ಪೆ ಮತ್ತು ಎಲೆ ರಸ ಉತ್ತಮ ಪರಿಹಾರವಾಗಲಿದೆ. ದಾಳಿಂಬೆ ಹಣ್ಣು ಬಳಕೆಯಿಂದ ಮಧುಮೇಹಕ್ಕೆ ಮತ್ತು ಕೂದಲು ಉದರುವುದಕ್ಕೆ ಪರಿಹಾರ ದೊರಕುತ್ತದೆಯಂತೆ. ಈ ಹಣ್ಣಿನ ಬೀಜ ಅರೆದು ಅದಕ್ಕೆ ಒಂದು ಚಮಚ ಜೇನುತುಪ್ಪ ಸೇರಿಸಿ ತಣ್ಣೀರಿನೊಂದಿಗೆ ಬೆರೆಸಿ ಕುಡಿದರೆ ಆಮಶಂಕೆ ಬೇಧಿ ನಿಲ್ಲುವುದು. ಇದರ ದಿಂಡನ್ನು ಕುದಿಸಿ ಕಷಾಯ ತಯಾರಿಸಿ ಕುಡಿದರೆ ಗಂಟಲುನೋವು, ಬಾಯಿಹುಣ್ಣು, ಹಲ್ಲುನೋವು, ಗುಣವಾಗುವುದೆಂದು ಅಧ್ಯಯನದಿಂದ ತಿಳಿದುಬಂದಿದೆ.

ಮೂಲ : ಜಾನಕಿ.ವಿ. ಕೃಷಿ ಕಾಮಧೇನು, ಡಿಸೆಂಬರ್ 2011

ಒಡೆದ ಹಿಮ್ಮಡಿ ಉಪಶಮನಕ್ಕೆ

ಕೆಲವೊಂದು ಕಾಲಮಾನ ಕೆಲ ವಾತಾವರಣದಲ್ಲಿ ಮಾನವರ ಕಾಲಿನ ಹಿಮ್ಮಡಿ ಒಡೆಯುವುದು ಸಾಮಾನ್ಯ. ಅಲ್ಲದೆ ರಕ್ತ ಕೂಡ ಬಂದು ನೋವು ಶುರುವಾಗಿ ಆ ಭಾಗ ಗಟ್ಟಿಯಾಗುವುದು. ಇದರ ಉಪಶಮನಕ್ಕೆ ಮನೆಯಲ್ಲಿಯೇ ಇರುವ ಪದಾರ್ಥಗಳನ್ನು ಬಳಸಿಕೊಳ್ಳಬಹುದು ಎಂದು ಹಾವೇರಿಯ ಅಶೋಕ್ ಕುಮಾರ್ ಅವರು ಹೇಳುತ್ತಾರೆ. ಎರಡು ಗ್ರಾಂ ಹರಳೆಣ್ಣೆ ,ಒಂದು ಗ್ರಾಂ ಸುಣ್ಣ ಮಿಶ್ರಣ ಮಾಡಿ ಹಿಮ್ಮಡಿ ಒಡೆದ ಜಾಗಕ್ಕೆ ಹಚ್ಚಬೇಕು, ಎರಡು ಮೂರು ದಿನದಲ್ಲಿ ವಾಸಿಯಾಗುವದರ ಜೊತೆಗೆ ಹಿಮ್ಮಡಿ ಮೃದುವಾಗುತ್ತದೆ ಎನ್ನುವುದು ಅವರ ಅನುಭವ

ಹಸುಗಳಲ್ಲಿ ಹಸಿವಿಲ್ಲದಿರುವಿಕೆಗೆ

ಕೆಲವು ಬಾರಿ ಹಸುಗಳು ಮೇವನ್ನು ತಿನ್ನಲಾರದೆ ಮೆಲುಕು ಹಾಕದೆ ನಿರಾಸಕ್ತಿತೆಯಿಂದ ಕೂಡಿರುತ್ತವೆ. ಈ ರೀತಿಯ ಹಸುಗಳನ್ನು ಉಪಚರಿಸಲು ತಮಿಳುನಾಡಿನ, ಈರೋಡ್ ಜಿಲ್ಲೆಯ ಪುಟ್ಟಾ ಮತ್ತು ಅನಿಲ್‌ರವರು 50 ಗ್ರಾಂ ಬೇವಿನ (*Azadirachta indica A.Juss*) ಗಿಡದ ತೊಗಟೆ, 50 ಗ್ರಾಂ, ಪರೇರಾಬೇರು (*cissampelos pareira L.*) ಗಿಡದ ಎಲೆಗಳು, ಕರಿಮೆಣಸು, ಬೆಳ್ಳುಳ್ಳಿ ಗಡ್ಡೆ, ಶುಂಠಿ ಮತ್ತು ಹಿಪ್ಪಲಿ (*piper longum L.*).ಇವುಗಳನ್ನು ನೀರಿನೊಂದಿಗೆ ಅರೆದು ಚೂರ್ಣ ತಯಾರಿಸಿಕೊಳ್ಳುತ್ತಾರೆ. ಇದನ್ನು ಹಸುವಿಗೆ ದಿನಕ್ಕೆ ಎರಡು ಬಾರಿಯಂತೆ ಅದು ಗುಣಮುಖವಾಗುವವರೆಗೂ ಕೊಡುತ್ತಾರೆ.

ವೈಜ್ಞಾನಿಕ ಹಿನ್ನೆಲೆ:- ಬೇವಿನ ತೊಗಟೆಯನ್ನು ಆರೋಗ್ಯವರ್ಧಕವಾಗಿ ಉಪಯೋಗಿಸಲಾಗುತ್ತಿದೆಯೆಂದು ಈಗಾಗಲೇ ಪ್ರಕಟಿತವಾಗಿದೆ. ವಿವರಕ್ಕೆ Koushik Biswas et.al. (2002); current science ; volume 82 (11) pages 1336 -1345 ನೋಡಿರಿ. ಹಿಪ್ಪಲಿ ಗಿಡದ ಹಣ್ಣು ಮತ್ತು ಬೇರು ಇವುಗಳನ್ನು ಹಸಿವಿಲ್ಲದಿರುವುದಕ್ಕೆ ಉಪಯೋಗಿಸಲಾಗುತ್ತದೆ. ವಿವರಕ್ಕೆ shiddamallayya et.al. (2010);Indian Journal of Traditional Knowledge; volume 9(1); pages 96-99 ರಲ್ಲಿ ನೋಡಿರಿ.

ಕೆಮ್ಮು ಮತ್ತು ಜೇಡ ಕಡಿತಕ್ಕೆ

ಗುಜರಾತಿನ ಬರೋಡ ಜಿಲ್ಲೆಯ ಮೋಹನ್‌ಭಾಯಿಯವರು ಗಿಡ ಮೂಲಿಕೆಗಳ ಆಗಾಧ ಜ್ಞಾನವನ್ನು ಹೊಂದಿದ್ದು ಪ್ರಾಣಿಗಳ ಬಗ್ಗೆ ಹೆಚ್ಚು ಅನುಕಂಪವನ್ನು ಹೊಂದಿದ್ದಾರೆ. ಇವರು ಪ್ರಾಣಿಗಳಲ್ಲಿ ಕಂಡು ಬರುವ ಶೀತ ಮತ್ತು ಕೆಮ್ಮಿಗೆ ಚಿಕಿತ್ಸೆಯನ್ನು ನೀಡುತ್ತಾರೆ. ಇದಕ್ಕಾಗಿ ಅವರು 50 ಗ್ರಾಂ ಸ್ಫಟಿಕ, ಅಜ್ವಾನ (ಓಮ) (*Carum copticum L.*) ಮತ್ತು ನಿಂಬೆ ಹಣ್ಣಿನ ಎಲೆಗಳನ್ನು ನೀರಿನಲ್ಲಿ ಕುದಿಸಿ ಸೋಸಿಕೊಳ್ಳುತ್ತಾರೆ. ಈ ಕಷಾಯವನ್ನು ಬೆಳಿಗ್ಗೆ ಮತ್ತು ಸಾಯಂಕಾಲ ಐದು ದಿನಗಳವರೆಗೆ ಕೊಡುತ್ತಾರೆ. ಪ್ರಾಣಿಗಳಿಗೆ ಜೇಡವೇನಾದರೂ ಕಚ್ಚಿದರೆ ಆ ಜಾಗವು ಉರಿಯಿಂದ ಕೂಡಿದ್ದು ಜ್ವರ, ನಡುಕ, ಅಥವಾ ಪಕ್ಷಪಾತ ಕಾಣಿಸಿಕೊಳ್ಳಬಹುದು ಇದರ ಚಿಕಿತ್ಸೆಗಾಗಿ ಮೋಹನ್ ಭಾಯಿಯವರು ಹತ್ತಿ ಉಂಡೆಯ ಸಹಾಯದಿಂದ ಹುಣಸೆ ಹಣ್ಣಿನ ರಸವನ್ನು ಕಡಿದಿರುವಂತಹ ಜಾಗಕ್ಕೆ ಹಚ್ಚುತ್ತಾರೆ.

ವೈಜ್ಞಾನಿಕ ಹಿನ್ನೆಲೆ:- ಸ್ಫಟಿಕವನ್ನು ಕೆಮ್ಮಿಗೆ ಚಿಕಿತ್ಸೆ ನೀಡಲು ಉಪಯೋಗಿಸಲಾಗುತ್ತದೆಂದು ಈಗಾಗಲೇ Teernbeell et.al. (1944); The Journal of Pediatrics; volume 24 (1) pages 46-52 ರಲ್ಲಿ ಪ್ರಕಟವಾಗಿದೆ ಹಾಗೂ ಓಮ ಕಾಳುಗಳು ಕಫ ನಿವಾರಣೆ ಮಾಡುವಂತಹ ಗುಣಗಳನ್ನು ಹೊಂದಿವೆಯೆಂದು Boskabady et.al. (2005); J. Ethnopharmocal; volume 97(1) pages 79-82 ರಲ್ಲಿ ತಿಳಿಸಲಾಗಿದೆ.

ಅತಿಭೇದಿ ನಿಯಂತ್ರಣಕ್ಕೆ

ರಾಮಸಿಂಗ್‌ರವರು ಗುಜರಾತ್ ರಾಜ್ಯದ, ಪಂಚಮಹಲ್ ಜಿಲ್ಲೆಯುವರಾಗಿದ್ದಾರೆ. ಇವರು ಹಸುಗಳಿಗೆ ಅತಿಭೇದಿಯಾಗಿದ್ದಲ್ಲಿ ತಮ್ಮದೇ ಆದಂತಹ ವಿಧಾನದಿಂದ ಹತೋಟಿ ಮಾಡುತ್ತಾರೆ. ಇದಕ್ಕಾಗಿ ಅವರು 250 ಗ್ರಾಂ. ಕಗ್ಗಲಿ (ಕಾಚು) (*Acacea Catechu L.f.*) 250 ಗ್ರಾಂ. ಮುತ್ತುಗ (*Butea monosperma (Lam)*) ಮತ್ತು 250 ಗ್ರಾಂ. ಮುರ್ಕಲಿ (*Buchanania Lanzan Sprengel*) ಇವುಗಳ ಒಣಗಿರುವ ತೊಗಟೆಯ ಪುಡಿಯನ್ನು ಒಂದು ಲೀಟರ್ ನೀರಿನಲ್ಲಿ ಎರಡು ಗಂಟೆಗಳವರೆಗೆ ಕುದಿಸಿ ಸೋಸಿಕೊಳ್ಳುತ್ತಾರೆ. ಈ ಕಷಾಯವನ್ನು ದಿನಕ್ಕೆ ಮೂರು ಬಾರಿಯಂತೆ ಹಸುವು ಗುಣಮುಖವಾಗುವವರೆಗೂ ಕುಡಿಸುತ್ತಾರೆ.

ವೈಜ್ಞಾನಿಕ ಹಿನ್ನೆಲೆ:-ಕಗ್ಗಲಿ (ಕಾಚು) ಯಿಂದ ತೆಗೆದಿರುವಂತಹ ಕಷಾಯವನ್ನು ಅತಿಭೇದಿಯ ನಿಯಂತ್ರಣಕ್ಕೆ ಉಪಯೋಗಿಸಲಾಗುತ್ತದೆಂದು ಈಗಾಗಲೇ ತಿಳಿದು ಬಂದಿದೆ ವಿವರಕ್ಕೆ Ray D et.al (2006); Indian Journal of Pharmacology; volume 38 (6), pages 408-413 ರಲ್ಲಿ ನೋಡಿರಿ.

ಜಾರುವ ಗರ್ಭಾಶಯಕ್ಕೆ ಚಿಕಿತ್ಸೆ

ತಮಿಳುನಾಡಿನ ಈರೋಡ್ ಜಿಲ್ಲೆಯ ಮಾರಪ್ಪ ಗೌಡರ್‌ರವರು ಪಶು ವೈದ್ಯರಾಗಿದ್ದು ಗಿಡಮೂಲಿಕೆಗಳನ್ನು ಉಪಯೋಗಿಸಿಕೊಂಡು ಚಿಕಿತ್ಸೆಯನ್ನು ನೀಡುತ್ತಾರೆ. ಹಸುವೇನಾದರೂ ಗರ್ಭಾಶಯ ಜಾರುವ ತೊಂದರೆಯಿಂದ ಬಳಲುತ್ತಿದ್ದರೆ, ಇವರು ಮಾಡುವ ಮೊದಲ ಕೆಲಸವೇನೆಂದರೆ ಗರ್ಭಾಶಯವನ್ನು ನೀರಿನಿಂದ ಸ್ವಚ್ಛಗೊಳಿಸುತ್ತಾರೆ. ನಂತರ 100 ಗ್ರಾಂ. ಕಬ್ಬಿನ ಹಾಲನ್ನು ಅದರ ಮೇಲೆ ಚಿಮುಕಿಸಿ ಸುರಕ್ಷಿತವಾಗಿ ಒಳಗೆ ಸೇರಿಸುತ್ತಾರೆ. ಅಲ್ಲದೆ 500 ಗ್ರಾಂ ಗಳಷ್ಟು ಮುಟ್ಟಿದರೆ ಮುನಿ ಗಿಡದ (*Mimosa Pudica L.*) ತಾಜಾ ಎಲೆಗಳನ್ನು ಒಂದು ಅಥವಾ ಎರಡು ದಿನಗಳವರೆಗೆ ತಿನ್ನಿಸುತ್ತಾರೆ. ಹಾಗೂ ಹಸುವಿನ ಹಿಂಭಾಗವು ಎತ್ತರದಲ್ಲಿರುವ ಹಾಗೆ ಕೊಟ್ಟಿಗೆಯ ನೆಲವನ್ನು ಮಾರ್ಪಡಿಸಲಾಗುತ್ತದೆ ಎಂದು ಹೇಳಿದ್ದಾರೆ.

ವೈಜ್ಞಾನಿಕ ಹಿನ್ನೆಲೆ:-ಮುಟ್ಟಿದರೆ ಮುನಿ ಗಿಡವು ಗರ್ಭಾಶಯ ಜಾರುವಿಕೆಗೆ ಮತ್ತು ರಕ್ತಸ್ರಾವದ ಚಿಕಿತ್ಸೆಗೆ ತುಂಬ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆಂದು Shivananadaiah et.al. (2010); Journal of Ayurveda and Integrative medicine volume 1(2) ; pages 125-128 ರಲ್ಲಿ ತಿಳಿಸಲಾಗಿದೆ. ಹನಿ ಬೀ ಸಂಚಿಕೆ 7(1) ; 7, 1996 ರಲ್ಲಿಯೂ ಇದರ ಬಗ್ಗೆ ವಿವರಗಳನ್ನು ನೀಡಲಾಗಿದೆ.

ಹೊಟ್ಟೆ ಉಬ್ಬರಕ್ಕೆ

ಹೊಟ್ಟೆ ಉಬ್ಬರದಿಂದ ಹಸುಗಳು ಉಸಿರಾಡಲು ಪ್ರಯಾಸ ಪಡುತ್ತಿರುತ್ತವೆ. ಅದರ ಹೊಟ್ಟೆಯ ಮೇಲೆ ಕೈಯಿಂದ ತಟ್ಟಿದರೆ ಡ್ರಮ್‌ನಿಂದ ಹೊರಬರುವ ಶಬ್ದದ ತರಹ ಕೇಳಿಸುತ್ತದೆ. ಇದಕ್ಕೆ **ಪರಿಹಾರವಾಗಿ ತಮಿಳುನಾಡಿನ ಪಾಂಡುರಂಗನ್‌ನವರು** 25 ಗ್ರಾಂ ಕರಿಮೆಣಸು 20 ಗ್ರಾಂ ಮೆಣಸಿನಕಾಯಿ ಮತ್ತು 20 ಗ್ರಾಂ ಹೊಳೆ ತುಂಬೆ (*crateva adansoni DC.*) ಗಿಡದ ಎಲೆಗಳು ಇವುಗಳನ್ನು ಅರೆದು ಚೂರ್ಣ ತಯಾರಿಸಿಕೊಳ್ಳುತ್ತಾರೆ. ಇದನ್ನು ಉಂಡೆಯ ತರಹ ದಿನಕ್ಕೆ 3 ಬಾರಿ ಹಸುವಿಗೆ ಕೊಡುತ್ತಾರೆ.

ವೈಜ್ಞಾನಿಕ ಹಿನ್ನೆಲೆ:- ಹೊಳೆತುಂಬೆಯು ಉದರದ ಬೇನೆಗಳಿಗೆ ಉಪಯೋಗಿಸಲಾಗುತ್ತದೆಯೆಂದು ಈಗಾಗಲೇ ತಿಳಿದುಬಂದಿದೆ. ವಿವರಕ್ಕೆ Khare, C.P. (2007); Indian Med. Plants, Springer Publication ; ISBN ; 978-0-387-70637-5 ನೋಡಿರಿ ಹೊಟ್ಟೆ ಉಬ್ಬರಕ್ಕೆ ಕರಿಮೆಣಸನ್ನು ಉಪಯೋಗಿಸಲಾಗುತ್ತದೆ. ವಿವರಕ್ಕೆ Ganeshan et.al. (2008); Indian Journal of Traditional Knowledge; volume 7(2) : pages 347-354 ರಲ್ಲಿ ನೋಡಿರಿ.

ಸರ್ವಋತು ಅವರೆ

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸರ್ವಋತು ಅವರೆ ತಳಿಯೊಂದನ್ನು ಸಂಶೋಧಿಸಿದ್ದಾರೆ. ಅದನ್ನು ವರ್ಷದ ಉದ್ದಕ್ಕೂ ಬೆಳೆಯಬಹುದು. ಈ ತಳಿಯ ಹೆಸರು ಹೆಬ್ಬಾಳ ಅವರೆ-4 (ಎಚ್ ಎ 4) ಈ ಹಿಂದೆ ಬಿಡುಗಡೆ ಮಾಡಿದ್ದ ಎಚ್ ಎ 3 ತಳಿಗಿಂತ ಚಿಕ್ಕ ಗಾತ್ರದ ಕಾಯಿಗಳನ್ನು ಬಿಡುವುದು ಈ ತಳಿಯ ವಿಶೇಷ . ವರ್ಷದ ಎಲ್ಲಾ ತಿಂಗಳಲ್ಲೂ ಈ ಅವರೆಯನ್ನು ಬೆಳೆಯಬಹುದು. ಸಮತಟ್ಟಾದ ನೀರು ನಿಲ್ಲದ ಭೂಮಿಯಲ್ಲಿ ಉತ್ತಮ ಇಳುವರಿ ಕೊಡುತ್ತದೆ.

ಬಿತ್ತನೆ ಮಾಡಿದ 70 ರಿಂದ 75 ದಿನಗಳಲ್ಲಿ ಹಸಿ ಕಾಯಿಗಳನ್ನು ಹಾಗೂ 100 ರಿಂದ 105 ದಿನಗಳಲ್ಲಿ ಒಣ ಕಾಯಿಗಳನ್ನು ಕೊಯ್ಲು ಮಾಡಬಹುದು. ಪ್ರತಿ ಹೆಕ್ಟೇರ್‌ಗೆ 10-12 ಕ್ವಿಂಟಾಲ್ ಹಸಿ ಕಾಯಿ ಇಳುವರಿ ಪಡೆಯಬಹುದು. ಹೆಕ್ಟೇರ್‌ಗೆ 30 ಕೆ.ಜಿ. ಬಿತ್ತನೆ ಬೀಜ ಬೇಕಾಗುತ್ತದೆ. ಈ ತಳಿಯನ್ನು ಡಿಸೆಂಬರ್ ಹಾಗೂ ಜನವರಿ ಹೊರತುಪಡಿಸಿ ವರ್ಷದ ಯಾವ ತಿಂಗಳಲ್ಲಾದರೂ **ಬೆಳೆಯಬಹುದು.**

ಮಾಹಿತಿ :-. ಡಾ.ಎಂ. ಭೈರೇಗೌಡ ಮೊಬೈಲ್ : 9741414657

ನವರ - ಔಷಧೀಯ ಅಕ್ಕಿ

ಔಷಧೀಯ ಗುಣಗಳಿರುವ ಭತ್ತಗಳಲ್ಲೊಂದಾದ ನವರ ಇತ್ತೀಚೆಗೆ ಅಧಿಕ ಬೇಡಿಕೆ ಪಡೆದುಕೊಳ್ಳುತ್ತಿದೆ. ನೂರು ದಿನಗಳ ಅವಧಿಯ ನವರ ವರ್ಷದ ಎಲ್ಲ ಕಾಲದಲ್ಲೂ ಬೆಳೆಯುವಂಥದು. ಮೂಲತಃ ಇದು ಕೇರಳದ ತಳಿ. ಆಯುರ್ವೇದದಲ್ಲಿ ಈ ಅಕ್ಕಿಯನ್ನು ಚೈತನ್ಯದಾಯಕ, ದುರ್ಬಲ ದೇಹಕ್ಕೆ ಔಷಧಿ ಎಂದೆಲ್ಲ ಬಣ್ಣಿಸಲಾಗಿದೆ. ಹಲವು ಬಗೆಯ ರೋಗ ನಿವಾರಕಗಳಲ್ಲಿ ನವರವನ್ನು ಪ್ರಧಾನ ಘಟಕವನ್ನಾಗಿ ಬಳಸುವುದೂ ಉಂಟು. ಈ ಅಕ್ಕಿಯನ್ನು ಹತ್ತು ತಾಸು ನೀರಿನಲ್ಲಿ ನೆನೆಸಿದ ನಂತರ ಅನ್ನ ಮಾಡಿದರೆ ಮಾತ್ರ ಇದರ ಔಷಧೀಯ ಗುಣ ಹೆಚ್ಚಾಗುತ್ತದೆ ಎನ್ನುವರು ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕಕ್ಕೆರಾದ ರೈತ ದೇವೇಂದ್ರಪ್ಪ. ಈ ಅಕ್ಕಿಯ ಅನ್ನ ಸೇವಿಸುವುದರಿಂದ ಯಾವುದೇ ತರಹದ ನೋವಿದ್ದರೂ ವಾಸಿಯಾಗುತ್ತದೆ ಮತ್ತು ಇದು ಬೊಜ್ಜು ಕರಗಿಸುವ ಗುಣವನ್ನೂ ಹೊಂದಿದೆ. ಇದನ್ನು ಹೆಚ್ಚು ಖರ್ಚಿಲ್ಲದೆ ಬೆಳೆಯಬಹುದು.

ನವರದಲ್ಲಿ ಕಪ್ಪು ಮತ್ತು ಬಿಳಿ ಸಿಪ್ಪೆಯ ಎರಡು ತಳಿಗಳಿವೆ. ಈ ಅಕ್ಕಿಯ ಅನ್ನ ಸೇವಿಸಿದರೆ ಕೀಲು ನೋವು ಗುಣಮುಖವಾಗುತ್ತದೆ. ಕೇರಳ ಮೂಲದ ಈ ಭತ್ತವನ್ನು ಈಗ ಕರ್ನಾಟಕದ ರೈತರೂ ಬೆಳೆಯುತ್ತಿದಾರೆ. ಮೈಸೂರು, ಚಿತ್ರದುರ್ಗ,ಚಾಮರಾಜನಗರ ಮಾತ್ರವಲ್ಲದೇ ಮಹಾರಾಷ್ಟ್ರ, ಆಂಧ್ರದಿಂದಲೂ ನವರ ಅಕ್ಕಿಗೆ ಬೇಡಿಕೆ ಬಂದಿದೆ. *ಇನ್ನೂ ಹೆಚ್ಚಿನ ಮಾಹಿತಿಗೆ ದೇವೇಂದ್ರಪ್ಪನವರನ್ನು 9900833350 ರ ಮೂಲಕ ಸಂಪರ್ಕಿಸಬಹುದು.*

ವರದಿ - ಆನಂದ ತೀರ್ಥ ಪ್ಯಾಟಿ.

ನಕ್ಷತ್ರ ನೇರಳೆ ಹಣ್ಣು

ಜಂಬು ನೇರಳೆ ಅಥವಾ ಪನ್ನೇರಳೆ ಜಾತಿಗೆ ಸೇರಿದ ಗಿಡದ ಹಣ್ಣು. ಇದು ನಕ್ಷತ್ರದ ಆಕಾರ ಹೊಂದಿದ್ದು ನಸು ನೇರಳೆ ಬಣ್ಣದಿಂದ ಕೂಡಿರುತ್ತದೆ. ಅದಕ್ಕಾಗಿಯೇ ಈ ಹಣ್ಣನ್ನು ನಕ್ಷತ್ರ ನೇರಳೆ ಎಂದು ಕರೆಯುವರು. ಈ ನೇರಳೆ ಹಣ್ಣಿನ ಗಿಡವು ಬಹಳ ಎತ್ತರಕ್ಕೆ ಬೆಳೆಯುವುದಿಲ್ಲ. ಇದರ ಎಲೆಗಳು ವರ್ಷವೆಲ್ಲಾ ಹೆಚ್ಚಾಗಿ ಕಂಡುಬರುತ್ತವೆ. ಇದು ಉತ್ತಮ ನೀರಿನಂಶ ಹೊಂದಿದ್ದು ಹುಳಿ-ಸಿಹಿ ರುಚಿಯಿಂದ ಕೂಡಿದೆ. ಇದು ಸವಿಯಲು-ಬಹಳ ರುಚಿಯಾಗಿರುತ್ತದೆ. ಇದನ್ನು ಗೊಜ್ಜು, ಪಾನೀಯ, ಜಾಮ್ ತಯಾರಿಕೆಯಲ್ಲಿ ಬಳಸುವರು. ಇದರ ಗಿಡವನ್ನು ಮನೆಯ ಮುಂದೆ, ಹಿತ್ತಲಲ್ಲಿ, ತೋಟದ ಬದಿಗಳಲ್ಲಿ, ಬೇಲಿಗಳಲ್ಲಿ ಬೆಳೆಯಬಹುದು. ಅಲಂಕಾರಿಕ ಸಸ್ಯವಾಗಿಯೂ ಬೆಳೆಸಬಹುದು. ಸಣ್ಣ ಗಿಡದಲ್ಲಿಯೇ ಒಂದು ಬಾರಿಗೆ 4-5 ಕಿಲೊ ಹಣ್ಣು ಪಡೆಯಬಹುದು.ಇದಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ. 1 ಕಿಲೊ ಗ್ರಾಂಗೆ ರೂ 25 ರಿಂದ 30 ರೂಪಾಯಿ ದರ ಇದೆ.ಬೀಜದಿಂದ ಹಾಗೂ ಕಸಿ ಕಟ್ಟುವಿಕೆಯಿಂದ ಸಸ್ಯಾಭಿವೃದ್ಧಿಯನ್ನು ಮಾಡಬಹುದು. ಫಲವತ್ತಾದ ಮಣ್ಣು, ಬೂದಿ,ಕೊಟ್ಟಿಗೆ ಗೊಬ್ಬರದ ಆರೈಕೆ ಸಾಕು. ನೆರಳಿಗಾಗಿ ಬಿಸಿಲಿನ ರಕ್ಷಣೆಗೆ ಬೇಕಾದ ಜಾಗದಲ್ಲಿ ಕೂಡ ಹಾಕುತ್ತಾರೆ. ಒಣ ಹವಾಮಾನ ಈ ಗಿಡಕ್ಕೆ ಹೊಂದಿಕೆಯಾಗುತ್ತದೆ. ನೀರು ಬಸಿದು ಹೋಗುವ ಜಾಗದಲ್ಲಿ ಹುಲುಸಾಗಿ ಬೆಳೆಯುತ್ತದೆ. ಗಿಡ ನೆಟ್ಟು ಮೂರು ವರ್ಷಗಳಲ್ಲಿಯೇ ಫಲ ನೀಡುತ್ತದೆ.

ಮೂಲ : ಗೀತಾಸದಾ, ಮೋಂತಿಮಾರು, ಪ್ರಜಾವಾಣಿ 3/1/2012

ಕಲ್ಲು ಬಾಳೆ (ಕಾಡು ಬಾಳೆ)

ಬಾಳೆ, ಅಡಿಕೆ ತೋಟಕ್ಕೆ ಬೇಕೇ ಬೇಕು ಎಂಬುದು ಹಿರಿಯರ ಅನುಭವದ ಮಾತು. ಅಡಿಕೆಗೆ ಅಗತ್ಯವಾಗಿ ಬೇಕಾದ ಪೊಟ್ಯಾಷ್ ಬಾಳೆಯಲ್ಲಿ ಧಾರಾಳವಾಗಿದೆ. ಅಡಿಕೆಗೆ ನೀರೊತ್ತಾಯ ಬೇಕು. ಬಾಳೆ ಆ ಕೆಲಸವನ್ನೂ ಪೂರೈಸಬಲ್ಲದು. ಮಣ್ಣನ್ನು ಮೃದುವಾಗಿಸುವಲ್ಲೂ ಬಾಳೆ ಎತ್ತಿದ ಕೈ. ಇತ್ತೀಚೆಗೆ ಬಾಳೆಯಲ್ಲಿ ಕಟ್ಟೆ ರೋಗ ಕಾಣಿಸುತ್ತಿದೆ.ಆದರೆ ಕಾಡು ಬಾಳೆಗೆ ಕಟ್ಟೆ ರೋಗ ಕಡಿಮೆ. ಇದರ ಇನ್ನೊಂದು ವಿಶೇಷತೆ ಏನೆಂದರೆ ಇದು ಎಂಥ ಮಣ್ಣಲ್ಲೂ ರಾಕ್ಷಸ ಸ್ವರೂಪದಲ್ಲಿ ಕ್ಷಿಪ್ರ ವೇಗದಲ್ಲಿ ಬೆಳೆಯುತ್ತದೆ. ಇದಕ್ಕೆ ಯಾವುದೇ ಉಪಚಾರದ ಮಾತಿಲ್ಲ. ಆದರೆ ಕಾಡು ಬಾಳೆ ಕತ್ತರಿಸುವುದನ್ನು ಮಾತ್ರ ಮುಖ್ಯವಾಗಿ ಗಮನಿಸಬೇಕಾಗುತ್ತದೆ. ವರ್ಷಕ್ಕೆ ಕನಿಷ್ಠ ಮೂರು ಬಾರಿ ಅಂದರೆ ಕೊನೆ ಕೊಯ್ಲು ಮುಗಿದ ನಂತರ ಜನವರಿಯಲಿ ಒಮ್ಮೆ, ಮಳೆಗಾಲದ ಆರಂಭಕ್ಕೆ ಮುನ್ನ ಜೂನ್‌ನಲ್ಲಿ ಮತ್ತು ಸ್ವಲ್ಪ ಪ್ರಮಾಣದಲ್ಲಿ ಅಕ್ಟೋಬರ್‌ನಲ್ಲೊಮ್ಮೆ. ಒಂದು ಬುಡದಲ್ಲಿ ಎರಡು ಗಿಡ ಬಿಟ್ಟು ಉಳಿದವನ್ನೆಲ್ಲ ಕತ್ತರಿಸಬೇಕು. ಇದರ ಕಂದುಗಳನ್ನು ತಂದು ತೋಟದಲ್ಲಿ ನಾಟಿ ಮಾಡುವುದು ಸೂಕ್ತವಲ್ಲ, ಅವುಗಳನ್ನು ಸಾಗಾಣಿಕೆ ಮಾಡುವ, ನೆಡುವ ಖರ್ಚು ಜಾಸ್ತಿ. ಬದುಕುಳಿಯುವ ಪ್ರಮಾಣ ಕಡಿಮೆ. ಬದಲು ಬೀಜದಿಂದ ಹುಟ್ಟುವ ಒಂದು ಅಡಿ ಎತ್ತರವಾದ ಗಿಡಗಳನ್ನು ಆಯ್ದುಕೊಳ್ಳಬೇಕು. ಒಂದು ಅಡಿ ಆಳದ ಗುಳಿಯಲ್ಲಿ ಹಾಕಬೇಕು. ತುಂಬಾ ಶುಷ್ಕವಾದ ಭೂಮಿಯಲ್ಲಿ ಮಾತ್ರ ಒಂದು ವರ್ಷ ನೀರುಣಿಸಬೇಕಾಗುತ್ತದೆ.

ಮೂಲ : ಉದಯವಾಣಿ 9 ಜೂನ್ 2008

ಕನ್ನೆಲ್ ಭತ್ತ ಸಂರಕ್ಷಣೆ

ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲೂಕು ಕಿತ್ತೂರ ತೆರಣಿ ಮುಂಟೆ ಗ್ರಾಮದ ಭಾಸ್ಕರ್ ಮೂಲತಃ ಕೃಷಿಕರು. ಕೃಷಿ ಬದುಕಿನ ಜೊತೆಗೆ ಗ್ರಾಮದ ರವಿರಾಮೇಶ್ವರ ದೇವಸ್ಥಾನದ ಅರ್ಚಕರು ಕೂಡ. ಇವರು ಸಾವಯವ ಕೃಷಿಕರು. ಮಳೆ ಆಧಾರಿತ ಭತ್ತವನ್ನು ಅಜ್ಜ ತಂದೆಯವರ ಕಾಲದಿಂದಲೂ ಬೆಳೆದುಕೊಂಡು ಬರುತ್ತಿದ್ದಾರೆ. ಆದರೆ ಕಬಿನಿ ಜಲಾಶಯದ ಕಾರಣ ಹೈಬ್ರಿಡ್ ತಳಿಗಳು ತಲೆ ಎತ್ತಿ ನಿಂತಿವೆ. ಕನ್ನೆಲ್ ಭತ್ತ ಇಂದು ಹಳ್ಳಿಗಳಲ್ಲಿ ಕಾಣದಂತಾಗಿದೆ. ಹೊಲಕ್ಕೆ ಬೀಜ ಬಿತ್ತಿ ಬೆಳೆಯಬಹುದಾದ ಕನ್ನೆಲ್ ಭತ್ತದ ಕಾಳು ಸ್ವಲ್ಪ ಕಪ್ಪು ಬಣ್ಣದಲ್ಲಿವೆ.

ಜೀವ ವೈವಿಧ್ಯ

ಕೆಂಪುಬಣ್ಣದ ದಪ್ಪಕ್ಕಿ ಅನ್ನಕ್ಕೆ ವಿಶಿಷ್ಟ ರುಚಿ. ಅನ್ನದ ಜೊತೆಗೆ ಸಾಂಬಾರ್ ಬೇಕಿಲ್ಲ, ಮೊಸರು ರುಚಿಗೆ ಉಪ್ಪು ಇದ್ದರೆ ಸಾಕು ಅದರ ರುಚಿಯೂ ಬೇರೆ. ಸಾವಯವದಲ್ಲಿ ಬೆಳೆಯುತ್ತಿರುವ ಈ ಭತ್ತಕ್ಕೆ ಯಾವುದೇ ಕೀಟ ಮತ್ತು ರೋಗ ಭಾದೆ ಕಂಡುಬರುತ್ತಿಲ್ಲ, ಭತ್ತದ ಕಟಾವು ಮಾಡುವುದು ತಡವಾದರೂ ಕಾಳು ಉದುರಿ ಹೋಗುವುದಿಲ್ಲ, ಬಾಣಂತಿಯರಿಗೆ ಈ ಅಕ್ಕಿಯ ಅನ್ನ ತುಂಬಾ ಒಳ್ಳೆಯದಂತೆ, ಅವಲಕ್ಕಿ ಮಾಡಿದರೆ ರುಚಿಯೇ ಬೇರೆ. ದನಕರುಗಳು ಇದರ ಹುಲ್ಲನ್ನು ಇಷ್ಟಪಟ್ಟು ತಿನ್ನುತ್ತವೆ. ಈ ಕಾರಣಕ್ಕಾಗಿಯೇ ಈ ಭತ್ತವನ್ನು ಬಿಡದೆ ಉಳಿಸಿ ಬೆಳೆಸಿಕೊಂಡು ಬಂದಿರುತ್ತೇನೆ ಎಂದು ಭಾಸ್ಕರ್‌ರವರು ಹೇಳುತ್ತಿರುವರು.

ಮೂಲ ಜಿ. ಗಣಪತಿಭಟ್, ಪ್ರಜಾವಾಣಿ , 8 ಡಿಸೆಂಬರ್ 2011.

ದೇವನಹಳ್ಳಿ ಚಕ್ಕೋತ

“ ಕೊಳ್ಳಿರಿ ಮಧುಗಿರಿ ದಾಳಿಂಬೆ
ಬೆಳವಳ ನಾಡಿನ ಸಿಹಿ ನಿಂಬೆ,
ಬೆಳಗಾವಿಯ ಸವಿ ಸಪೋಟ
ನಂಜನಗೂಡಿನ ರಸಬಾಳೆ
ದೇವನಹಳ್ಳಿಯ ಚಕ್ಕೋತ ”

ದೇವನಹಳ್ಳಿ ಚಕ್ಕೋತಕ್ಕೆ 350 ವರ್ಷಗಳ ಇತಿಹಾಸವಿದೆ ಎನ್ನುತ್ತಾರೆ ಸ್ಥಳೀಯ ಹಿರಿಯರು. ಈ ಹಣ್ಣಿಗೆ ಎಲ್ಲೆಡೆ ಬೇಡಿಕೆಯಿದೆ. ಇಲ್ಲಿ ಬೆಳೆಯುವ ಚಕ್ಕೋತ ಹಣ್ಣುಗಳ ಒಳಭಾಗ ಬಿಳಿ ಮತ್ತು ಕೆಂಪಾಗಿದ್ದು ಸ್ವಲ್ಪ ಹುಳಿ ಮಿಶ್ರಿತ ಸಿಹಿ ರುಚಿ ಹೊಂದಿದೆ ಮತ್ತು ರಸಭರಿತವಾಗಿದೆ. ಹವಾಮಾನ, ನೀರು, ಮಣ್ಣಿನ ಫಲವತ್ತತೆಯ ಕಾರಣದಿಂದ ಈ ಹಣ್ಣು ಸ್ವಾದಿಷ್ಟವಾಗಿರುತ್ತದೆ. ಪ್ರಗತಿಪರ ರೈತ ಶಿವನಾಪುರ ರಮೇಶ್‌ರವರು, ಈ ಹಣ್ಣು ತಿಂದ ನಂತರ ನಾಲಿಗೆಗೆ ಕಹಿ ಎನಿಸುವುದಿಲ್ಲ, ಆದರೆ ಬೇರೆ ಪ್ರದೇಶಗಳಲ್ಲಿಯ ಚಕ್ಕೋತ ತಿಂದರೆ ನಾಲಿಗೆಗೆ ಕಹಿ ಅನುಭವವಾಗುತ್ತದೆ ಎನ್ನುತ್ತಾರೆ.

ಚಕ್ಕೋತ ಬೆಳೆಯಲು ನೀರು ಬಸಿದು ಹೋಗುವ ಗೋಡು ಮಣ್ಣಿನಿಂದ ಕೂಡಿದ ಪ್ರದೇಶ ಸೂಕ್ತ. ಬೀಜ ಹಾಕಿ ಗಿಡ ಬೆಳೆಸಿದರೆ ಆರು ವರ್ಷಕ್ಕೆ ಕಾಯಿ ಬಿಡುತ್ತವೆ. ಆದರೆ ಕಸಿ ಮಾಡಿ ಸಸಿಗಳನ್ನು ನೆಟ್ಟರೆ ಎರಡು ವರ್ಷಕ್ಕೆ ಫಲ ಸಿಗುತ್ತವೆ. ವರ್ಷದಲ್ಲಿ 9 ತಿಂಗಳು ಫಸಲು ಬರುತ್ತದೆ.
ಗಿಡದ ಆರೈಕೆ ಮತ್ತು ಮಣ್ಣಿನ ಫಲವತ್ತತೆಯ ಆಧಾರದ ಮೇಲೆ ಅದರ ಆಯಸ್ಸು ನಿರ್ಧಾರವಾಗುತ್ತದೆ. 25 ರಿಂದ 30 ವರ್ಷಗಳವರೆಗೂ ದೊಡ್ಡ ಗಾತ್ರದ ಹಣ್ಣನ್ನು ಪಡೆಯಬಹುದು. ನಂತರ ಗಾತ್ರ ಕಡಿಮೆಯಾಗುತ್ತಾ ಬರುತ್ತದೆ. ಒಂದು ತಿಂಗಳವರೆಗೆ ಇಟ್ಟರೂ ಹಣ್ಣು ಕೆಡುವುದಿಲ್ಲ.

ಈ ಹಣ್ಣುಗಳ ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ಇಲ್ಲ, ರಾಷ್ಟ್ರೀಯ ಹೆದ್ದಾರಿ ಬದಿ ಮತ್ತು ನಗರ (ಪಟ್ಟಣ)ದ ರಸ್ತೆಗಳ ಬದಿ ಕೈಗಾಡಿಯಲ್ಲಿ ಮಾರಾಟ ಮಾಡಲಾಗುತ್ತಿದೆ. 1 ಕಿಲೊ.ಗೆ 30 ರಿಂದ 45 ರೂ ಬೆಲೆಯಿದೆ. ಈ ತಳಿಯನ್ನು ಅಭಿವೃದ್ಧಿ ಮಾಡಲು ತೋಟಗಾರಿಕಾ ಇಲಾಖೆಯವರು ಸಂಶೋಧನಾ ಕೇಂದ್ರ ಸ್ಥಾಪನೆ ಮಾಡಿ ಸಂರಕ್ಷಣ ತಾಕನ್ನು ಅಭಿವೃದ್ಧಿ ಮಾಡಿದ್ದಾರೆ ಮತ್ತು ಕಡಿಮೆ ದರದಲ್ಲಿ ಸಸಿಗಳನ್ನು ನೀಡುತ್ತಿದ್ದಾರೆ. ಆಸಕ್ತಿಯುಳ್ಳವರು ದೇವನಹಳ್ಳಿಯ ತೋಟಗಾರಿಕೆ ಇಲಾಖೆಯನ್ನು ಸಂಪರ್ಕಿಸಬಹುದು.

ಮೂಲ : ವಡ್ಡನಹಳ್ಳಿ ಭೋಜ್ಯಾನಾಯ್ಕ

ಅರಳೀಕಟ್ಟೆ

ಸಾಂಪ್ರದಾಯಿಕ ಆಹಾರ ಮೇಳ (ಸಾತ್ವಿಕ್)

ಸಾಂಪ್ರದಾಯಿಕ ಆಹಾರ ಮೇಳದಿಂದ ಹೆಚ್ಚಿನ ಜನರಿಗೆ ದೇಶೀಯ ಆಹಾರ ಮತ್ತು ಅದರ ಪೌಷ್ಠಿಕಾಂಶ ತಿಳಿಯಲು ಸಹಾಯಕವಾಗುತ್ತದೆ. ಈ ಮೇಳದಲ್ಲಿ ಹೆಚ್ಚು ತರಹದ ಆಹಾರ ಉತ್ಪನ್ನಗಳನ್ನು ಮತ್ತು ಹೊರ ರಾಜ್ಯಗಳಿಂದ ಬಂದಿರುವಂತಹ ತಿನಿಸುಗಳಾದ ಬಿದಿರು ಮೊಳಕೆಯಿಂದ ಮಾಡಲ್ಪಟ್ಟಿರುವ ಅನ್ನ ಮತ್ತು ಉಪ್ಪಿನಕಾಯಿ, ಪರಾಟಗಳು, ತೃಣಧಾನ್ಯಗಳನ್ನು ಉಪಯೋಗಿಸಿ ಮಾಡಿರುವಂತಹ ಪಿಜ್ಜಾಗಳು, ನೆಲ್ಲಿಕಾಯಿಯ ಉತ್ಪನ್ನಗಳು, ಇನ್ನು ನಾನಾ ತರಹದ ಉತ್ಪನ್ನಗಳನ್ನು ಸಾದರಪಡಿಸಲಾಗುತ್ತದೆ. ಅಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳು ಸೂತ್ರದ ಬೊಂಬೆಯಾಟ, ಪೇಂಟಿಂಗ್ಸ್, ಕರಕುಶಲವಸ್ತುಗಳು, ಮಡಿಕೆಗಳು, ರೈತರಿಗೆ ಉಪಯೋಗವಾಗುವಂತಹ ಸಾವಯವ ಮತ್ತು ಪರಿಸರ ಸ್ನೇಹಿ ಉತ್ಪನ್ನಗಳು, ಮಕ್ಕಳಿಗಾಗಿ ಸ್ಪರ್ಧೆಗಳು ಹಾಗೂ ಜೀವ ವೈವಿಧ್ಯತೆಯ ತಿಳುವಳಿಕೆ, ಹಾಗೂ ತಳಮಟ್ಟ ಜನರ ಅನುಶೋಧನೆಗಳನ್ನು ಈ ಮೇಳದಲ್ಲಿ ಪ್ರದರ್ಶನ ಮಾಡಲಾಗುತ್ತದೆ. ಕೃಷಿ ವೈವಿಧ್ಯತೆಯ ಸಂರಕ್ಷಣೆ ಹಾಗೂ ಅಪರೂಪವಾಗಿ ಬಿತ್ತನೆ ಮಾಡುವಂತಹ ಬೆಳೆಗಳಿಗೆ ಬೇಡಿಕೆಗಳನ್ನು ಸೃಷ್ಟಿಸುವುದಕ್ಕೋಸ್ಕರ ಆಹಾರ ಮೇಳವನ್ನು ಎಂಟು ವರ್ಷಗಳ ಹಿಂದೆಯೇ ಪ್ರಾರಂಭಿಸಲಾಗಿದೆ. ಬೆಳವಣಿಗೆಯ ವಿರೋದಾಭಾಸವು ಎಷ್ಟಿದೆಯೆಂದರೆ ಪೌಷ್ಠಿಕ ಆಹಾರ ಉತ್ಪಾದನೆಯು ಅಭಿವೃದ್ಧಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲೇ ಅಧಿಕವಾಗಿದೆ. ಈ ಮೇಳವು ಹೆಚ್ಚಿನ ಜನರಿಗೆ ತಿಳಿಯದೇ ಇರುವಂತಹ ಪೌಷ್ಠಿಕ ಆಹಾರವನ್ನು ನಗರದ ಜನತೆಗೆ ಪರಿಚಯಿಸಲು ಪ್ರಯತ್ನಿಸುತ್ತಿದೆ. ಹಾಗೂ ಆರೋಗ್ಯದಾಯಕ ಜೀವನ ಶೈಲಿ ಮತ್ತು ಆಹಾರವನ್ನು ತಮ್ಮದಾಗಿಸಿಕೊಳ್ಳಲು ಸಹಾಯ ಮಾಡುತ್ತಿದೆ. ರೈತರ ಉತ್ಪನ್ನಗಳ ಲಾಭದ ಜೊತೆ ಇಂತಹ ಬೆಳೆಗಳ ಲಾಭವೂ ಸೇರಲಿ ಎಂದು ಪ್ರೋತ್ಸಾಹಿಸಲಾಗುತ್ತಿದೆ. ಅಲ್ಲದೆ ನಾಶವಾಗುತ್ತಿರುವ ಇಂತಹ ಕೃಷಿ ವೈವಿಧ್ಯತೆಯನ್ನು ಸಂರಕ್ಷಿಸಲು ಸಹಾಯ ಮಾಡಿದಂತಾಗುತ್ತಿದೆ.

ಕಡಲೆಕಾಯಿ ಪರಿಷೆ

ಬೆಂಗಳೂರಿನ ಪ್ರಸಿದ್ಧ ಉತ್ಸವಗಳಲ್ಲಿ ಬಸವನಗುಡಿಯ ಸುಂಕೇನಹಳ್ಳಿಯಲ್ಲಿ ನಡೆಯುವ ಕಡಲೆ ಕಾಯಿ ಪರಿಷೆಯೂ ಒಂದಾಗಿದೆ. ಈ ಪರಿಷೆಗೆ ಕಾರಣವಾಗಿರುವ ಐತಿಹಾಸಿಕ ಹಿನ್ನೆಲೆ ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಪ್ರತಿ ವರ್ಷ ಕಾರ್ತಿಕ ಮಾಸದ ಕೊನೆಯ ಸೋಮವಾರದಂದು ಪ್ರಾರಂಭವಾಗುವ ಈ ಜಾತ್ರೆಯು ಮೂರು ದಿನಗಳವರೆಗೆ ನಡೆಯುತ್ತದೆ. ಈ ಮೂರು ದಿನಗಳಲ್ಲಿ ಅಲ್ಲಿಯ ಬಸವಣ್ಣ ದೇವಸ್ಥಾನ ಹಾಗೂ ಅಕ್ಕ ಪಕ್ಕಗಳಲ್ಲಿರುವ ಇತರ ದೇವಸ್ಥಾನಗಳಲ್ಲಿಯೂ ವಿಶೇಷ ಅಲಂಕಾರ ಹಾಗೂ ಪೂಜೆ ಏರ್ಪಡಿಸಲಾಗಿರುತ್ತದೆ. ಹೆಸರೇ ಸೂಚಿಸುವಂತೆ ಈ ಜಾತ್ರೆಯಲ್ಲಿ ನಾನಾ ತರಹದ ಕಡಲೇಕಾಯಿಗಳದೇ ದರ್ಬಾರು. ಎಲ್ಲಿ ನೋಡಿದರೂ ರಾಶಿ ರಾಶಿ ಕಡಲೇಕಾಯಿಗಳು ರಸ್ತೆಯ ಎರಡೂ ಬದಿಗಳಲ್ಲಿ ಕಾಣಸಿಗುತ್ತವೆ. ಈ ಬಾರಿ ನವೆಂಬರ್‌ನಲ್ಲಿ ನಡೆದ ಕಡಲೆಕಾಯಿ ಪರಿಷೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದಲ್ಲದೆ ನೆರೆಯ ತಮಿಳುನಾಡು ಹಾಗೂ ಮಾಗಡಿಯಿಂದಲೂ ಬರುತ್ತಾರೆ.ಹಸಿ ಕಡಲೆ, ಬೇಯಿಸಿದ ಕಡಲೆ, ಹುರಿದ ಕಡಲೆಗಳನ್ನು ಮಾರುತ್ತಾರೆ ಅಲ್ಲದೆ ಮಕ್ಕಳ ಆಟಿಕೆಗಳು, ಅಲಂಕಾರಿಕ ವಸ್ತುಗಳು ಹಾಗೂ ಗೃಹಪಯೋಗಿ ಸಾಮಾನುಗಳ ವ್ಯಾಪಾರವೂ ಕೂಡ ಭರದಿಂದ ಸಾಗುತ್ತದೆ. ಹೀಗೆ ಬೆಂಗಳೂರಿನ ಆಧುನಿಕತೆಗೆ ಒಗ್ಗಿಕೊಂಡಿರುವ ಜನತೆ ಇಂದಿಗೂ ಪುರಾತನ ಸಂಸ್ಕೃತಿಯನ್ನು ಆಚರಿಸಿಕೊಂಡು ಬರುತ್ತಿದೆ. ಈ ಪರಿಷೆಯು ಹಳ್ಳಿಯ ಸಂತೆಯ ನೆನಪನ್ನು ತರುತ್ತದೆ.


ಹಿತ್ತಿಲು ಕೈತೋಟಕ್ಕೊಂದು ಕೈಪಿಡಿ

ಲೇಖಕರು – ಅನುಸೂಯ ಎಸ್. ಶರ್ಮ

ಬೆಲೆ- 100ರೂ

ಪ್ರಕಾಶನ – ಭೂಮಿ ಪ್ರಕಾಶನ, ನಂ. 6/32,
ಕಾಂಚನ ನಿಲಯ, 2ನೇ ಡಿ ಮುಖ್ಯ ರಸ್ತೆ
60 ಅಡಿ ರಸ್ತೆ, ಆರ್.ಎಂ.ವಿ. 2ನೇ ಹಂತ
ಭೂಪಸಂದ್ರ, ಬೆಂಗಳೂರು 560094

ಶ್ರೀಮತಿ ಅನುಸೂಯ ಶರ್ಮರು ತಮ್ಮ ಎರಡು ದಶಕದ ಕೈತೋಟದ ಅನುಭವವನ್ನು ಈ ಕೃತಿಯ ಮೂಲಕ ತಿಳಿಸಿದ್ದಾರೆ. ಹಿತ್ತಲು ಎಂದರೆ ಆರೋಗ್ಯಧಾಮ, ಔಷಧಗಳ ಉಗ್ರಾಣ, ದ್ಯಾನ ಸ್ಥಾನ ಅಲ್ಲದೆ ಪ್ರಯೋಗ ಶಾಲೆಯೂ ಆಗಿರಬಹುದು. ಅನುಸೂಯ ಅವರು ತಮ್ಮ ಹಿತ್ತಲಲ್ಲಿ ಇವೆಲ್ಲವನ್ನೂ ಸಾಕ್ಷಾತ್ಕರಿಸಿ ಅನುಭವಿಸಿ ಈ ಪುಸ್ತಕವನ್ನು ಬರೆದಿದ್ದಾರೆ. ಈ ಕೈಪಿಡಿಯಲ್ಲಿ ಹಿತ್ತಲಿನ ಬಗ್ಗೆ ಏನೂ ಗೊತ್ತಿಲ್ಲದವರಿಗೆ ಹೊಸ ಸಾಹಸಕ್ಕಿಳಿಯಲು ಬೇಕಾದ ಪ್ರೇರಣೆ ಇದೆ.ಈ ಪುಸ್ತಕದ ನೆರವಿನಿಂದ ತರಕಾರಿ ಬೆಳೆಯುವಲ್ಲಿ ಸ್ವಾವಲಂಬಿಗಳಾಗಬಹುದು. ತಮ್ಮ ಮನೆಯಂಗಳದ ಕೈತೋಟಕ್ಕೆ ಮತ್ತಷ್ಟು ಕಸುವು ತುಂಬಬಹುದು. ಕೈತೋಟ ಬೆಳೆಸುವ ಪ್ರಾಥಮಿಕ ಮಾಹಿತಿಯಿಂದ ಹಿಡಿದು ತರಕಾರಿ ಕೊಯ್ಲು ಮಾಡಿ, ಸಣ್ಣ ಆದಾಯಕ್ಕಾಗಿ ಮಾರಾಟ ಮಾಡುವ ಕುರಿತ ವಿವರಣೆಗಳನ್ನೂ ಈ ಪುಸ್ತಕ ಒಳಗೊಂಡಿದೆ. ತರಕಾರಿ ಮೌಲ್ಯವರ್ಧನೆ,ಅವುಗಳ ರೋಗ, ಕೀಟ ಬಾಧೆ, ಆಯುರ್ವೇದ ಔಷಧ ತಯಾರಿ, ತರಕಾರಿ, ಹಣ್ಣು ಸಾಂಬಾರ ಪದಾರ್ಥಗಳ ಮೌಲ್ಯವರ್ಧನೆ, ಕೀಟ, ರೋಗ ನಿವಾರಣೆಗಾಗಿ ಕಷಾಯಗಳ ಸಿದ್ಧತೆಯಂಥ ಹಲವು ಮಾಹಿತಿಯನ್ನು ಸರಳವಾಗಿ ಎಲ್ಲರಿಗೂ ಅರ್ಥವಾಗುವಂತೆ ಈ ಪುಸ್ತಕ ವಿವರಿಸುತ್ತದೆ. ಕೈತೋಟ ಮಾಡಬೇಕೆಂಬ ಆಸೆಯಿರುವವರಿಗೆ ಮತ್ತು ಏನು ಬೆಳೆಯಬೇಕೆಂಬ ಕಲ್ಪನೆಯೇ ಇಲ್ಲದವರಿಗೂ ಸೂಕ್ತವೆನಿಸುವ ಕೈಪಿಡಿ ಹಿತ್ತಿಲು.



ಸುಸ್ಥಿರ ಕೃಷಿ-ಸ್ವಾವಲಂಬನೆಯ ಬದುಕು: ಕರೇಗೌಡ ದಂಪತಿಯ ಸೂತ್ರ

ಲೇಖಕರು – ಪೂರ್ಣಿಮ ತೀರ್ಥಮಲ್ಲೇಶ್

ಬೆಲೆ- 20ರೂ (ಅಂಚೆ ವೆಚ್ಚ ಪ್ರತ್ಯೇಕ), ಪ್ರಕಾಶನ – ಕೃಷಿ ಮಾಧ್ಯಮ ಕೇಂದ್ರ

ನಂ. 119, 1 ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ನಾರಾಯಣಪುರ, ಧಾರವಾಡ-580 008 ಫೋನ್: 0836-2444736

ಸಕಲೇಶಪುರ ತಾಲೂಕಿನ ಕೊಂತನಮನೆಯಲ್ಲಿ ಕಳೆದ ಒಂದೂವರ ದಶಕದಿಂದ ತಮ್ಮ ನಾಲ್ಕೂವರೆ ಎಕರೆ ಜಮೀನಿನಲ್ಲಿ ಪರಿಸರ ಸ್ನೇಹಿ ವ್ಯವಸಾಯ ಮಾಡುತ್ತಿರುವ ಕರೇಗೌಡ-ಯಶೋದ ದಂಪತಿ ಸುಸ್ಥಿರ ಕೃಷಿ-ಸ್ವಾವಲಂಬಿ ಬದುಕನ್ನು ತಮ್ಮದೇ ರೀತಿಯಲ್ಲಿ ರೂಪಿಸಿಕೊಂಡವರು. ಆಹಾರ ಭದ್ರತೆಗೆ ಭತ್ತ- ತರಕಾರಿಗಳಂತಹ ಬೆಳೆಗಳು, ಆರ್ಥಿಕ ಮುನ್ನಡೆಗೆ ಕಾಫಿ-ಏಲಕ್ಕಿಗಳಂತಹ ವಾಣಿಜ್ಯ ಬೆಳೆಗಳು, ಇವುಗಳ ನಡುವೆ ಸ್ವಂತ ದುಡಿಮೆ ಇವರ ವ್ಯವಸಾಯ ಬದುಕನ್ನು ನೆಮ್ಮದಿಯ ಹಾದಿಯಲ್ಲಿ ಮುನ್ನಡೆಸುತ್ತಿವೆ. ಇವರು ಸಾಲ-ಸಬ್ಸಿಡಿ ನೆಚ್ಚಿಕೊಂಡವರಲ್ಲ. ನಮ್ಮದು ಅಡ್ಡಾದಿಡ್ಡಿ ಕೃಷಿ ಎನ್ನುವ ಕರೇಗೌಡರು ದುಡಿಯಲು ಶಕ್ತಿ ಇರುವವರೆಗೆ ನಾವು ಎಂದಿಗೂ ಬಡವರಲ್ಲ. ಆದರೆ ಖರ್ಚುಗಳಿಗೆ ಕಡಿವಾಣ ಇರಬೇಕು. ಸಾಲಕ್ಕೆ ಎರವಾಗಬಾರದು. ಆಹಾರ ಭದ್ರತೆಯನ್ನೂ ನೋಡಿಕೊಳ್ಳಬೇಕು ಎನ್ನುತ್ತಾರೆ. ಸರಿಯಾದ ಯೋಜನೆ, ಆದಾಯಕ್ಕೆ ತಕ್ಕ ಖರ್ಚು, ಸ್ವಂತ ದುಡಿಮೆ, ಮಾರುಕಟ್ಟೆ ಏರಿಳಿತಗಳನ್ನು ಗಮನಿಸಿ ಮಾರಾಟ ಈ ದಂಪತಿಯ ಯಶಸ್ಸಿಗೆ ಕಾರಣ. ವ್ಯವಸಾಯ – ಮನೆಯ ಕೆಲಸ ಎರಡರಲ್ಲೂ ಪತಿ-ಪತ್ನಿ ಸಮಭಾಗಿಗಳು.



ಕರೇಗೌಡ- ಯಶೋದ ದಂಪತಿಯ ಜೀವಪರ ಒಕ್ಕಲುತನದ ಮೇಲೆ ಬೆಳಕುಚೆಲ್ಲುವ ಸುಸ್ಥಿರ ಕೃಷಿ – ಸ್ವಾವಲಂಬಿ ಬದುಕು: ಕರೇಗೌಡ ದಂಪತಿಯ ಸೂತ್ರ ಶೀರ್ಷಿಕೆಯ ಪುಸ್ತಕವನ್ನು ಧಾರವಾಡದ ಕೃಷಿ ಮಾಧ್ಯಮ ಕೇಂದ್ರ ಪ್ರಕಟಿಸಿದೆ. ಕೃಷಿ ಮಾಧ್ಯಮ ಕೇಂದ್ರ ನಡೆಸುವ ಒಂದು ವರ್ಷ ಅವಧಿಯ ಕೃಷಿ ಗ್ರಾಮೀಣ ಪತ್ರಿಕೋದ್ಯಮ ತರಬೇತಿ ಪೂರೈಸಿ ಕಾಮ್ ಫೆಲೋ ಆಗಿರುವ ಪೂರ್ಣಿಮ ತೀರ್ಥಮಲ್ಲೇಶ್ ಅವರ ಮೊದಲ ಕೃತಿ ಇದು.

ಇದು ರಾಸಾಯನಿಕ ರಹಿತ ಕೃಷಿ ಕ್ಷೇತ್ರದಲ್ಲಿನ ಮೌನಸಾಧಕರ ಅನುಭವಗಳಿಗೆ ಕನ್ನಡಿ ಹಿಡಿಯುವ ಕೃಷಿ ಮಾಧ್ಯಮ ಕೇಂದ್ರದ ಪ್ರಯತ್ನದಲ್ಲಿ ಐದನೇ ಪುಸ್ತಕ. ಮೊದಲು ಪ್ರಕಟಿಸಿರುವ ಕಲ್ಲು ಹಾಸಿನ ಮೇಲೆ ಹಸಿರು ಹೊದಿಕೆ, ಗುಡ್ಡದ ಮೇಲಿನ ಏಕವ್ಯಕ್ತಿ ಸೈನ್ಯ ಸಾವಯವದ ಹಾದಿ ಹಾಗೂ ಮಿಶ್ರಕೃಷಿ ಮೌಲ್ಯವರ್ಧನೆ-ನೇರ ಮಾರುಕಟ್ಟೆ; ಎಸ್.ಎಂ. ಪಾಟೀಲರ ಮಾದರಿ ಪುಸ್ತಕಗಳಿಗೆ ಕಂಡುಬಂದ ಉತ್ತಮ ಪ್ರತಿಕ್ರಿಯೆ ಕೇಂದ್ರಕ್ಕೆ ಈ ಸರಣಿಯನ್ನು ಮುಂದುವರಿಸಲು ಪ್ರೇರಣೆ ನೀಡಿದೆ.

ಅನಾನಸ್ ಮತ್ತು ಬನಾನಾ ಕಿಂಗ್ - ಡಾ. ಅಬ್ದುಲ್ ರವೂಫ್

1964 ರಲ್ಲಿ ಅಂದಿನ ಪ್ರಮುಖ ರಾಜಕಾರಣಿ ಶ್ರೀ ರಾಮಕೃಷ್ಣ ಹೆಗಡೆಯವರು ಹವಾಯಿ, ಫಿಲಿಫಿನ್ಸ್ ಪ್ರವಾಸದಿಂದ ಮರಳುವಾಗ ಅಲ್ಲಿಂದ ಫೈನಾಪಲ್ ಗಡ್ಡೆಗಳನ್ನು ಕೃಷಿ ಮಾಡಲು ತಂದರು. ಇನ್ನಿತರ ಅಡಿಕೆ ಬೇಸಾಯಗಾರರೂ ಸಹ ಪೈನಾಪಲ್ ಬೆಳೆ ಕೃಷಿ ಮಾಡಲು ತೊಡಗಿದರು. ಇದರ ಮಾರುಕಟ್ಟೆ ಅಭಿವೃದ್ಧಿಗಾಗಿ ಶ್ರೀ ರಾಮಕೃಷ್ಣ ಹೆಗಡೆಯವರ ಹಿರಿತನದಲ್ಲಿ ಕಾಮಧೇನು ಕೋ ಆಪರೇಟಿವ್ ಫ್ರೂಟ್ ಸೋಸೈಟಿಯನ್ನು ಆರಂಭಿಸಿದರು. ಇದೇ ಸಮಯಕ್ಕೆ ಅಬ್ದುಲ್ ರವೂಫರು ಶ್ರೀ ವಿಠ್ಠಲ ಚೌಧರಿ ಎಂಬುವರಲ್ಲಿ ದಿನವೊಂದಕ್ಕೆ 12 ಆಣೆಗೆ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಅವರ ಪ್ರಾಮಾಣಿಕತೆಗೆ ಚೌಧರಿಯವರು ಒಂದು ಎತ್ತು, ಒಂದು ಆಕಳು, ಸಾಗುವಳಿ ಮಾಡಲು ಒಂದು ಎಕರೆ ಭೂಮಿಯನ್ನೂ ಕೊಟ್ಟರು.

ಹೀಗೆ ರವೂಫರು ಕೃಷಿಕರಾದರು. ಸತತ ಹೊಲದಲ್ಲಿ ದುಡಿಮೆ. ಬೆಳೆಗಳ ಬೇಸಾಯದ ತತ್ವಗಳನ್ನರಿತ ರವೂಫರು ಕೂಡಲೇ ಕೃಷಿಯಲ್ಲಿ ಸಾಧನೆಗೈದರು. ಮುಂದಿನ ವರ್ಷ ಶ್ರೀ ಎ ಬಿ ಪಂಡಿತರು ರವೂಫರಿಗೆ ಸಾಲ ನೀಡಿ ಅಕ್ಕಿ ವ್ಯವಹಾರ ವ್ಯಾಪಾರದಲ್ಲಿ ತೊಡಗಿಸಿದರು. ನಂತರ 1970 ರಲ್ಲಿ ರವೂಫರು ಒಂದು ಎಕರೆ ಹೊಲ ಹಿಡಿದು ಅನಾನಸು ಬೆಳೆದರು. ಬೆಳೆ ಉತ್ಕೃಷ್ಟಮಟ್ಟ ತಲುಪಿದ್ದರೂ ಪ್ರತಿ ವರ್ಷ 40 ಪೈಸೆಗೆ ಕೆಜಿಯಿರುವ ಅನಾನಸ್ ಹಣ್ಣು ಅದೇ ವರ್ಷ 25 ಪೈಸೆ ಆಗಿತ್ತು. ನಿರಾಸೆಗೆಡದೆ ಅನಾನಸ್ ಬೆಳೆಯ ಕ್ಷೇತ್ರವನ್ನು ಪ್ರತಿ ವರ್ಷವೂ ಹೆಚ್ಚಿಸುತ್ತಲೇ ಅತ್ಯಧಿಕ ಇಳುವರಿ ಪಡೆಯುವ ಸುಧಾರಿತ ಕ್ರಮಗಳನ್ನು ಅನುಸರಿಸಿದರು. ಆಳಾಗಿಯೇ ಹೊಲದಲ್ಲಿ ಶ್ರಮಿಸುತ್ತ, ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದುತ್ತ ಎಲ್ಲ ಸಮಾಜದ ವರ್ಗದವರೊಂದಿಗೆ ಸಮನ್ವಯ ವಾಗಿ ಬದುಕಿರುವ ಮಹಾಸ್ ವ್ಯಕ್ತಿ ಎನಿಸಿರುವರು ಈ ಫೈನಾಪಲ್ ಕಿಂಗ್. ಇವರ ಪೈನಾಪಲ್ ಬೆಳೆ 300 ಕ್ಕೂ ಹೆಚ್ಚಿನ ಎಕರೆ ಇದ್ದು ಆರು ಗಂಡು ಮಕ್ಕಳ ಸಹಕಾರದೊಂದಿಗೆ ಸುಖಿ ಜೀವನ ನಡೆಸಿರುವರು. ಕಳೆದ 8-9 ವರ್ಷಗಳಿಂದ ಅಡಿಕೆ ಮಧ್ಯೆ ಕೋಕೊ ಬೆಳೆ ಬೇಸಾಯ ಮಾಡುತ್ತಲಿರುವ ರವೂಫರು ಹೋದ ವರ್ಷ ಮೂರು ಸಾವಿರ ಕೋಕೊ ಸಸ್ಯಗಳನ್ನೂ ನೆಟ್ಟಿರುವರು.

ರವೂಫರ ಬಾಳೆ ಬೇಸಾಯ

ಈ ಹಿಂದೆ ಜಳಗಾಂವ್ (ಮಹಾರಾಷ್ಟ್ರ)ದಲ್ಲಿ ಶ್ರೀ ಅಶೋಕ ಜೈನ್‌ರವರು ಬಾಳೆ ಹಾಗೂ ಪಪ್ಪಾಯಿ ಬೆಳೆ ಬೇಸಾಯ ಮಾಡಿರುವುದನ್ನು ಅಧ್ಯಯನ ಮಾಡಿದ ರವೂಫರು ಆ ಪದ್ಧತಿಯನ್ನು ಅನುಸರಿಸದೇ ಪಶ್ಚಿಮ ಬಂಗಾಳ, ಕೇರಳ ಕೃಷಿ ವಿಜ್ಞಾನಿಗಳಲ್ಲಿಗೆ ಭೇಟಿ ನೀಡಿ ಅವರ ಸಂಶೋಧನೆಯಲ್ಲಿಯ ಅಂಶಗಳನ್ನು ಅಳವಡಿಸಿ ಸಿರಸಿ ಹಾಗೂ ಶಿವಮೊಗ್ಗದ ತಾಳಗುಪ್ಪೆ ಕ್ಷೇತ್ರಗಳಲ್ಲಿ ಈಗ ನೂರಾರು ಎಕರೆಯಲ್ಲಿ ಬಾಳೆ ಬೆಳೆಯನ್ನೂ ಸಮೃದ್ಧವಾಗಿ ಬೆಳೆಯುತ್ತಲಿರುವರು.

ಬಾಳೆಯಲ್ಲಿ ಜೋಡು ಸಾಲು ಪದ್ಧತಿಯಲ್ಲಿ, ಸಸಿಯಿಂದ ಸಸಿಗೆ 3 ಅಡಿ, 7 ಅಡಿ ಸಾಲು ಮತ್ತು 4 ಅಡಿ ಬಿಟ್ಟು ಎಕರೆಗೆ 2640 ಬಾಳೆ ಕಂದುಗಳನ್ನು ನೆಡುವರು. ಹನಿ ನೀರಾವರಿ ಪದ್ಧತಿಯಿಂದ ಹದವರಿತು ನೀರು ಹಾಯಿಸುವರು. ನಂತರ 1,1/2 ತಿಂಗಳಲ್ಲಿ ಯುರಿಯಾ+ಡಿಎಪಿ+ ಪೊಟ್ಯಾಶ್ ಪ್ರತಿಯೊಂದು ಸಸಿಗೆ 100 ಗ್ರಾಂ ನಂತೆ ಹಾಕುವರು. ನಂತರ 20 ದಿನಗಳಿಗೊಮ್ಮೆ ಗೊಬ್ಬರ ಒದಗಿಸುವರು. ಅಲ್ಲದೇ 2 ವರ್ಷಕ್ಕೊಮ್ಮೆ ಎಕರೆ ಬಾಳೆಗೆ 50 ಕೆ ಜಿ ಮ್ಯಾಗ್ನಿಷಿಯಂ ಸಲ್ಫೇಟ್ ಅನ್ನೂ ಗಡ್ಡೆಗೆ ಪೂರೈಸುವರು. ಇದೇ ಸಮಯದಲ್ಲಿ 4 ಕೆಜಿ ಪೊಟ್ಯಾಶಿಯಂ ನೈಟ್ರೇಟ್ ಹಾಗೂ 100 ಮಿ.ಲಿ ಪ್ಲಾನೋಫಿಕ್ಸ್ ಅನ್ನು 200 ಲೀಟರ್ ನೀರಲ್ಲಿ ಬೆರೆಸಿ 2 ಸಲ ಬಾಳೆಗೆ ಸಿಂಪರಣೆ ಮಾಡುವರು.

ಗೊನೆ ಬೆಳೆಯಲಾರಂಭಿಸಿದಾಗ ಒಂದೂವರೆಯಿಂದ 2 ತಿಂಗಳ ಕಾಯಿ ಆಯಿತೆಂದರೆ ಅದಕ್ಕೆ ಆಧಾರವಾಗಿ ಮರಗಳ ಕೊಂಬೆಗಳನ್ನು ಕೊಡುವುದು ವಾಡಿಕೆ. ಆದರೆ ಇವರು ಬಾಕ್ಸಗಳನ್ನು ಸೀಲ್ ಮಾಡುವ ವೇಸ್ಟ್ / ಪ್ಲಾಸ್ಟಿಕ್ ಟೇಪುಗಳಿಂದ ಮರದಿಂದ ಮರಕ್ಕೆ ಸುತ್ತಿ ಕಡಿಮೆ ಖರ್ಚಿನಲ್ಲಿ ಬಾಳೆ ಗೊನೆಗಳು ವಾಲದಂತೆ ನೋಡಿಕೊಳ್ಳುವರು. ಇದರಿಂದ ಪ್ರತಿ ಗಿಡಕ್ಕಾಗುವ ಖರ್ಚು ಕೇವಲ ಎರಡೇ ರೂಪಾಯಿ ಯಾಗುತ್ತದೆ ಎನ್ನುವರು. ಹೀಗೆ ರವೂಫರು ಪೈನಾಪಲ್ ಕಿಂಗ್ ಎನಿಸಿಕೊಂಡಿದ್ದವರು ಈಗ ಬನಾನಾ ಕಿಂಗ್ ಎನಿಸಿಕೊಂಡಿದ್ದಾರೆ. ರವೂಫರಿಗೆ ದೊರೆತ ಪ್ರಶಸ್ತಿಗಳು :2002 ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಪರಮ ಶ್ರೇಷ್ಠ ತೋಟಗಾರಿಕೆ ತಜ್ಞ ಪ್ರಶಸ್ತಿ

2006 ರಲ್ಲಿ ಧಾರವಾಡ ಕೃಷಿ ವಿಶ್ವ ವಿದ್ಯಾಲಯದಿಂದ ಡಾಕ್ಟರೇಟ್ ಪದವಿ.

ಲೇಖಕರು - ಪ್ರೊ. ವಿಜಯಕುಮಾರ ಗಿಡ್ನವರ, ಪ್ರಾಧ್ಯಾಪಕರು
ಕೃಷಿ ವಿಶ್ವವಿದ್ಯಾಲಯ, ಧಾರವಾಡ

ನಳಪಾಕ

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕು ಹುಲಿಕೆರೆ ಗ್ರಾಮದ ಸಜ್ಜನ್‌ರವರು ಸಾವಯವ ಕೃಷಿಗಾಗಿಯೇ ಸಂಘ ಕಟ್ಟಿಕೊಂಡು ಪ್ರೇರೆಪಿಸುತ್ತಿರುವರು. ಇದರೊಟ್ಟಿಗೆ ನಮ್ಮ ದೇಶೀಯ ಆಹಾರ ಪದ್ದತಿಯಲ್ಲಿ ಬ್ಯಾಲದ (ಬೇಲದ) ಹಣ್ಣಿನಿಂದ ಜ್ಯಾಮ್ ತಯಾರಿಸುತ್ತಿದ್ದಾರೆ. ಇದು ರೊಟ್ಟಿ, ಚಪಾತಿ, ಬ್ರೆಡ್‌ಗಳಿಗೆ ಹಾಕಿಕೊಂಡು ತಿನ್ನಬಹುದು. ಈ ಹಣ್ಣಿನಲ್ಲಿ ಔಷಧಿಯ ಗುಣಗಳಿವೆ. ಇದು ಕೊಲೆಸ್ಟ್ರಾಲ್ ರಕ್ತನಾಳ ಪರಿಶುದ್ಧಿ, ಹೃದಯ ಸಂಬಂಧಿ ಕಾಯಿಲೆಗಳನ್ನು ಗುಣಪಡಿಸವಲ್ಲಿ ಉತ್ತಮವೆನ್ನುವರು. ಇದು ಬರಿ ಬಾಯಿಯಿಂದಲೆ ತಿಂದರೆ ರುಚಿಯಾಗಿರುತ್ತದೆ. ಬ್ಯಾಲದ ಹಣ್ಣಿನ ಒಳಗಡೆ ಬರುವ ತಿರುಳಿಗೆ ಬೆಲ್ಲ ಜಾಯಿಕಾಯಿ, ಶುಂಠಿ, ಸ್ವಲ್ಪ ಉಪ್ಪು ಸೇರಿಸಿ ತಯಾರಿಸುತ್ತಾರೆ. 100 ಗ್ರಾಂ ಗೆ 20 ರೂ ನಂತೆ ಮಾರಾಟ ಮಾಡುತ್ತಿರುವರು. ಹಣ್ಣು ಸುಟ್ಟು ಬಿಸಿ ತಿರಳನ್ನು ಸ್ನಾನ ಮಾಡುವಾಗ ತಿಕ್ಕಿ ತೊಳೆದರೆ ತಲೆಯ ಹೊಟ್ಟು ಕಡಿಮೆಯಾಗುತ್ತದೆ. ಸಜ್ಜನ್‌ರವರ ಕೋರಿಕೆ, ಈ ಬ್ಯಾಲದ ಹಣ್ಣು ಅಳಿವಿನ ಹಂಚಿನಲ್ಲಿದ್ದೆ ಇದನ್ನು ಸರ್ಕಾರದ ಸಂಸ್ಥೆಯವರು ಉಳಿಸಿ ಬೆಳಸಬೇಕು ಎನ್ನುವರು. ಕಾರಣ ಔಷಧಿಯ ಗುಣವುಳ್ಳ ಈ ಹಣ್ಣು ಉಳಿಯಬೇಕು ಅಲ್ಲದೇ ರೈತರಿಗೆ ವಿಕೋಪಗಳಿಂದಾಗಬಹುದಾದ ಸಮಸ್ಯೆಗಳು ಕಡಿಮೆಯಾಗುತ್ತವೆ. ಮಳೆ ಕಡಿಮೆಯಾದರೂ ಬೆಳೆ ಬರುತ್ತದೆ, ಹೆಚ್ಚಾದರೂ ಬರುತ್ತದೆ, ಪ್ರಾಣಿ ಪಕ್ಷಿಗಳ ಕಾಟವಿರುವುದಿಲ್ಲ, ಹಳ್ಳ, ಕೊಳ್ಳ, ಬೆಟ್ಟ ಬಂಜರು ಜಮೀನಿನಲ್ಲಿಯೂ ಕೂಡ ಬೆಳೆಯುತ್ತದೆ.


ಹೆಚ್ಚಿನ ಮಾಹಿತಿಗೆ ಆವರನ್ನು ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ 9902661597.

ಹಿತ್ತಲ ಗಿಡದ ಹಳೆ ಸಂಚಿಕೆಗಳು ಲಭ್ಯವಿದೆ.
ರೂ. 600/- ಕಳುಹಿಸಿ ಪಡೆಯಬಹುದು.
- ಸಂಪದಕರು


ಇಲಿ ನಿಯಂತ್ರಣ- ಹಲವು ದೇಶೀಯ ಪದ್ಧತಿಗಳು

1.ವಿವಿಧ ಪ್ರದೇಶ ಹಾಗೂ ಸಂಸ್ಕೃತಿಗಳ ಹೋಲಿಕೆ :- ಒಂದೇ ರೀತಿಯ ಸಮಸ್ಯೆಗೆ ಹಲವು ಬಾರಿ ಪ್ರದೇಶ ಅಥವಾ ಸಂಸ್ಕೃತಿಗಳನ್ನು ಮೀರಿ ದೇಸೀಯವಾದ ಒಂದೇ ರೀತಿಯ ಪರಿಹಾರಗಳು ಹುಟ್ಟಿಕೊಂಡಿರುತ್ತವೆ, ಎನ್ನುವುದಕ್ಕೆ ಇಲಿ ನಿಯಂತ್ರಣವೇ ಉದಾಹರಣೆ.


ಸ್ವಿಟ್ಜರ್‌ಲ್ಯಾಂಡ್ ದೇಶದ ಜರ್‌ಮಾತ್ ಎಂಬ ಪಟ್ಟಣದಲ್ಲಿ ಇಲಿಗಳ ಕೈಗೆ ಸಿಗದಂತೆ ಗಿಣ್ಣನ್ನು ಸಂರಕ್ಷಿಸುವುದು ದೊಡ್ಡ ಸಮಸ್ಯೆಯಾಗಿತ್ತು. ಅದೇ ರೀತಿ ಭೂತಾನ್ ದೇಶದ ಜನರಿಗೆ ಒಣಗುವುದಕ್ಕಾಗಿ ಹಗ್ಗದಿಂದ ನೇತು ಹಾಕಿದ ಮಾಂಸ ಅಥವಾ ಗಿಣ್ಣನ್ನು ಇಲಿಗಳಿಂದ ರಕ್ಷಿಸುವುದು ಸಮಸ್ಯೆ. ಇದೇ ರೀತಿಯಾಗಿ ಮಹಾರಾಷ್ಟ್ರ ಹಾಗೂ ಕರ್ನಾಟಕದ ರಾಜ್ಯದ ಕೆಲವು ಪ್ರಾಂತ್ಯಗಳಲ್ಲಿ ಜನರಿಗೆ ಹಗ್ಗದಲ್ಲಿ ಕಟ್ಟಿ ನೇತು ಹಾಕಿದ ಆಹಾರದ ಪದಾರ್ಥ ಹಾಗೂ ಧಾನ್ಯವನ್ನು ಇಲಿಗಳಿಂದ ಕಾಪಾಡುವುದು ಸಮಸ್ಯೆಯಾಗಿತ್ತು. ಈ ಮೂರು ಪ್ರದೇಶಗಳ ಜನರು ಕಂಡುಕೊಂಡ ಪರಿಹಾರ ಸುಮಾರಾಗಿ ಒಂದೇ ತೆರನಾದದ್ದು.



ಸ್ವಿಟ್ಜರ್‌ಲ್ಯಾಂಡ್ ದೇಶದ ಜನರು ಗಿಣ್ಣನ್ನು ಸಂಗ್ರಹಿಸುತ್ತಿದ್ದ ಸಂಗ್ರಹಾಲಯಗಳ ಕಾಲುಗಳಿಗೆ ಚಪ್ಪಟೆಯಾದ ಕಲ್ಲನ್ನಿಡುತ್ತಿದ್ದರು. ಕಾಲನ್ನು ಹತ್ತಿ ಬಂದ ಇಲಿ ಚಪ್ಪಟೆಯಾದ ಕಲ್ಲನ್ನು ದಾಟಿ ಬರಲು ಸೋಲುತ್ತಿತ್ತು. ಇದೇ ರೀತಿ ಈಗಿನ ಸಂಗ್ರಹಣಾಲಯಗಳಲ್ಲಿ ಸುತ್ತಕಟ್ಟೆ ಕಟ್ಟಿ ಇಲಿ ನಿಯಂತ್ರಿಸುತ್ತಾರೆ.



ಭೂತಾನಿನ ಜನರು ಹಗ್ಗದ ಎರಡೂ ತುದಿಗೆ ಮುಳ್ಳಿರುವ ಹೂ ಅಥವಾ ಗಿಡದ ಟೊಂಗೆಗಳನ್ನು ಸಿಕ್ಕಿಸಿ ಇಲಿ ತಡೆದರು.



ಮಹಾರಾಷ್ಟ್ರ ಹಾಗೂ ಕರ್ನಾಟಕದ ಜನರು ಹಗ್ಗಕ್ಕೆ ಕೆಳಮುಖವಾಗಿರುವಂತೆ ಬುಟ್ಟಿ ಸಿಕ್ಕಿಸಿ ಇಲಿ ಬರುವುದನ್ನು ತಪ್ಪಿಸುವರಂತೆ. ಇನ್ನು ನಮ್ಮ ರಾಜ್ಯದಲ್ಲಿ ಬಹಳ ಕಡೆ ಇಲಿ, ಹೆಗ್ಗಣಗಳ ನಿಯಂತ್ರಣಕ್ಕೆ ಅನುಸರಿಸುತ್ತಿರುವ ಕೆಲವು ಕ್ರಮಗಳನ್ನು ಈ ಮುಂದೆ ಕೊಡಲಾಗಿದೆ.

ವೃತ್ತಿಯಲ್ಲಿ ಉಪಾಧ್ಯಾಯರಾಗಿರುವ ಕಾಸರಗೋಡು ಜಿಲ್ಲೆಯ ಪೆರ್ಲಾದ ಕೆ. ಉಮೇಶ್‌ರವರು ಇಲಿಗಳನ್ನು ನಿಯಂತ್ರಿಸುವ ಇದೇ ರೀತಿಯ ಸುಲಭ ವಿಧಾನವೊಂದನ್ನು ಕಂಡು ಹಿಡಿದಿದ್ದಾರೆ.



ಒಂದು ಮರದ ಹಲಗೆಗೆ ಇಲಿ ತೂರುವಷ್ಟು ಸುತ್ತಳತೆ ಇರುವ ಒಂದು ಪೈಪನ್ನು ಜೋಡಿಸಿದ್ದಾರೆ. ಪೈಪಿನ ಮತ್ತೊಂದು ತುದಿಯ ಕೆಳಗೆ ನೀರು ತುಂಬಿದ ಬಕೆಟನ್ನು ಇರಿಸುತ್ತಾರೆ. ಇಲಿಗಳು ಈ ಪೈಪಿನೊಳಗೆ ಪ್ರವೇಶಿಸಿದಾಗ ಪೈಪು ಬಾಗಿ ಇಲಿಗಳು ಬಕೇಟಿನಲ್ಲಿ ಇರುವ ನೀರಿಗೆ ಬೀಳುವಂತೆ ಮಾಡುತ್ತದೆ. ಹೀಗೆ ಒಂದಾದ ನಂತರ ಮತ್ತೊಂದರಂತೆ, ಇಲಿಗಳು ನೀರಿಗೆ ಬೀಳುತ್ತಿರುತ್ತವೆ. ಇಲಿಗಳನ್ನು ಆಕರ್ಷಿಸಲು ಅವುಗಳು ಇಷ್ಟ ಪಡುವ ಆಹಾರವನ್ನು ಪೈಪಿನ ತುದಿಯಲ್ಲಿ ಇರಿಸಬಹುದು ಎನ್ನುತ್ತಾರೆ ಉಮೇಶ್ ಮಾಸ್ತರರು.

2.ಇಲಿಗಳಿಗೆ ಗೆಜ್ಜೆ :-ಪಂಜರ ಉಪಯೋಗಿಸಿ ಒಂದು ಹೆಗ್ಗಣವನ್ನು ಹಿಡಿಯಲಾಗುತ್ತದೆ. ಅನಂತರ ಒಂದೆರಡು ಕವಲು ಕಟ್ಟಿಗೆಗಳಿಂದ ಈ ಹೆಗ್ಗಣವನ್ನು ಬಿಗಿಯಾಗಿ ಹಿಡಿದು ಅದರ ಗುದದ್ವಾರವನ್ನು ದಪ್ಪವಾದ ದಾರ ಉಪಯೋಗಿಸಿ ಹೊಲಿಯುತ್ತಾರೆ. ಈ ರೀತಿ ಹೊಲಿಯುವಾಗ 1-2 ಸಣ್ಣ ಗೆಜ್ಜೆಗಳನ್ನು ಸೇರಿಸುತ್ತಾರೆ. ಹೀಗೆ ಗೆಜ್ಜೆ ಹೊಲಿದ ಹೆಗ್ಗಣವನ್ನು ಅದರ ಬಿಲದ ಬಳಿ ಬಿಡುತ್ತಾರೆ ಕೂಡಲೇ ಬಿಲದೊಳಕ್ಕೆ ಹೋಗುವ ಹೆಗ್ಗಣದ ಓಡಾಟದಿಂದ ಅವುಗಳು ತೋಡಿರುವ ಸುರಂಗ ಮಾರ್ಗಗಳ ಜಾಡು ಗೊತ್ತಾಗುತ್ತದೆ. ಇದರಿಂದ ಬಿಲಗಳನ್ನು ಗುರುತಿಸಿ, ಜನ ಅದರ ಹತ್ತಿರ ಕಟ್ಟಿಗೆಯೊಂದಿಗೆ ಸಿದ್ದರಾಗುತ್ತಾರೆ. ಹೊಸದಾದ ಗೆಜ್ಜೆಯ ಶಬ್ದಕ್ಕೆ ಭಯಗೊಂಡ ಹೆಗ್ಗಣಗಳು

ಬಿಲದಿಂದ ಹೊರಗೆ ಬರುತ್ತವೆ. ಅಥವಾ ಕೆಲವು ಗಂಟೆಗಳ ನಂತರ ಮಲವಿಸರ್ಜನೆ ಮಾಡಲು ತೊಂದರೆಯಾಗಿ ಈ ಹೆಗ್ಗಣ ಬೇರೆಯವುಗಳನ್ನು ಕಚ್ಚಲು ಶುರುಮಾಡುತ್ತದೆ. ಅಳಿದುಳಿದ ಹೆಗ್ಗಣಗಳು ಬೇಗ ಹೊರಗೆ ಓಡಿ ಬರುತ್ತವೆ. ಹೊರಗೆ ಬಂದ ಹೆಗ್ಗಣಗಳನ್ನು ಹೊಡೆದು ಸಾಯಿಸುತ್ತಾರೆ. ಕೆಲವನ್ನು ಮನೆಯಲ್ಲಿ ಸಾಕಿದ ನಾಯಿಗಳು ಅಟ್ಟಿಸಿಕೊಂಡು ಹೋಗಿ ಸಾಯಿಸುತ್ತವೆ. ತಪ್ಪಿಸಿಕೊಂಡು ಹೋದ ಹೆಗ್ಗಣಗಳು ಬಹಳ ದಿನಗಳ ಕಾಲ ವಾಪಾಸು ಬರುವುದಿಲ್ಲ. ಬಿಲಗಳನ್ನು ಗುರುತಿಸಿದ ಮನೆಯವರು ಅವುಗಳನ್ನು ಭದ್ರವಾಗಿ ಮುಚ್ಚುತ್ತಾರೆ.ಗೆಜ್ಜೆ ಕಟ್ಟಿ ಹೊಲಿದ ಹೆಗ್ಗಣವೂ ಕೆಲ ದಿನಗಳಲ್ಲಿ ಸಾಯುತ್ತದೆ. ಇದೇ ರೀತಿ ಇಲಿಗಳ ಕಾಲಿಗೆ ಗೆಜ್ಜೆ ಕಟ್ಟಿ ಅವುಗಳನ್ನು ನಿಯಂತ್ರಿಸಲಾಗುತ್ತದೆ ಬೋನಿನ ಸಹಾಯದಿಂದ ಹಿಡಿದ ಇಲಿಯನ್ನು ಅದರ ಮುಂಭಾಗದ ಕಾಲುಗಳಿಗೆ ಮೃದುವಾದ ತಂತಿಯ ಸಹಾಯದಿಂದ ಸಣ್ಣ ಗೆಜ್ಜೆಯನ್ನು ಕಟ್ಟಲಾಗುತ್ತದೆ. ಅದರ ಓಡಾಟದಿಂದ ಬರುವ ಗೆಜ್ಜೆಯ ಶಬ್ದಕ್ಕೆ ಎಲ್ಲಾ ಇಲಿಗಳು ಓಡಿಹೋಗುತ್ತವೆ. ಅವುಗಳನ್ನು ಈ ಇಲಿಯೂ ಹಿಂಬಾಲಿಸುತ್ತದೆ.ಈ ರೀತಿ ಗಲಿಬಿಲಿಗೊಂಡ ಇಲಿ ಸಮೂಹವನ್ನು ನಿಯಂತ್ರಿಸಲು ಸುಲಭವಾಗುತ್ತದಂತೆ.

3.ಬೆಂಡಿನ ಬಳಕೆ :- ಇನ್ನೊಂದು ಹತೋಟಿ ಕ್ರಮದಲ್ಲಿ, ಒಣಗಿದ ಜೋಳದ ದಂಟಿನ ಒಳಗಡೆ ಇರುವ ಬೆಂಡನ್ನು ಹೊರಗೆ ತೆಗೆಯುತ್ತಾರೆ. ಈ ಬೆಂಡನ್ನು ಅರ್ಧ ಸೆಂ.ಮೀ.ನಷ್ಟು ಸಣ್ಣ ತುಂಡುಗಳಾಗಿ ಮಾಡಿ ಕೈಯಿಂದ ಚೆನ್ನಾಗಿ ಹೊಸೆಯುತ್ತಾರೆ. ಈ ಬೆಂಡಿನ ಚೂರುಗಳಿಗೆ ಸ್ವಲ್ಪ ಬೆಲ್ಲದ ಪಾಕ ಸವರಿ ಒಂದೆರಡು ಹಿಡಿಯಷ್ಟನ್ನು ಹೆಗ್ಗಣದ ಬಿಲಗಳ ಹತ್ತಿರ ಅಥವಾ ಅವುಗಳು ಹೆಚ್ಚಾಗಿ ಓಡಾಡುವ ದಾರಿಯಲ್ಲಿ ಹರಡುತ್ತಾರೆ. ಸಿಹಿಯಾಗಿರುವ ಬೆಂಡನ್ನು ತಿಂದ ಹೆಗ್ಗಣಗಳಿಗೆ ಇವುಗಳನ್ನು ಜೀರ್ಣಿಸುವ ಶಕ್ತಿ ಇಲ್ಲ, ಹೊಟ್ಟೆಯೊಳಗಡೆ ಈ ಬೆಂಡಿನ ಚೂರುಗಳು ನೀರನ್ನು ಹೀರಿ ದಪ್ಪವಾಗಿ ಮಲವಿಸರ್ಜನೆಗೆ ತಡೆಯುಂಟು ಮಾಡುತ್ತವೆ. ಕೆಲವು ದಿನಗಳ ನಂತರ ಹೆಗ್ಗಣ ಹೊಟ್ಟೆಯೂದಿ ಸಾಯುತ್ತದೆ. ಇದೇ ರೀತಿ ಬಲ್ಬಿನ ಪುಡಿ ಬಳಸಿಕೊಂಡು ಇಲ ಸಂತತಿ ಕಡಿಮೆ ಮಾಡಲಾಗುತ್ತದ.

4.ಬಲ್ಬಿನ ಪುಡಿ ಪಾಷಾಣ :-90 ಭಾಗ ಎಳ್ಳು, ಕಡಲೆ ಬೀಜ, ಹುಚ್ಚೆಳ್ಳು, ಈ ರೀತಿಯ ಯಾವುದಾದರೊಂದು ಹಿಟ್ಟು + 5 ಭಾಗ ದಪ್ಪ ಕಾಳಿನ ಸಕ್ಕರೆ + 5 ಭಾಗ ಬಲ್ಬಿನ ಪುಡಿ, ಅಥವಾ ಟ್ಯೂಬ್‌ನ ಪುಡಿಯನ್ನು ಬೆರಸಿ ಇಲಿಗಳ ಬಿಲಗಳ ಹತ್ತಿರ ಇಟ್ಟರೆ ಅವು ತಿಂದು ಒಂದು ವಾರದಲ್ಲಿ ಸಾಯುತ್ತವೆಯಂತೆ.

5.ಬೆಕ್ಕಿನ ಮಲದಿಂದ :-ಮಹಾರಾಷ್ಟ್ರದ ಸಮಾಜಕಾರ್ಯಕರ್ತ ಶ್ರೀ ಭಾಸ್ಕರ ಸಾವೆಯವರು ತೆಂಗಿನ ತೋಟದಲ್ಲಿ ಇಲಿಗಳ ಕಾಟ ತಡೆಯಲು ಅದರ ವೈರಿ ಬೆಕ್ಕಿನ ಮಲವನ್ನು ಸ್ವಲ್ಪ ಮರದ ಸುತ್ತ ಹಾಕುವರಂತೆ. ಯಾವುದೇ ಪ್ರಾಣಿಗಳು ಅವುಗಳ ವೈರಿಯ ಮಲದವಾಸನೆ ಬೇಗ ಗುರುತಿಸಿ, ಅದರಿಂದ ಅವುಗಳ ವೈರಿಯೇ ಅಲ್ಲಿರಬಹುದೆಂದು ಹೆದರಿ ಹತ್ತಿರವೂ ಸುಳಿಯಲಾರವಂತೆ. ಹಾಗಾಗಿಯೇ, ಈ ಸುಳಿವನ್ನು ಮುಚ್ಚಿಹಾಕಲು ಬೆಕ್ಕುಗಳು ತಮ್ಮ ಮಲವನ್ನು ಮಣ್ಣಿನಲ್ಲಿ ಹೂತಿಡುವುದು ಎಂಬುದು ನಮ್ಮ ಸಾವಯವ ಕೃಷಿಕ ನಾರಾಯಣ ರೆಡ್ಡಿಯವರ ಅನಿಸಿಕೆ.

6.ಬಿಳಿ ಇಲಿ ಸಾಕಿ ಇಲಿಗಳ ನಿಯಂತ್ರಣ :-ಮನೆಗಳಲ್ಲಿ ಇಲಿಗಳು ಹೆಚ್ಚಾದಾಗ ಬೆಕ್ಕು ಸಾಕಿ ನಿಯಂತ್ರಿಸುವುದು ಮೊದಲಿನಿಂದ ಬಂದ ವಾಡಿಕೆಯಾಗಿದೆ. ಆದರೆ ಕೆಲ ರೈತರು ಬೇರೆ ಪ್ರಯತ್ನ ಮಾಡಿ ಇಲಿಗಳನ್ನು ನಿಯಂತ್ರಿಸಿದ್ದಾರೆ. ಇಲಿಗಳಲ್ಲಿ ಕಪ್ಪು ಇಲಿಗಳು ಮಾತ್ರವಲ್ಲ ಬಿಳಿ ಇಲಿಗಳೂ ಇದ್ದು ಅಂತಹ ಬಿಳಿ ಇಲಿ ಒಂದನ್ನು ಸಾಕಿದರೆ ಅದು ನಮ್ಮೊಡನೆ ಬೆಕ್ಕಿನಂತೆ ಹೊಂದಿಕೊಂಡು ಮನೆಯಲ್ಲೆಲ್ಲಾ ಓಡಾಡಿಕೊಂಡು ಇರುತ್ತದೆಯಂತೆ ಬಿಳಿ ಇಲಿ ಹಾಗೇ ಇದ್ದರೆ ಕಪ್ಪು ಇಲಿಗಳು ಹೆದರಿ ಮನೆ ಬಿಟ್ಟು ಓಡಿ ಹೋಗುತ್ತವೆಯಂತೆ. ಚನ್ನರಾಯಪಟ್ಟಣ ತಾಲೂಕು ತಿಮ್ಲಾಪುರದಲ್ಲಿ ಹರಿಂಜಯ ಎಂಬ ಸಾವಯವ ಕೃಷಿಕ ಈ ಮರ್ಮ ಅರಿತು ಬಿಳಿ ಇಲಿ ಸಾಕಿ, ಅವುಗಳನ್ನು ವೃದ್ಧಿಮಾಡಿ ರೈತರಿಗೆ ಪರಿಚಯಿಸುತ್ತಾ ಕೇಳಿದವರಿಗೆ ಉಚಿತವಾಗಿ ಕೊಟ್ಟಿರುವರಂತೆ.

7.ಮೂಗಿಲಿಯಿಂದ ಇಲಿ ನಿಯಂತ್ರಣ:- ಇದೇ ರೀತಿ ಇಲಿ ಜಾತಿಯಲ್ಲಿರುವ ಇನ್ನೊಂದು ಪ್ರಾಣಿಯಾದ ಮೂಗಿಲಿಯನ್ನು ಸಾಕುವ ಒಂದು ಕುತೂಹಲ ಪದ್ಧತಿ ನಮ್ಮ ಹಾಸನದ ಜಿಲ್ಲೆಯಲ್ಲಿ ಈ ಹಿಂದೆ ಜಾರಿಯಲ್ಲಿತ್ತು. ಈ ಮೂಗಿಲಿ ಇದ್ದ ಜಾಗದಲ್ಲಿ ಇತರ ಇಲಿಗಳು, ಹಾವುಗಳು, ಚೇಳುಗಳು ಕೂಡ ಇರುವುದಿಲ್ಲವಂತೆ. ಕಾರಣ ಈ ಮೂಗಿಲಿ ಒಂದು ರೀತಿಯ ಘಾಟು ವಾಸನೆಯನ್ನು ಬಿಡುತ್ತದೆಯಂತೆ. ಈ ಘಾಟು ವಾಸನೆಗೆ ಇಲಿ, ಹಾವು, ಚೇಳುಗಳು ದೂರ ಹೋಗುತ್ತವೆ. ಮೂಗಿಲಿಯನ್ನು ಸಾಕು ಪ್ರಾಣಿಯಂತೆ ಸಾಕಿದರೆ ಉತ್ತಮ ಹಾಗೂ ಅನುಕೂಲಕರವಾಗಿರುತ್ತದೆ. ಒಂದು ಬಟ್ಟಲಿನಲ್ಲಿ ಹಾಲು ಅನ್ನ ಹಾಕಿ ಮೂಗಿಲಿಗೆ ರೂಢಿ ಮಾಡಿದರೆ ಅದು ಬಟ್ಟಲಿನಲ್ಲಿ ಮಾತ್ರ ತಿನ್ನಲು ರೂಢಿ ಮಾಡಿಕೊಳ್ಳುತ್ತದೆಯಂತೆ. ಈ ರೀತಿ ಮೂಗಿಲಿಯನ್ನು ಸಾಕುವ ಪದ್ಧತಿಯನ್ನು ಬೇಲೂರು ತಾಲ್ಲೂಕಿನ ಮಲ್ಲಿಕಾರ್ಜುನಪುರದ ಸಿದ್ಧರಾಮೇಗೌಡರು ಬಹಳ ಹಿಂದೆ ರೂಢಿಸಿಕೊಂಡಿದ್ದರಂತೆ ಅವರು ರೇಷ್ಮೆ ಹುಳು ಸಾಕುತ್ತಿದ್ದಾಗ ಇಲಿಗಳು ಹುಳುಗಳನ್ನು ತಿನ್ನಲು ಬರುತ್ತಿದ್ದವು. ಆಗ ಈ ರೀತಿ ಮೂಗಿಲಿ ಸಾಕಿ ರೇಷ್ಮೆ ಹುಳು ಹಾಗೂ ರೇಷ್ಮೆ ಗೂಡನ್ನು ಇಲಿಗಳ ಹಾವಳಿಯಿಂದ ಪಾರು ಮಾಡಿದ್ದರಂತೆ. ಮೂಗಿಲಿ ಬೆಕ್ಕಿನಂತೆ ಮಾನವನಿಗೆ ಹೊಂದಿಕೊಳ್ಳುತ್ತದೆ ಎಂಬುದು ಇವರ ಸ್ವಅನುಭವ.

8.ಇಲಿಗಳಿಗೆ ಬಣ್ಣ:-ಗುಜರಾತಿನ ಸೌರಾಷ್ಟ್ರ ಪ್ರಾಂತ್ಯಗಳಲ್ಲಿ ಬೋನಿನಲ್ಲಿ ಆಹಾರವನ್ನಿರಿಸಿ ಮೊದಲು ಒಂದು ಇಲಿಯನ್ನು ಹಿಡಿಯುತ್ತಾರೆ. ಹಿಡಿದ ಇಲಿಗೆ ಅರಿಶಿಣ ದ್ರಾವಣ ಮಾಡಿ ಸುರಿಯುತ್ತಾರೆ. ಹೀಗೆ ಹಳದಿ ಬಣ್ಣ ಹೊಂದಿದ ಇಲಿಯನ್ನು ನಂತರ ಉಗ್ರಾಣದಲ್ಲೋ ಅಥವಾ ಜಮೀನಿನಲ್ಲೋ ಬಿಡುತ್ತಾರೆ. ಈ ಹೊಸ ಇಲಿಯನ್ನು ಕಂಡ ಉಳಿದ ಇಲಿಗಳೂ ಅಲ್ಲಿಂದ ಜಾಗ ಖಾಲಿ ಮಾಡುತ್ತವೆಯಂತೆ.

9.ಹೊಗೆಯಿಂದ ಇಲಿಗಳ ನಿಯಂತ್ರಣ:- ವಾಸದ ಮನೆಗಳಲ್ಲಿ ಗೋಡೆಯ ಬಿರುಕುಗಳು ಮುಂತಾದವುಗಳಲ್ಲಿ ಇಲಿ, ಹಲ್ಲಿ, ಒಮ್ಮೊಮ್ಮೆ ಹಾವುಗಳು ಸೇರುವುದುಂಟು. ಒರಿಸ್ಸಾದ ರೈತರು ಇವುಗಳನ್ನು ಓಡಿಸಲು ಮನೆಯ ಕಿಟಕಿ, ಬಾಗಿಲುಗಳನ್ನು ಮುಚ್ಚಿ ಮಡಕೆಯಲ್ಲಿ ಬೆಂಕಿಯ ಕೆಂಡದ ಮೇಲೆ ಅರಿಶಿಣದ ಪುಡಿಯನ್ನು ಹಾಕುತ್ತಾರೆ. ಹೊಗೆಯನ್ನು ಹೊರಗೆ ಹೋಗದಂತೆ ಸ್ವಲ್ಪ ಕಾಲ ನೋಡಿಕೊಳ್ಳುತ್ತಾರೆ. ನಂತರ ಕಿಟಕಿ ಬಾಗಿಲುಗಳನ್ನು ತೆರೆದಾಗ ಹಾವು, ಇಲಿ, ಹಲ್ಲಿ ಮುಂತಾದವುಗಳು ಓಡಿ ಹೋಗುತ್ತವೆ. ಹೀಗೆ ಮಾಡುವುದರಿಂದ ಮನೆಯನ್ನು ಸ್ವಚ್ಚಗೊಳಿಸಿದಂತಾಗುತ್ತದೆ. ಜೊತೆಗೆ ಕಾಲರ ಮತ್ತು ಕ್ಷಯ ರೋಗಿಗಳದ್ದಲ್ಲಿ ಸೋಂಕನ್ನು ಸ್ವಲ್ಪ ಮಟ್ಟಿಗೆ ತಡೆಯುವಲ್ಲಿ ಸಹಾಯವಾಗುತ್ತದೆ. ಹಳ್ಳಿಗಳಲ್ಲಿ ಕಾಲರ ಹರಡಿರುವ ಕಾಲದಲ್ಲಿ ಹೀಗೆ ಮಾಡುವುದು ಒರಿಸ್ಸಾದ ಹಳ್ಳಿಯ ಜನರ ವಾಡಿಕೆ ಹಾಗೇ, ಮೆಣಸಿನ ಕಾಳನ್ನು ಬಿಡಿಸಿದ ದಂಟನ್ನು ಬಿಲಗಳಲ್ಲಿ ಇಟ್ಟು ಸುಟ್ಟು ಹೊಗೆ ಹಾಯಿಸುವುದರಿಂದ ಹೆಗ್ಗಣಗಳು ಸಾಯುತ್ತವೆ ಎಂದು ತಿಳಿದುಬಂದಿರುತ್ತದೆ.

10. ವಿಧವಿಧ ಸಸ್ಯಗಳಿಂದ ಇಲಿಗಳ ನಿಯಂತ್ರಣ:- ದೇವನಹಳ್ಳಿ ತಾಲ್ಲೂಕಿನ ಚೆನ್ನರಾಯಪಟ್ಟಣದ ಸಣ್ಣಪ್ಪನವರು ಗೊಬ್ಬರದ ಗಿಡದ *(Gliricidia sepium)* ಸೊಪ್ಪನ್ನು ಇಲಿಗಳು ಓಡಾಡುವ ಸ್ಥಳಗಳಲ್ಲಿ ಹಾಕುತ್ತಾರೆ. ಇಲಿಗಳು ಸೊಪ್ಪಿನ ಮೇಲೆ ಓಡಾಡಿದಾಗ ಸೊಪ್ಪಿನ ಘಾಟು ವಾಸನೆಗೆ ಬೆದರಿ ಪರಾರಿಯಾಗುತ್ತವೆಯಂತೆ ಹಾಗೇ, ಹೊಲಗದ್ದೆ, ತೋಟಗಳಲ್ಲಿ ಇಲಿಗಳ ಕಾಟವಿದ್ದಲ್ಲಿ ಬೆಳೆಯ ಸುತ್ತಲು ಎಕ್ಕದ ಗಿಡಗಳನ್ನು ಬೆಳಸಿದರೆ ಇಲಿಗಳ ಹಾವಳಿಯನ್ನು ನಿಯಂತ್ರಿಸಬಹುದೆಂದು ಅದೇ ಊರಿನ ಎನ್. ನಾಗರಾಜುರವರು ತಿಳಿಸಿದ್ದಾರೆ.

ಗುಬಸಿ ಮುಳ್ಳು (*Mysorensis,Roth*) ಅಥವಾ ಗಂಡು ಕೊಟ್ಟೇ ಮುಳ್ಳಿನ ಗಿಡವನ್ನು ಕನಕಪುರದ ಸುತ್ತಮುತ್ತಲಿನ ರೈತರ ಹೊಲದಲ್ಲಿ ಹಾಕಿ ಧಾನ್ಯ ತಿನ್ನಲು ಬರುವ ಮೂಷಿಕಗಳ ಮೂತಿಗೆ ಚುಚ್ಚುವಂತೆ ಮಾಡಿ ಅವುಗಳನ್ನು ಬರದಂತೆ ಮಾಡುತ್ತಾರೆ. ಧಾನ್ಯ ಸಂಗ್ರಹಿಸಿಡುವ ಸ್ಥಳಗಳಲ್ಲಿ ಅಥವಾ ಇಲಿಗಳ ಬಿಲಗಳ ಬಾಯಿಯಲ್ಲಿ ಈ ಮುಳ್ಳನ್ನಿಟ್ಟರಂತೂ ಇದರ ಪರಿಣಾಮ ಅದ್ಭುತ.

ಗುಜರಾತಿನ ಡಾಂಗ್ಸ್ ಜಿಲ್ಲೆಯ ಜನರು ಲೌಟ್ ಎಂಬ ಗಿಡವೊಂದನ್ನು ಇಲಿಗಳ ನಿಯಂತ್ರಣಕ್ಕೆ ಬಳಸುವುದೊಂದು ವಿಶೇಷ. ಬೇರಿನಿಂದ ಬೆಳೆಯುವ ಇದು ಮಳೆಗಾಲದಲ್ಲಿ ಹೆಚ್ಚಾಗಿ ಅರಣ್ಯ ಪ್ರದೇಶದಲ್ಲಿ ಕಂಡು ಬರುತ್ತದೆ. ನುಣುಪಾದ ಇದರ ರೆಂಬೆ (ಟೊಂಗೆ)ಗಳು ವಿವಿಧ ಬಣ್ಣಗಳಿಂದ ಅಲಂಕೃತವಾಗಿದ್ದು ನೋಡಲು ಹಾವಿನಂತೆ ಗೋಚರಿಸುತ್ತವೆ. .ಈ ರೀತಿ ಸುಮಾರು 1.5 ರಿಂದ 2.0 ಅಡಿ ಉದ್ದದ ರೆಂಬೆಗಳನ್ನು ಇಟ್ಟಾಗ ಇಲಿಗಳು ಹಾವೆಂದು ತಿಳಿದು ಹೆದರಿ ದೂರ ಓಡುತ್ತವೆ. ಈ ರೆಂಬೆಗಳು ಹದಿನೈದು ದಿನಗಳಲ್ಲಿ ಒಣಗುತ್ತವೆ. ಆದ್ದರಿಂದ ಈ ರೆಂಬೆಗಳನ್ನು ಪ್ರತಿ ವಾರಕ್ಕೊಮ್ಮೆ ಬದಲಾಯಿಸಿ ಇಡುವುದರಿಂದ ಉತ್ತಮ ಇಲಿ ನಿಯಂತ್ರಣ ಸಾಧ್ಯ.

ಉತ್ತರಾಂಚಲದ ಉಧಮ್ ಸಿಂಗ್‌ನಗರ ಜಿಲ್ಲೆಯ ರೈತ ಶಿವದತ್ ಪಾಠಕ ತಮ್ಮ ಹೊಲದಲ್ಲಿ ಚೇಳಿನ ಹುಲ್ಲನ್ನು, (ಈ ಹುಲ್ಲಿನ ಮುಳ್ಳು ಚೇಳಿನ ಕೊಂಡಿಯಂತೆ ಕಾಣಸುವುದರಿಂದ ಚೇಳಿನ ಹುಲ್ಲು ಎನ್ನುವರು) ಅಲ್ಲಲ್ಲಿ ಬಿಸಾಡುತ್ತಾರೆ. ಹೀಗೆ ಬಿದ್ದ ಹುಲ್ಲಿನ ಮುಳ್ಳು ಚೇಳಿನ ಕೊಂಡಿಯಂತೆ ಕಾಣಿಸುವುದರಿಂದ ಇಲಿಗಳು ಬೆಳೆಯ ಹತ್ತಿರವೂ ಸುಳಿಯುವುದಿಲ್ಲ. ಈ ಮುಳ್ಳಿನ ಸಂಪರ್ಕದಿಂದ ಇಲಿಗಳಲ್ಲಿ ನವೆ, ಜೊಲ್ಲು ಸುರಿಯುವಿಕೆ ಕಾಣಿಸುತ್ತದೆಯಂತೆ. ಇದರ ಹತ್ತಿರ ಇಲಿಗಳು ಸುಳಿದರೆ ಇವು ಇಲಿಗಳಿಗೆ ಮತ್ತಷ್ಟೂ ಬಾಧೆ ನೀಡುತ್ತದೆ.

ಗ್ಲಿರಿಸಿಡಿಯಾ :- "ಎಣ್ಣೆಯಲ್ಲಿ ಕರಿದ ಬೊಂಡ, ವಡೆಗಳಿಗೆ ಗ್ಲಿರಿಸಿಡಿಯಾದ ಎಲೆಯ ರಸವನ್ನು ಒಳಗಡೆ ಸೇರಿಸಿ ಇಲಿ ಇರುವ ಕಡೆ ಇಟ್ಟರೆ ಇದನ್ನು ತಿಂದು ಇಲಿ ಸಾವನ್ನಪ್ಪುತ್ತದೆ "ಎನ್ನುತ್ತಾರೆ ಶಿವಮೊಗ್ಗೆಯ ಎನ್.ಎಮ್. ಗಿರೀಶ್ ರವರು. ಇವರ ಪ್ರಕಾರ ಗ್ರೀಕ್ ದೇಶದ ಭಾಷೆಯಲ್ಲಿ ಗ್ಲಿರಿ ಅಂದರೆ ಇಲಿ ಸಿಡಿಯಾ ಅಂದರೆ ಸಾಯುವುದು ಅದಕ್ಕಾಗಿ ಈ ಗಿಡಕ್ಕೆ ಗ್ಲಿರಿಡಿಯಾ ಎಂದು ಹೆಸರೂ ಬಂದಿದೆ ಎನ್ನುವರು.

11.ಗೂಬೆ ಮೂಲಕ ಇಲಿಗಳ ನಿಯಂತ್ರಣ :- ನಮ್ಮ ಸಾವಯವ ರೈತರಾದ ಹಾಸನದ ಸಂತೇಶಿವರದ ಬಸವರಾಜುರವರು ಗೂಬೆ ಸಾಕಿ ತಮ್ಮ ತೋಟದಲ್ಲಿ ಇಲಿಗಳ ನಿಯಂತ್ರಣವನ್ನು ಮಾಡಿದ್ದಾರೆ. ಇಲಿಗಳು ಗೂಬೆಗಳ ಸಹಜ ಆಹಾರವಾಗಿದೆ. ಇವು ದಿನವೂ ಒಂದು ಅಥವಾ ಎರಡು ಇಲಿಗಳನ್ನು ಹಿಡಿದು ತಿನ್ನುತ್ತವೆ ಹಾಗೂ ಹಗಲು ಹೊತ್ತಿನಲ್ಲಿ ಮರಗಳ ಮೇಲ ಕುಳಿತುಕೊಂಡು ವಿಶ್ರಾಂತಿ ಪಡೆಯುತ್ತವೆ. ಇಂತಹ ಗೂಬೆಗಳಿಗೆ ತೋಟಗಳಲ್ಲಿ ವಾಸಮಾಡುವಂತೆ ಅನುಕೂಲ ಮಾಡಿಕೊಟ್ಟರೆ ಆ ಪ್ರದೇಶದ ಸುತ್ತಮುತ್ತ ಇಲಿಗಳ ನಿಯಂತ್ರಣವಾಗಬಹುದು ಎಂಬ ಯೋಚನೆಯಿಂದ ಬಸವರಾಜುರವರು ತಮ್ಮ ತೋಟದಲ್ಲಿ ಅಳವಡಿಸಿಕೊಂಡ ವಿಧಾನ ಹೀಗಿದೆ.ಹಳೆಯ ಡ್ರಮ್‌ನ ಮಧ್ಯಭಾಗದಲ್ಲಿ ಗೂಬೆಯು ಕುಳಿತುಕೊಳ್ಳಲು ಅನುಕೂಲವಾಗುವಂತೆ ನಾಲ್ಕು ರಂಧ್ರಗಳನ್ನು ಮಾಡಿ ಅದರಲ್ಲಿ ಕೋಲುಗಳನ್ನು ಸೇರಿಸಬೇಕು. ನಂತರ ಕೆಳಭಾಗದಲ್ಲಿ ಅದರ ವಿಸರ್ಜನೆಗಳು ಕೆಳಗೆ ಬೀಳುವಂತೆ ದೊಡ್ಡ ರಂಧ್ರಗಳನ್ನು ಮಾಡಬೇಕು. ಒಣಗಿರುವ ಬಾಳೆಯ ಅಥವಾ ಅಡಿಕೆಯ ಗರಿಗಳನ್ನು ಡ್ರಮ್‌ನ ಮೇಲೆ ಹೊದೆಸಿ ಅದನ್ನು ಬೇವಿನ, ಹುಣಸೆ, ಹಲಸಿನ ಅಥವಾ ಬೇರೆ ಯಾವುದಾದರು ಮರದ ಮೇಲಿಡಬೇಕು. ಇದು ಗೂಡಿನಂತೆ ಕಾಣುವುದರಿಂದ ಕೆಲವೇ ದಿನಗಳಲ್ಲಿ ಗೂಬೆಯು ಇದರಲ್ಲಿ ವಾಸಿಸಲು ಪ್ರಾರಂಭಿಸಿ ರಾತ್ರಿ ವೇಳೆಯಲ್ಲಿ ಈ ಇಲಿಗಳನ್ನು ಗೂಬೆಗಳು ಸುಲಭವಾಗಿ ಬೇಟೆಯಾಡುತ್ತವೆ. ಈ ವಿಧಾನವನ್ನು ಬಸವರಾಜುರವರು 1983 ರಲ್ಲೇ ತಮ್ಮ ತೋಟಕ್ಕೆ ಅಳವಡಿಸಿಕೊಂಡಿದ್ದಾರೆ. ಈಗ ಅವರ ತೋಟದಲ್ಲಿ ಎಂಟು ಗೂಬೆಗಳಿವೆಯಂತೆ. ಹಾಗೂ ಇಲಿಗಳ ಹಾವಳಿಯೂ ಇಲ್ಲವಂತೆ.

12.ಇಲಿ ಹಿಡಿಯುವಾಗ ಒಂದು ಸೂಚನೆ :- ಮನೆಯಲ್ಲಿ ಇಲಿ ಕಾಟ ಜಾಸ್ತಿಯಾದಾಗ ನಮಗೆ ಮೊದಲು ನೆನಪು ಬರುವುದು ಇಲಿ ಬೋನು. ಬೋನು ಇಟ್ಟರೂ ಎರಡು ಅಥವಾ ಮೂರು ಇಲಿಗಳು ಬೀಳಬಹುದು. ನಂತರ ಬೋನಿನಲ್ಲಿ ಬೀಳುವುದು ಕಮ್ಮಿಯೇ. ಕಾರಣ ಬೋನಿನಲ್ಲಿ ಬಿದ್ದಂತಹ ಇಲಿಯು ಒಂದು ತರಹದ ಹಾರ್ಮೋನನ್ನು ಹೊರ ಚೆಲ್ಲುತ್ತದೆಯಂತೆ. ಈ ಹಾರ್ಮೋನಿನಿಂದ ಇತರ ಇಲಿಗಳಿಗೆ ಅಪಾಯದ ಸೂಚನೆಯ ಅರಿವಾಗುತ್ತದೆ. ಇದರಿಂದ ಕರಿದ ಅಥವಾ ಅವುಗಳಿಗೆ ಇಷ್ಟವಾದ ತಿಂಡಿಗಳೇನೇ ಇಟ್ಟರೂ ಅತ್ತ ಕಡೆ ಅವು ಸುಳಿಯುವುದೇ ಇಲ್ಲ. ಇದಕ್ಕೆ ಪರಿಹಾರ ಕಂಡು ಬಂದಿದೆ ಒಂದು ಚಮಚ ಸುಣ್ಣ, ಅರ್ಧ ಚಮಚ ಅರಿಶಿನ ಪುಡಿಯನ್ನು ಒಂದು ಬಕೆಟ್ ನೀರಿನಲ್ಲಿ ಕದಡ ಬೇಕು. ಆಗ ನೀರು ಕೆಂಪಾಗುತ್ತದೆ. ಈ ನೀರನ್ನು ಉಪಯೋಗಿಸಿಕೊಂಡು ಖಾಲಿ ಬೋನನ್ನು ಚೆನ್ನಾಗಿ ತೊಳೆಯಬೇಕು. ಇದರಿಂದ ಹಾರ್ಮೋನಿನ ವಾಸನೆಯು ಕಾಣೆಯಾಗುತ್ತದೆ. ಈ ರೀತಿ ಪ್ರತಿ ಬಾರಿ ಇಲಿ ಬಿದ್ದ ಬೋನನ್ನು ಇಂತಹ ನೀರಿನಿಂದ ಚೆನ್ನಾಗಿ ತೊಳೆಯಬೇಕು. ಹೆಚ್ಚಾಗಿ ಮಳೆಗಾಲದಲ್ಲಿ ಹೆಗ್ಗಣ, ಇಲಿಗಳು ನಾವಿಡುವ ತಿಂಡಿಗಳ ಆಮಿಷಗಳಿಗೆ ಆಕರ್ಷಣೆಗೊಳಗಾಗುವುದು ಹೆಚ್ಚು. ಹಾಗೇ ಇಲಿಗಳು ಒಂದೇ ರೀತಿಯ ಆಹಾರವನ್ನು ಇಷ್ಟಪಡುವುದಿಲ್ಲ ಮತ್ತು ವರ್ಷದ ಕೆಲವು ವೇಳೆ ಇವು ಯಾವುದೇ ಆಹಾರವನ್ನು ತಿನ್ನುವುದಿಲ್ಲ ಎನ್ನುವ ಅಂಶವನ್ನು ಗಮನಿಸಬೇಕು.

ಮೂಲ: ಉದಯವಾಣಿ, 21/7/2008.

ಜೀವ ವೈವಿಧ್ಯ ನಾಶದಿಂದ ಕಮರುತ್ತಿರುವ ಮಲೆನಾಡ ಬದುಕುಗಳು

ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ

ಹುಟ್ಟು, ಬದುಕು, ಸಾವು ಈ ಜೀವಯಾತ್ರೆ ಎಲ್ಲೆಡೆ ಇದ್ದಿದ್ದೆ. ಈ ಯಾತ್ರೆಯ ಅತ್ಯಂತ ಪ್ರಮುಖ ಘಟ್ಟವಾದ ಬದುಕೆಂಬುದು ನೈಜವಾಗಿ ಅರಳುವುದಾದರೂ ಕೌಟುಂಬಿಕ ಪರಿಸ್ಥಿತಿಗೂ ಮಿಗಿಲಾಗಿ ಅದರ ಸುತ್ತಲಿನ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ಪರಿಸರಗಳ ಪ್ರಭಾವದಿಂದ. ಮಲೆನಾಡೆಂಬುದು ಪಶ್ಚಿಮಘಟ್ಟ, ನಿತ್ಯ ಹರಿದ್ವರ್ಣ ಕಾಡು, ಬೆಟ್ಟ, ಗುಡ್ಡ, ಕೆರೆ, ಝರಿ, ಹಳ್ಳ ಕೊಳ್ಳಗಳಿಂದ ಕೂಡಿದ್ದು ದೇಶದಲ್ಲೇ ವಿಶಿಷ್ಟ ಪರಿಸರ ವ್ಯವಸ್ಥೆಯಾಗಿದೆ. ಇದು ಇಲ್ಲಿನ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತದೆ. ಇಲ್ಲಿನ ವಿಶಿಷ್ಟ ಪರಿಸರ ವ್ಯವಸ್ಥೆಯ ಅತ್ಯಂತ ಮೂರ್ತಸ್ವರೂಪವೇ **'ಜೀವ ವೈವಿಧ್ಯ'** *(Biological Diversity)* ವಾಗಿದೆ. ಈ ಪಶ್ಚಿಮ ಘಟ್ಟಪ್ರದೇಶ ಜಗತ್ತಿನ ಹತ್ತು ದಟ್ಟ ಜೀವ ವೈವಿಧ್ಯ ತಾಣಗಳಲ್ಲೊಂದು ಎಂಬ ಖ್ಯಾತಿ ಪಡೆದಿದೆ. ಇದಕ್ಕೆ ಹೊಂದಿಕೊಂಡೇ ಮಲೆನಾಡ ಹಿತ್ತಲು, ತೋಟ, ಹೊಲಗಳಲ್ಲೂ ನಾಟಿ ತಳಿಗಳು, ಹಣ್ಣು, ತರಕಾರಿ, ಸಸ್ಯ, ಗಿಡ, ಮರಗಳ ಜೀವ ವೈವಿಧ್ಯ ಕೂಡ ಅಷ್ಟೇ ದಟ್ಟವಾಗಿರುತ್ತದೆ. ಅಂದಮೇಲೆ, ಮಲೆನಾಡ ಬದುಕುಗಳು ಅರಳುವುದಾದರೂ ಈ ದಟ್ಟ ಜೀವವೈವಿಧ್ಯದೊಳಗೇ ಎಂದಾಯ್ತು. ಹೀಗೆ, ಬದುಕನ್ನರಳಿಸಿಕೊಳ್ಳುವ ಅನನ್ಯ ಅವಕಾಶವನ್ನು ಬಾಲ್ಯದಲ್ಲಿ ಪಡೆಯುವಂತಾಗಿ, ಈಗ ಬೆಂಗಳೂರಿನಂತಹ ಕಾಂಕ್ರಿಟ್ ಜಂಗಲ್‌ಗಳಲ್ಲಿ ಸಿಕ್ಕಿ ತೊಳಲಾಡುತ್ತಿರುವ ನನ್ನಂತಹವರಿಗೆ ಆ ಅದ್ಭುತ ಅವಕಾಶದ ಮರುನೆನಪೇ ಅಪಾರ ಸಂತಸ ತರುವಂತಾಗಿದೆ. ಆದರೆ, ಈ ಜನಸಂಖ್ಯೆ ಹೆಚ್ಚಳ, ಅರಣ್ಯನಾಶ, ಪರಿಸರ ವಿನಾಶಗಳಿಂದಾಗಿ ಅಲ್ಲಿನ ಆ ಜೀವ ವೈವಿಧ್ಯ ಕೂಡ ಕ್ಷೀಣಿಸುವಂತಾಗಿದ್ದು, ಇಲ್ಲಿನ ಬದುಕೇ ಈಗ ಕಮರುವಂತಾಗಿದೆ, ಮಿಗಿಲಾಗಿ, ಮುಂಬರುವ ತಲೆಮಾರುಗಳು ಇಂತಹ ಅವಕಾಶದಿಂದ ಪೂರ್ತಿ ವಂಚಿತವಾಗುವ ಅಪಾಯ ಕೂಡ ನಮ್ಮ ಮುಂದಿದೆ. ಈ ಎಲ್ಲಾ ವಿಚಾರಗಳತ್ತ ಕಣ್ಣು ಹಾಯಿಸುವುದು ಈ ಒಂದು ಪುಟ್ಟ ಲೇಖನದ ಪ್ರಯತ್ನವಾಗಿದೆ.

ಜೀವ ಸಂಕುಲದಲ್ಲಿ ಗಿಡ, ಮರ, ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಾದಿಗಳಲ್ಲಿನ ಪ್ರಭೇದ, ವಿಭೇದಾದಿಗಳಲ್ಲಿನ **ವಿವಿಧತೆ** *(variety)* ಮಾತ್ರವಲ್ಲ ಈ ವಿವಿಧತೆ ಸದಾ **ಏರಿಳಿತಗೊಳ್ಳುವ** *(variability)* ವ್ಯವಸ್ಥೆಗೆ **ಜೀವ ವೈವಿಧ್ಯವೆಂದು** ಸರಳವಾಗಿ ವ್ಯಾಖ್ಯಾನಿಸಲಾಗುತ್ತದೆ. ಜೀವ ಶಾಸ್ತ್ರಜ್ಞರು, ಪಶ್ಚಿಮಘಟ್ಟದಲ್ಲಿ ಅದೆಷ್ಟು ಜಾತಿಯ, ಪ್ರಭೇದ, ವಿಭೇದಗಳ ಜೀವ ಜಂತುಗಳಿರುವವು ಎಂದು ತಿಳಿಸುವುದು ಮಾತ್ರವಲ್ಲ ಒಂದು ನಿರ್ದಿಷ್ಟ ವಿಸ್ತೀರ್ಣದಲ್ಲಿ ಎಷ್ಟು ಸಂಖ್ಯೆಯಲ್ಲಿ ಇವುಗಳಿರುವವು ಎಂದು ನಿಖರವಾಗಿ ಲೆಕ್ಕ ಹಾಕಿ ತಿಳಿಸಬಲ್ಲವರಾಗಿರುವರು. ಇದು ಸ್ವಲ್ಪ ಯಾಂತ್ರಿಕವಾಗಿ ಜೀವ ವೈವಿಧ್ಯವನ್ನು ನೋಡುವ ಪರಿಯಾಗಿದೆ. ಇದು ಮೂಲಭೂತ ಸ್ಥರದಲ್ಲಿ **ವನ್ಯತೆ** *(wilderness)* ಯೊಳಗೆ ಹುದುಗಿರುವ **ಕಾಡಿನೊಳಗಿನ ಜೀವವೈವಿಧ್ಯ** ದತ್ತ ನೋಡುವಂತಾಗಿದೆ. ಆದರೆ ನಿತ್ಯ ಕಾಣಸಿಗುವ ಬೋಗಿಮರ, ಮಲೆನಾಡ ಗಿಡ್ಡ ಹಸು, ಕರಿಬಾಳೆ, ಬಕ್ಕೆ ಹಲಸು, ಪುನರ್‌ಪುಳಿ, ಜೀರಿಗೆ, ಮೆಣಸು, ಅಪ್ಪೆ ಮಿಡಿ, ಮಾವಿನ ಕಾಯಿ, ಮುಕ್ಕಡಕ, ಕಾಸರ್ಕಮರ, ಸುಗಂಧಿ ಬೇರಿನಂತಹ ಕಷಾಯ ಸಸ್ಯಗಳು, ಹಿತ್ತಲುಗಳಲ್ಲಿ ರಾರಾಜಿಸುವ ಡೇರೆ, ಮಲ್ಲಿಗೆ, ಕೆಂಡಸಂಪಿಗೆ, ಹೂ ಗಿಡಮರಗಳು, ಬಸಳೆ, ತೊಂಡೆ, ಹರಿವೆ ತರಕಾರಿಗಳು, ಎಲ್ಲಕ್ಕಿಂತ ಮಿಗಿಲಾಗಿ ಗದ್ದೆಗಳಲ್ಲಿ ಅದ್ಬುತವಾಗಿ ಬೆಳೆಯುತ್ತಿದ್ದ ಹೆಗ್ಗ, ಜೋಳಿಗೆ, ರತ್ನ ಚೂಡಿ, ಕಾಯಮೆ ಇತ್ಯಾದಿ, ನೂರಾರು ಬತ್ತದ ತಳಿಗಳಂತಹ **ಸಾಕಾಣಿಕೆಗೆ ಒಳಪಟ್ಟಿರುವ,** *(domesticated)* **ನಾಡೊಳಗಿನ ಜೀವ ವೈವಿಧ್ಯ** ಕೂಡ ಮಲೆನಾಡ ಬದುಕುಗಳನ್ನು ಅರಳಿಸುವಲ್ಲಿ ವಿಶೇಷ ಪಾತ್ರವಹಿಸಿರುತ್ತವೆ. ಈ ಸಾಕಾಣಿಕೆಗೊಳಪಟ್ಟ ಜೀವ ವೈವಿಧ್ಯಕ್ಕೆ ಸಾಂಸ್ಕೃತಿಕ ಕವಚ ಹೊದಿಸಿ ಗಟ್ಟಿ ಮಾಡಲು ಹಲವು ಆಚರಣೆ,ಸಂಪ್ರದಾಯ, ರೀತಿ, ರಿವಾಜುಗಳ ಭದ್ರ **'ದೇಶೀಯ ಸಂಸ್ಥೆಗಳು'** *(traditional institutions)* ಇಲ್ಲಿ ವಿಸ್ತೃತವಾಗಿದ್ದವು. ಹಾಗೇ, ಇಲ್ಲಿನ ಹಲವಾರು ತಳಮಟ್ಟದ ಅನುಶೋಧಕರ ಹೊಸ ಹೊಸ ಅನ್ವೇಷಣೆಗಳು ಈ ನಿಟ್ಟಿನಲ್ಲಿ ತಲೆ ಎತ್ತಿದ್ದು ಈ ಮಲೆನಾಡ ಜೀವವೈವಿಧ್ಯ ವ್ಯವಸ್ಥೆಯನ್ನು ಗಟ್ಟಿಮಾಡುವಂತಾಗಿದ್ದವು ಹಾಗಾಗಿ, ಸಾಕಾಣಿಕೆಗೆ ಒಳಪಟ್ಟಿರುವ ಜೀವವೈವಿಧ್ಯದ ಮೇಲೆ ಈ ಲೇಖನ ಹೆಚ್ಚು ಒತ್ತು ಕೊಡಲಾಗಿದೆ. ಆದರೆ ವನ್ಯತೆಯೊಳಗೆ ಹುದುಗಿರುವ ಜೀವ ವೈವಿಧ್ಯ ಈ ನಿಟ್ಟಿನಲ್ಲಿ ಅಗೌಣವೆಂಬುದು ಖಂಡಿತಾ ಅಲ್ಲ. ಅದಿಲ್ಲದಿದ್ದರೆ ಈ ಸಾಕಾಣಿಕೆಗೊಳಪಟ್ಟಿರುವ ಜೀವ ವೈವಿಧ್ಯವೆಂಬುದು ಇರುತ್ತಲೇ ಇರಲಿಲ್ಲ.

ಜೀವವೈವಿಧ್ಯವೆಂಬುದು ಮಾನವನ ತೆಕ್ಕೆಗೆ ಒಳಪಟ್ಟು ಹೇಗೆ ಆತನ ಬದುಕನ್ನು ಹಸನು ಮಾಡುತ್ತದೆ ಎನ್ನುವುದಕ್ಕೆ ಮಲೆನಾಡ ಹಿತ್ತಲು, ಇಲ್ಲಿನ ಭತ್ತದ ಗದ್ದೆಗಳಿಂದ ಸಮೃದ್ಧ ಹಚ್ಚ ಹಸುರಿನ ವೈವಿಧ್ಯಮಯ ಅಡಿಕೆ ತೋಟಗಳೇ ಸಾಕ್ಷಿ. ಹಿತ್ತಲುಗಳು ಒಂದರ್ಥದಲ್ಲಿ ಮಲೆನಾಡ ಸಂಸ್ಕೃತಿಯ ಮೂರ್ತರೂಪವೆಂದರೆ ತಪ್ಪಾಗಲಾರದು. ಹಿತ್ತಲುಗಳಿಲ್ಲದ ಮನೆ, ಅದು ಯಾವ ಜಾತಿ, ಧರ್ಮದವರದ್ದೇ ಆಗಿರಲಿ ಮಲೆನಾಡಿನಲ್ಲಿ ಮನೆಗಳೇ ಅಲ್ಲ. ಇವುಗಳ ಉಸ್ತುವಾರಿ ಹೆಚ್ಚು ಕಡಿಮೆ ಮಹಿಳೆಯರಿಗೇ ಮೀಸಲು. ಇವುಗಳು ಅತ್ಯಂತ ವಿಕೇಂದ್ರೀಕೃತ ಉತ್ಪಾದನ ಘಟಕಗಳಾಗಿದ್ದರೂ ಮಾರುಕಟ್ಟೆ ಮುಖವಾಗಿರದೇ ಕುಟುಂಬದ ಲೌಕಿಕ, ಸಾಂಸ್ಕೃತಿಕ ಅಷ್ಟೇಕೆ ಪಾರಮಾರ್ಥಿಕ ಉದ್ದೇಶಗಳ ಪರವಾಗಿರುತ್ತವೆ ಎಂದರೆ ತಪ್ಪಾಗಲಾರದು. ಇಲ್ಲಿ ಬೆಳೆಯುವ ಬಹುತೇಕ ನಾಟಿ ತಳಿ ತರಕಾರಿಗಳಾದ ಬಸಳೆ, ಸೌತೆ, ಬೀನ್ಸ್, ಹಾಗಲ, ಕುಂಬಳ, ನುಗ್ಗೆ, ಜೊತೆಗೆ ಕರಿಬೇವು,ಅಮಟೆ, ವಾಟೆ, ಜೀರಕ ಮುಂತಾದ ರುಚಿವರ್ಧಕಗಳು ಕುಟುಂಬಕ್ಕೆ ಪೌಷ್ಠಿಕತೆ ಮತ್ತು ಆಹಾರದ ಭದ್ರತೆ ನೀಡಿದ್ದರೆ, ಮಾವು, ಹಲಸು, ಪೇರಳೆ, ಪಪ್ಪಾಯ ಹಣ್ಣುಗಳು ಬಾಯಿ ಚಪಲತೆಯನ್ನು ನೀಗಿಸಿ ಈ ನಿಟ್ಟಿನಲ್ಲಿ ಸಮೃದ್ಧತೆಯನ್ನು ದ್ವಿಗುಣಗೊಳಿಸಿರುತ್ತವೆ. ಇಲ್ಲಿ ಬೆಳೆಯುವ ಡೇರೆ, ಮಲ್ಲಿಗೆ, ಸಂಪಿಗೆ, ದಾಸವಾಳ, ಗುಲಾಬಿ,ಜಾಜಿಹೂಗಳು ಮಹಿಳೆಯರ ಮುಡಿಗೆ ಮುಡುಪಾಗುವುದು ಮಾತ್ರವಲ್ಲ. ಸಾಂಸ್ಕೃತಿಕ ಸಮಾರಂಭಗಳಲ್ಲಿ ಹಾಗೇ,ಪೂಜೆ, ಪುನಸ್ಕಾರ ಇತ್ಯಾದಿ ಧಾರ್ಮಿಕ ಆಚರಣೆಗಳಲ್ಲೂ, ಅವಿಭಾಜ್ಯ ಅಂಗಗಳಾಗಿರುತ್ತವೆ. ನಮ್ಮ ಮಲೆನಾಡ ಮಹಿಳೆಯರ ಹೆಗ್ಗಳಿಕೆ ಆಕೆ ತನ್ನ ಹಿತ್ತಲಿನಲ್ಲಿ ಅದೆಷ್ಟು ವಿಧ ವಿಧದ ಡೇರೆ, ಗುಲಾಬಿ, ಇತ್ಯಾದಿ ಹೂಗಳನ್ನು ಬೆಳೆಸಿರುತ್ತಾಳೆ ಎನ್ನುವುದರ ಮೇಲೆ ಆಧಾರಿತವಾಗಿರುತ್ತದೆ. ಜೊತೆಗೆ ನಮ್ಮ ಮಲೆನಾಡ ಹಿತ್ತಲೆಂಬುದು ತುಳಸಿ, ಅರಿಶಿನ, ಶುಂಠಿಗಳಿಂದ ಹಿಡಿದು ತುಂಬೆ, ಕಾಳು ಜೀರಿಗೆ, ಕಕ್ಕೆ ಹೊನಗನೆಸೊಪ್ಪು, ಚವಿ, ಸುಗಂಧಿ ಇತ್ಯಾದಿ ಹಲವು ಹತ್ತಾರು ಔಷಧಿ ಸಸ್ಯಗಳ ಅಗರವಾಗಿದ್ದು ಕುಟುಂಬದ ಅದರಲ್ಲೂ ಮುಖ್ಯವಾಗಿ ಮಕ್ಕಳ ಮಹಿಳೆಯರ, ವೃದ್ಧರ ಪ್ರಾಥಮಿಕ ಆರೋಗ್ಯದ ರಕ್ಷಣೆಯ ಮೂಲ ಸ್ಥಾನವು ಆಗಿರುತ್ತದೆ.

ಕುಟುಂಬದ ಆರೋಗ್ಯ, ಸಾಂಸ್ಕೃತಿಕ ಬದುಕು ಮತ್ತು ಆಹಾರ ಭದ್ರತೆಗೆ ಪೂರಕವಾಗಿದ್ದು, ತರಕಾರಿ, ಹೂವು, ಹಣ್ಣು, ಔಷಧಿಗಳ ವಿಚಾರದಲ್ಲಿ ಹೆಚ್ಚು ಕಡಿಮೆ ಒಂದು ಕುಟುಂಬಕ್ಕೆ

ಸ್ವಾವಲಂಬನೆ ನೀಡುವ ಸಾಮರ್ಥ್ಯ ಈ ಮಲೆನಾಡ ಹಿತ್ತಲುಗಳಿಗಿತ್ತು. ಜೊತೆಗೆ ಈ ಹಿತ್ತಲ ಬೇಲಿಗಳಲ್ಲಿನ ಹಾಲುವಾಣ, ಹೊಂಗೆ, ಇತ್ಯಾದಿ ಗಿಡಗಳು ಕಷ್ಟದಿನಗಳಲ್ಲಿ ದನಕರುಗಳ ಮೇವಿಗೂ ಆಸರೆಯಾಗಿದ್ದವು. ಇನ್ನು ಮಲೆನಾಡ ಅಡಿಕೆ ತೋಟಗಳಂತೂ ವೈವಿಧ್ಯಮಯ ಕೃಷಿಗೆ ಹೇಳಿ ಮಾಡಿಸಿದಂತಿರುತ್ತವೆ. ಇಲ್ಲಿ ಅಡಿಕೆ ಮೂಲ ವಾಣಿಜ್ಯ ಬೆಳೆಯಾಗಿದ್ದರೂ ಬಾಳೆ, ಕರಿಮೆಣಸು, ವೀಳ್ಯ, ಯಾಲಕ್ಕಿಗಳಿಂದ ಹಿಡಿದು ಇತ್ತೀಚಿಗಿನ ದಿನಗಳಲ್ಲಿ ಕೋಕ, ವೆನಿಲ್ಲಾಗಳೂ ತುಂಬಿ ಈ ತೋಟಗಳು ಹಚ್ಚ ಹಸಿರಾಗಿ ಕಂಗೊಳಿಸುತ್ತಿರುತ್ತವೆ. ಇಲ್ಲಿನ ಸ್ವಲ್ಪ ಹುಳಿಮಿಶ್ರಿತ, ಆರೋಗ್ಯ ಗುಣಗಳನ್ನೂ ಹೊಂದಿರುವ ವಿಶಿಷ್ಟ **ಕರಿಬಾಳೆ** ಮತ್ತೆಲ್ಲೂ ಸಿಗದು. ಜೊತೆಗೆ ಪುಟ್ಟಬಾಳೆ, ರಸಬಾಳೆ, ಕಲ್ಯಾಣಬಾಳೆ, ಕಲ್ಲುಬಾಳೆ (!), ಗಳಿ ಕೂಡ ಅಷ್ಟೇ ವಿಶಿಷ್ಟವಾದವು. ಮಲೆನಾಡ ಈ ಎಲ್ಲಾ ಬಾಳೆ ವೈವಿಧ್ಯಗಳ ಸಂರಕ್ಷಣೆಗೆಂದೇ ಕುಂದಾದ್ರಿ ತಪ್ಪಲಿನ ಬೆಟ್ಟೆಗೆರೆ ದೇವಸ್ಥಾನದಲ್ಲಿ **'ಲಕ್ಷ ಹಣ್ಣು ಹರಕೆ'** ಎನ್ನುವ ಈ ಬಾಳೆ ತಳಿಗಳ ಮೇಳ ಏರ್ಪಡಿಸುವ ಒಂದು ಧಾರ್ಮಿಕ ಆಚರಣೆ ಚಾಲ್ತಿಯಲ್ಲಿತ್ತು. ಹೀಗೆ ವೈವಿಧ್ಯಮಯವಾಗಿರುವ ಸಾಂಪ್ರಾದಾಯಕ ಮಲೆನಾಡ ಅಡಿಕೆ ತೋಟಗಳು ರೈತರಿಗೆ ವಿಧವಿಧ ಮೂಲದಿಂದ ಆದಾಯ ನೀಡುತ್ತಾ ಸುಸ್ಥಿರ ವಾಣಿಜ್ಯ ಕೃಷಿಯ ಅತ್ಯುನ್ನತ ಮಾದರಿ ಒಂದನ್ನು ನಮ್ಮ ಮುಂದಿಟ್ಟಿರುತ್ತದೆ. ಇದನ್ನೆ ಮತ್ತಷ್ಟು ಅಭಿವೃದ್ಧಿ ಪಡಿಸಿದ ನಮ್ಮ ಸಾವಯವ ಕೃಷಿ ಋಷಿಗಳಲ್ಲೊಬ್ಬರಾದ ದಿವಂಗತ ಕುರುವಳ್ಳಿ ಪುರುಷೋತ್ತಮ ರಾಯರು 12 ತಿಂಗಳ 12 ಕೊಯಿಲಿನ ಕೃಷಿ ಮಾದರಿ ಒಂದನ್ನು ರೂಪಿಸಿ **'ಸರ್ಕಾರಿ ನೌಕರರಂತೆ ನಾನು ಕೂಡ ಪ್ರತಿ ತಿಂಗಳೂ ಸಂಬಳ ಪಡೆಯುತ್ತೇನೆ,** ಎಂದು ಹೆಮ್ಮೆಯಿಂದ ಹೇಳುವಂತಾಗಿದ್ದರು. ಈ ರೀತಿಯ ನೂರಾರು ಸಾವಯವ ರೈತರು, ಮಹಿಳೆಯರು, ತಳಮಟ್ಟದ ಅನುಶೋಧಕರು ವೈವಿಧ್ಯಮಯ ಕೃಷಿಯನ್ನು ಕೈಗೊಂಡು ಇಲ್ಲಿನ ಜೀವ ವೈವಿಧ್ಯತೆಯನ್ನು ಗಟ್ಟಿಮಾಡುವುದು ಮಾತ್ರವಲ್ಲ ಅದರ ಸುಸ್ಥಿರ ಬಳಕೆಯ ರೀತಿಯನ್ನೂ ಕಂಡು ಕೊಂಡಿದ್ದರು. ಉದಾಹರಣೆಗೆ **ಬೆಳ್ತಂಗಡಿ ತಾಲ್ಲೂಕಿನ ಅಮ್ಮಾಲು ರವಿಶಂಕರ್ ಕಾಡಿನ ಹಿಪ್ಪಲಿ** *(Piper longum,L.)* ಗಿಡವನ್ನು ತಮ್ಮ ತೋಟದ ಕಾಳು ಮೆಣಸಿನೊಡನೆ ಕಸಿಮಾಡಿ, ಸೊರಗು ರೋಗಕ್ಕೆ ಪ್ರತಿರೋಧವಿರುವ ಸಧೃಡ ಕಾಳುಮೆಣಸಿನ ಗಿಡವನ್ನು ಅವಿಷ್ಕಾರ ಮಾಡಿದ್ದರು.

ಮಲೆನಾಡ ಈ ಕಾಡು ಮತ್ತು ಅದರೊಳಗಣ ಜೀವವೈವಿಧ್ಯವೆಂಬುದು ನಾಡೊಳಗಣ ಬದುಕಿಗೆ ವಿಮುಖವಾಗೇನೂ ಇರಲಿಲ್ಲ, ಬದಲಿಗೆ ಇವು ಅದಕ್ಕೆ ಪೂರಕವಾಗಿದ್ದವು. ಉದಾಹರಣೆಗೆ, ಈ ಮಲೆನಾಡ ಸಾಂಪ್ರದಾಯಕ ಅಡಿಕೆ ತೋಟಗಳಿಗೆ ನೆರಳು, ಮಳೆಗಾಳಿಗಳಿಂದ ರಕ್ಷಣೆ, ಮಿಗಿಲಾಗಿ ಅಡಿಕೆಗೆ ಪ್ರತಿ ವರ್ಷವೂ ಬೇಸಾಯ ಮಾಡಲು ಹಸಿರೆಲೆ ಗೊಬ್ಬರ ಹಾಗೇ, ಬೇಲಿಗೆ ಮುಳ್ಳು, ಬಿದಿರುಗಳು, ಜಾನುವಾರಿಗೆ ಹುಲ್ಲು, ಮೇವು, ಇತ್ಯಾದಿಗಳನ್ನು ಸತತ ಪೂರೈಸಲು ಭೋಗಿ ಮರವೇ ಪ್ರಮುಖವಾಗಿ ನೂರಾರು ಉಷ್ಣವಲಯದ ನಿತ್ಯ ಹರಿತ್ ಕಾಡು ಮರಗಳಿಂದ ಕೂಡಿದ ದಟ್ಟ ಹಸಿರಿನ **ಸೊಪ್ಪಿನ ಬೆಟ್ಟದ** ರಕ್ಷಣೆಯಿತ್ತು. ಈ ಸೊಪ್ಪಿನ ಬೆಟ್ಟ ಅಥವಾ ಹಾಡ್ಯವೆನ್ನುವುದು ಕಾಡೊಳಗಿನ ವನ್ಯ ಜೀವವಿವಿಧತೆಯನ್ನು ನಾಡೊಳಗಿನ, ಅಡಿಕೆ ತೋಟದ ಜೀವ ವಿವಿಧತೆಯೊಳಗೆ ಮೇಳೈಸಿ, ಎರಡಕ್ಕೂ ಪೂರಕ ಸಂಬಂಧ ಏರ್ಪಡಿಸುವ ಒಂದು ಅನನ್ಯ ಸಾಂಸ್ಥಿಕ *(Institutional)* ರಚನೆ ಎನ್ನಬಹುದು.

ಈ ವಿಶಿಷ್ಟ ರಚನೆ ಬ್ರಿಟಿಷ್ ಅವಧಿಯಲ್ಲೇ ಏರ್ಪಾಡಾಗಿದ್ದು, ಇದರ ಪ್ರಕಾರ ಪ್ರತಿ ಒಂದು ಎಕರೆ ಅಡಿಕೆ ತೋಟಕ್ಕೆ ಕನಿಷ್ಠ 6-7 ಎಕರೆಗಳಷ್ಟು ಅರಣ್ಯ ಅಥವಾ ಹಾಡ್ಯದ ಮೇಲಿನ ಸೊಪ್ಪು, ಸೌದೆ, ಮೇವು, ಇತ್ಯಾದಿ ಉಪಉತ್ಪನ್ನ ಮಾತ್ರ ಬಳಕೆಯ ಅಧಿಕಾರ *(usufruct rights)* ನೀಡಲಾಗಿರುತ್ತದೆ.

ಯಾವ ಕಾಡೇ ಆಗಲಿ ನಾಟ, ಮರಮುಟ್ಟು, ಸೌದೆಗಳಿಂದ ಹಿಡಿದು ಬಿದಿರು, ಬೆತ್ತ, ಜೇನು,ಅಂಟು ಸೀಗೆ ಹೀಗೆ ನೂರಾರು ಉಪ ಉತ್ಪನ್ನಗಳನ್ನು ನೀಡುತ್ತದೆ. ಇನ್ನು ನಿತ್ಯ ಹರಿದ್ವರ್ಣ ಮಲೆನಾಡ ಕಾಡಿನಿಂದ ನಾಡೊಳಗಿನ ಬದುಕಿಗೆ ಸಿಗುವ ಕಾಣಿಕೆಗೆ ಇತಿ ಮಿತಿಗಳೇ ಇರುವುದಿಲ್ಲ. ಇಲ್ಲಿ ಹೊರತಾಗಿ ಬೇರೆಲ್ಲೂ ಸಿಗದ ಪುನರ್‌ಪುಳಿ, ಕೆಸು, ಕಳಲೆ,ಅಣಬೆಗಳಿಂದ ಹಿಡಿದು ಮಾಂಸಹಾರಿಗಳಿಗೆ ಪ್ರಿಯವಾದ ಕಾಡು ಹಂದಿ, ಕಾಡುಕೋಳಿ, ಮಿಗಗಳಂತ ನೂರಾರು ಪ್ರಾಣಿ ಪಕ್ಷಿಗಳು ಮಲೆನಾಡ ಬದುಕನ್ನು ಸಮೃದ್ಧತೆಯ ಪರಾಕಾಷ್ಠೆಗೆ ಒಯ್ದಿದ್ದವು. ಅಣಬೆ ಒಂದಕ್ಕೆ ಬಂದರೆ ಚುಳ್ಳಣಬೆ, ಅಕ್ಕಿಅಣಬೆ, ಹೆಗಾಲ, ಕೋರಲ, ಹೈಗನ್ನ ಅಣಬೆಗಳೆಂದು ಹತ್ತಾರು ವಿಧದ ಕಾಡ ಅಣಬೆಗಳನ್ನು ಹುಡುಕಿ ಒಕ್ಕಲಿಗ ಮಹಿಳೆಯರು ರುಚಿ ರುಚಿಕರ ಸ್ವಾದಿಷ್ಟ ಅಡಿಗೆ ಮಾಡುತ್ತಿದ್ದರು. ಇನ್ನು ಇಲ್ಲಿನ ಸಹಸ್ರಾರು ಔಷಧಿ ಸಸ್ಯಗಳಂತೂ ಹಾವು, ಹುಚ್ಚುನಾಯಿ ಕಡಿತದಿಂದ ಸರ್ಪಸುತ್ತಿನವರೆಗೆ ಆಧುನಿಕ ಆರೋಗ್ಯ ಶಾಸ್ತ್ರದಲ್ಲಿ ಪರಿಹಾರ ಅಲಭ್ಯವಾಗಿರುವ ಹಲವು ಹತ್ತಾರು ಕಾಯಿಲೆಗಳನ್ನು ನಿವಾರಿಸುವ ಸಾಮರ್ಥ್ಯವಿದ್ದು, ಇಂದಿನ ಅಷ್ಟೇಕೆ ಮುಂದಿನ ತಲೆಮಾರುಗಳಿಗೂ ಜೀವ ರಕ್ಷಣೆಯ ಸೆಲೆಯಾಗಿರುತ್ತವೆ ಎಂದರೆ ತಪ್ಪಾಗಲಾರದು. ಹೀಗೆ ಕಾಡೊಳಗಿನ ಜೀವ ವೈವಿಧ್ಯವೂ ಮಲೆನಾಡ ಬದುಕಿನ ಮೇಲೆ ನೇರ ಪರಿಣಾಮ ಬೀಳುತ್ತಲಿದ್ದು ಇದು ನಾಶವಾಗದಂತೆ ಗಟ್ಟಿ ಮಾಡಲು ದೇವಬನ, ಪಂರ್ಜಳ್ಳಿವನ, ದೇವರಕಾಡು ಇತ್ಯಾದಿ, ಧಾರ್ಮಿಕ ಸಂಸ್ಥೆಗಳ ಮೂಲಕ ಒಂದು ವಿಧವಾದ **"ಸಾಮಾಜಿಕ ಬೇಲಿ,"** ಯನ್ನು *(social fencing)* ಇದರ ಸುತ್ತ ಹೆಣೆಯುವ ಪ್ರಯತ್ನ ಮಾಡಲಾಗಿರುತ್ತದೆ. ಈ ದೇವರಕಾಡು, ಬನ, ವನಗಳಲ್ಲಿ ಜನ ಮರ ಮುಟ್ಟುಗಳನ್ನು ಕಡಿಯುವುದಿರಲಿ ಬಿದ್ದ ಒಣ ಕಟ್ಟಿಗೆ, ದರಗೆಲೆಗಳನ್ನು ಮುಟ್ಟಲು ಅಂಜುವಂತಹ ಭಯ, ಭಕ್ತಿಯ ವಾತಾವರಣ ಏರ್ಪಾಡಾಗಿರುತ್ತದೆ. ಹೀಗೆ ಇದರ ಮೂಲ ಉದ್ದೇಶ ಕಾಡೊಳಗಣ ಈ ಜೀವ ವೈವಿಧ್ಯವನ್ನು ಕಾಪಾಡುವುದೇ ಆಗಿರುತ್ತದೆ.

ಇನ್ನು ಮಲೆನಾಡ ಬತ್ತದ ಗದ್ದೆಗಳಂತೂ ನಾಟಿತಳಿಗಳ ಆಗರವಾಗಿತ್ತು.ಹೆಗ್ಗ, ಜೋಳಿಗೆ, ಕರಿದಡಿ, ರತ್ನಚೂಡಿ, ಕಯಮೆ, ಪೀಟಸಾಲ, ಜೀರಸಾಲದಿಂದ ಹಿಡಿದು ಕಂಡು ಕೇಳರಿಯದ ಅದೇನು ಕೇಳ್ತೆ, ಮೊರಡ್ಡ, ಹಳ್ಳಿಂಗ ಹೀಗೆ ನೂರಾರು ನಾಟಿ ಭತ್ತದ ತಳಿಗಳು ಮೊನ್ನೆ ಮೊನ್ನೆವರೆಗೂ ಮಲೆನಾಡ ಹೊಲಗಳಲ್ಲಿ ರಾರಾಜಿಸುತ್ತಿದ್ದವು. ಇವನ್ನು ಹೊಲದಲ್ಲುಳಿಸಿಕೊಳ್ಳುವ ಹಲವು. ಹತ್ತಾರು ರೀತಿ, ರಿವಾಜು, ಧಾರ್ಮಿಕ ಆಚರಣೆಗಳೂ ಇಲ್ಲಿ ಮೈದಳೆದಿದ್ದವು ಉದಾಹರಣೆಗೆ ಹೊರನಾಡ ಅನ್ನಪೂರ್ಣೇಶ್ವರಿಗೆ ಹೆಗ್ಗ ಭತ್ತದ ಹೊರತಾಗಿ ಬೇರಾವ ಅಕ್ಕಿಯ ಅನ್ನ, ನೈವೇದ್ಯ ಮಾಡಿದರೂ ಪವಿತ್ರವಲ್ಲ ಎಂಬ ನಂಬಿಕೆಯಿಂದ ಹೊರನಾಡ ಸುತ್ತ ಮುತ್ತಲ ರೈತರ ಹೊಲದಲ್ಲಿ ಈ ತಳಿ ಕಾಣಸಿಗುತ್ತಿತ್ತು. ಈ ನಾಟಿ ಭತ್ತದ ತಳಿಗಳು ಇಳುವರಿಯಲ್ಲಿ ಸುಧಾರಿಸಿದ ಆಧುನಿಕ ತಳಿಗಳಿಗೆ ಹೋಲಿಸಿದಲ್ಲಿ ಸ್ವಲ್ಪ ಹಿಂದೆ ಬೀಳುತ್ತಿದ್ದರೂ ರಸಗೊಬ್ಬರ ಬೇಡದೆ, ಕ್ರಿಮಿಕೀಟ ನಾಶಕ ಹಾವಳಿಗೆ ತುತ್ತಾಗದೆ ಸಧೃಡವಾಗಿರುವುದು ಮಾತ್ರವಲ್ಲ ಆಳೆತ್ತರ ಬೆಳೆದು ಜಾನುವಾರುಗಳಿಗೂ ಸಮೃದ್ಧ ಮೇವು

ನೀಡುತ್ತಿದ್ದವು. ಇಲ್ಲಿನ ಜಾನುವಾರುಗಳಲ್ಲಿ **'ಮಲೆನಾಡ ಗಿಡ್ಡ'** ಹಸು ತಳಿ ಅತ್ಯಂತ ವಿಶಿಷ್ಟವಾದದ್ದು. ಸೌಮ್ಯ ಸ್ವಭಾವದ, ಚಿಕ್ಕಗಾತ್ರದ ಈ ಹಸುತಳಿ ಅಸಾಧಾರಣ ರೋಗನಿರೋಧಕ ಶಕ್ತಿ ಹೊಂದಿರುವಂತಹದು. ಇಲ್ಲಿನ ಜಡಿ ಮಳೆ, ಬಿಸಿಲು, ಗಾಳಿಗೆ ಮೈಯೊಡ್ಡಿ ಮೇಯ್ದು ಒಂದೆರಡ ಲೀಟರ್ ಹಾಲು ನೀಡಿದರೂ ಒಂದರ್ಥದಲ್ಲಿ ಇದರ ಸಾಕಾಣಿಕೆಗೆ ಖರ್ಚೇನೂ ಇಲ್ಲದೆ, ಶೂನ್ಯ ಬಂಡವಾಳದ ಹೈನುಗಾರಿಕೆಯಾಗಿರುತ್ತದೆ. ಈ ತಳಿಯಲ್ಲಿ ಅತ್ಯಂತ ಶ್ರೇಷ್ಠ 'ಸುಗಳಾದ ಕೌಲುಬಣ್ಣದ **'ಕಪಿಲೆ'** ಹಸುಗಳು ವೇದಗಳಲ್ಲಿ ಉಲ್ಲೇಖಿತವಾಗಿವೆ. ಇವುಗಳ ಹಣೆ, ಬಾಲದ ತುದಿ ಮತ್ತು ಗೊರಸು ಮೇಲ್ಭಾಗದಲ್ಲಿ ಬಿಳಿ ಬಣ್ಣವಿದ್ದು ಇದರ ಹಾಲು, ಗಂಜಲ, ಸಗಣಿ ಎಲ್ಲವೂ ಔಷಧೀಯ ಗುಣ ಹೊಂದಿದ್ದು ಶ್ರೇಷ್ಠವಾಗಿರುವಂತಹದ್ದು ಎನ್ನಲಾಗಿದೆ.

ಹೀಗೆ, ಮಲೆನಾಡಿಗರ ವ್ಯವಹಾರಿಕ, ಭೌತಿಕ, ಬದುಕನ್ನು ಮಾತ್ರವಲ್ಲ ಸಾಂಸ್ಕೃತಿಕ, ಅಭೌತಿಕ, ಆಧ್ಯಾತ್ಮಿಕ, ಬದುಕನ್ನೂ ಸಮೃದ್ಧಗೊಳಿಸಿರುವ ಈ ಜೀವ ವೈವಿಧ್ಯ ಇಂದು ಅಳಿವಿನ ಅಂಚಿನಲ್ಲಿದ್ದು ಕೆಲಸಮಯದಲ್ಲಿ ಇತಿಹಾಸವಾಗುವ ಅಪಾಯದಲ್ಲಿದೆ.

ಇದರ ಘೋರ ಪರಿಣಾಮದ ಚಿಹ್ನೆಗಳು ಈಗ ಸ್ಪಷ್ಟವಾಗಿ ಗೋಚರವಾಗತೊಡಗಿವೆ. ಕಾಡುನಾಶದಿಂದ ಸೊಪ್ಪು, ಕಟ್ಟಿಗೆ,ಉರುವಲು ಮತ್ತು ಮೇವಿಗೂ ತೊಂದರೆ ಒದಗಿರುವುದು ಮಾತ್ರವಲ್ಲ ಅಡಿಕೆ ಕೃಷಿಗೆ ಬೇರುಹುಳ, ಕಂಡು ಕೇಳರಿಯದ **ಹಳದಿ ರೋಗ**ಗಳಂತಹ ಪೀಡೆಗಳು ಬೀಳುವಂತಾಗಿವೆ. ಕಾಡು ದಟ್ಟವಾಗಿದ್ದಾಗ ಅಲ್ಲಿನ ಕಾಡು ಹಂದಿಗಳು ತೋಟದೊಳಗಿನ ಮತ್ತು ಹೊರಗಿನ ಈ ಬೇರುಹುಳಗಳನ್ನು ತಿಂದು ತೇಗುತ್ತಿದ್ದವು. ಹಾಗೇ, ಈ ಹಿಂದೆ ಕಾಡೊಳಗೆ ಹಾಯಾಗಿದ್ದ ಕ್ರಿಮಿ, ಕೀಟಗಳು, ಆಸರೆ ತಪ್ಪಿ ಅಡಿಕೆ, ಕಾಫಿ, ತೆಂಗು ತೋಟಗಳ ಮೇಲೆ ಹಾವಳಿ ಮಾಡಿರಲೂಬಹುದು. ಮಲೆನಾಡ ಮಹಿಳೆಯರು ತಮ್ಮ ಹಿತ್ತಲನ್ನು ಮರೆತಿರುವುದರಿಂದ ಈಗ ಜನ ತರಕಾರಿ, ಸೊಪ್ಪು, ಹೂವಿಗೆ ಸಂಪೂರ್ಣ ಪೇಟೆಗೆ ಹೋಗಬೇಕಾಗಿದೆ. ಈ ಹಿಂದೆ ಹೇರಳವಾಗಿ ಸಿಗುತ್ತಿದ್ದ ಕರಿಬಾಳೆ ಕಟ್ಟೆ ರೋಗದಿಂದ ಈಗ ಸಂಪೂರ್ಣ ಮಾಯವಾಗಿದೆ. ಮಳೆ ಮತ್ತು ಕಾರ್ಮಿಕರ ಕೊರತೆಯಿಂದ ರೈತರು ಭತ್ತದ ಬೆಳೆಗೆ ತಿಲಾಂಜಲಿ ಇಡುವಂತಾಗಿರುವರು. ಹಾಗಾಗಿ ಮಲೆನಾಡ ಗಿಡ್ಡದಂತಹ ಜಾನುವಾರಿಗೆ ಮೇವು ಸಿಗದಾಗಿದೆ. ಜೊತೆಗೆ ಅರಣ್ಯ ಒತ್ತುವರಿ, ಕಾಡುನಾಶದಿಂದ ಮೇವಾಡಿಸಲೂ ಜಾನುವಾರಿಗೆ ಅಸಾಧ್ಯವಾಗಿದೆ. ಅಂದು ಮಲೆನಾಡಿನ ಕಾಡುಗಳು ಎಷ್ಟು ದಟ್ಟವಾಗಿದ್ದವು. ಎನ್ನುವುದಕ್ಕೆ ನಮ್ಮ ರಾಷ್ಟ್ರಕವಿ ಕುವೆಂಪುರವರ ರಚನೆಯಿಂದಲೇ ಅರಿಯ**ಬೇಕಾಗುತ್ತದೆ.** 'ಆಕಾಶಕ್ಕಿಂತಲೂ ಕಾಡೆ ಸರ್ವವ್ಯಾಪಿಯಾಗಿ ತನ್ನ ಅಧಿಕಾರವನ್ನು ಸ್ಥಾಪಿಸಿ ಭೂಮಂಡಲವನ್ನೆಲ್ಲ ವಶಪಡಿಸಿಕೊಂಡಂತಿರುತ್ತದೆ. ಪೃಥ್ವಿಯನ್ನೆಲ್ಲ ಹಬ್ಬಿ ತಬ್ಬಿ ಆಳುವ ಕಾಡಿನ ದುರ್ದಮ್ಯ ವಿಸ್ತೀರ್ಣದಲ್ಲಿ ಎಲ್ಲಿಯೊ ಒಂದಿನಿತಿನಿತೆ ಅಂಗೈಯಗಲದ ಪ್ರದೇಶವನ್ನು ಮನುಷ್ಯ ಗೆದ್ದುಕೊಂಡು ತನ್ನ ಗದ್ದೆ ತೋಟ ಮನೆಗಳನ್ನು ರಚಿಸಿ ಕೊಂಡಿದ್ದಾನೆ, ಅಷ್ಟೆ, ಅದೂ ಕೂಡ ಅವನು ನಿತ್ಯವೂ ಜಾಗರೂಕನಾಗಿ ತಾನು ಗೆದ್ದುಕೊಂಡಿದ್ದನ್ನು ನಿರಂತರವೂ ರಕ್ಷಿಸಿಕೊಳ್ಳುತ್ತಾ ಹೋಗುವುದನ್ನು ಮರೆತನೆಂದರೆ, ಬಹುಬೇಗನೆ ಹಳು ಬೆಳ್ದು ಮತ್ತೆ ಅದು ಕಾಡಿನ ವಶವಾಗಿ ಬಿಡುತ್ತದೆ' (ಮಲೆಗಳಲ್ಲಿ ಮದುಮಗಳು, ಪುಟ 125). ಆದರೆ ಆ ದಟ್ಟಕಾನನಗಳ ಸ್ಥಿತಿ ಈಗ ಹೇಗಿದೆ ಎಂಬುದನ್ನು ಅರಿಯಲು ನಮ್ಮ ಕಮ್ಮರಡಿ ಪ್ರೌಢಶಾಲೆಯ ಹಿಂದಿರುವ **'ಬೋಗಿ ಹಾಡ್ಯವೇ,** ಸಾಕ್ಷಿ. ಆ ಕಾಡಿನಲ್ಲಿಪಶ್ಚಿಮ ಘಟ್ಟದ ವಿಶಿಷ್ಟ ಮರವಾದ ಬೋಗಿ ಮರಗಳು ನೆಟ್ಟಗೆ ಸಾಲುಸಾಲಾಗಿ ಆಕಾಶದೆತ್ತರ ಒಂದರ ಪಕ್ಕದಲ್ಲಿ ಮತ್ತೊಂದು ನಿಂತಿದ್ದು ಊರಜನ ಅದಕ್ಕೆ ಬೋಗಿ ಹಾಡ್ಯ ಎಂದಿದ್ದರು. ನಾನು ಹೈಸ್ಕೂಲು ಓದುತ್ತಿದ್ದ ಸಮಯ ನನ್ನ ಮನೆ ಆ ಬೋಗಿ ಹಾಡ್ಯದ ಆಚೆ ಕುಂಬ್ರಕೋಡಿನಲ್ಲಿತ್ತು. ಆ ಕಾಡಿನ ದಟ್ಟತೆಗೆ ನಾವು ಅದೆಷ್ಟು ಭಯ ಬೀಳುತ್ತಿದ್ದವು ಅಂದರೆ, ನನಗೆ ಒಬ್ಬನೆ ಅದರಿಂದ ನುಸುಳಿ ಬರಲು ಸಾಧ್ಯವೇ ಇರಲಿಲ್ಲ. ಸಂಜೆ ನಂತರ ಯಾರು ಹೋಗುವುದೂ ಅಸಾಧ್ಯದ ಮಾತು. ಏನಿದ್ದರೂ ಕಮ್ಮರಡಿ ಪೇಟೆ ಸುತ್ತಿ ಬೈರಣ ಬಯಲಿನ ಮೂಲಕವೇ ಸರಿ. ಆದರೆ ಈಗ, ಬಕ್ಕತಲೆಯಲ್ಲಿ ಕಷ್ಟಪಟ್ಟು ಹುಡುಕಬೇಕಾದ ಕೂದಲುಗಳಂತೆ ಅಲ್ಲಲ್ಲಿ ಮರಗಳಿದ್ದು, ಹೆಚ್ಚು ಕಡಿಮೆ ಬಟ್ಟಂ ಬಯಲಾಗಿದೆ ಆ ಬೋಗಿಹಾಡ್ಯ.ಒಟ್ಟಾರೆ ಮಲೆನಾಡ ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕಿನ ಬುಡಕ್ಕೆ ಕೊಡಲಿ ಏಟು ಬೀಳುವಂತಾಗಿದೆ. ಪರಿಣಾಮ ಅಷ್ಟೇ ಘೋರವಾಗತೊಡಗಿದೆ. ಮಲೆನಾಡು ಇಂದು ವಲಸೆ, ಸಾಮಾಜಿಕ ಅಶಾಂತಿ, ಕೋಮುಕಲಹ, ಅಪರಾಧಗಳ ಆಗರವಾಗಿದೆ. ರೈತ ಆತ್ಮಹತ್ಯೆಯಲ್ಲಿ ರಾಜ್ಯದಲ್ಲೇ ಮುಂದಿದೆ. ಮಿಗಿಲಾಗಿ ಈಗೀಗ ತಲೆ ಎತ್ತಿರುವ ನಕ್ಸಲ್ ಸಮಸ್ಯೆ ಇಂದು ಮಲೆನಾಡ ಉಳಿವಿಗೇ ಮಾರಕವಾಗಿದೆ. ಹಾಗಾಗಿ ರೈತರು, ಪ್ರಜ್ಞಾವಂತ ಜನರು ಅದರಲ್ಲೂ ಮುಖ್ಯವಾಗಿ ಮಲೆನಾಡ ಯುವಜನತೆ ಎಚ್ಚೆತ್ತುಕೊಳ್ಳುವುದು ಇಂದು ತುರ್ತು ಅಗತ್ಯವಾಗಿದೆ.

★ಲೇಖಕರ ಹುಟ್ಟೂರಿನ ಪ್ರೌಢಶಾಲೆಯ ಸುವರ್ಣ ಮಹೋತ್ಸವದ ಸ್ಮರಣ ಸಂಚಿಕೆಗೆ ಸಿದ್ಧಪಡಿಸಿರುವ ಲೇಖನ.

ಮುಖ ಪುಟ ಕಥನ

ತೀರ್ಮಾನ ನಿಮ್ಮ ಕೈಯಲ್ಲಿದೆ...

ಒಂದೂರಿನಲ್ಲಿ ಓರ್ವ ಅಸಾಮಾನ್ಯ ಬುದ್ಧಿವಂತ ಅಷ್ಟೇ ದಯಾಮಯ ಸಾಧುವಿದ್ದನು. ಆತನ ಬುದ್ಧಿ ಮತ್ತೆಗೇ ಮಸಿ ಬಳಿಯುವ ಒಂದು ದುರಾಲೋಚನೆ ಇಬ್ಬರು ಕಿಡಿಗೇಡಿಗಳ ತಲೆ ಹೊಕ್ಕಿತು. ಆಗತಾನೆ ಜನಿಸಿದ ಪುಟಾಣಿ ಕೋಳಿ ಮರಿಯೊಂದನ್ನು ಎರಡೂ ಕೈಗಳ ಮಧ್ಯೆ ಹಿಡಿದಿಟ್ಟು, ಆ ಕಿಡಿಗೇಡಿಗಳು ಆ ಸಾಧುವನ್ನು "ಈ ಕೋಳಿ ಮರಿ ಜೀವಂತವಿದೆಯೋ ಅಥವಾ ಇಲ್ಲವೇ" ಎಂದು ಪ್ರಶ್ನೆ ಹಾಕಿದರು. ಅವರ ಯೋಜನೆ ಕ್ಷಣಾರ್ಧದಲ್ಲಿ ಸಾಧುಗೆ ತಿಳಿಯಿತು. ಹಾಗೇ, ತಾನು ಜೀವಂತವಿದೆ ಎಂದು ಉತ್ತರಿಸಿದ್ದೆ ಆದಲ್ಲಿ ಕಿಡಿಗೇಡಿಗಳು ಅದನ್ನು ಹಿಸುಕಿ, ಸಾಯಿಸುವ ದುರಾಲೋಚನೆ ಕೂಡ ತಿಳಿಯಿತು. ಕೆಲಕಾಲ ಮೌನವಾಗಿದ್ದು, ನಂತರ ಮುಗುಳ ನಗುತ್ತಾ ಆ ಅಸಾಮಾನ್ಯ ಸಾಧು ಕೊಟ್ಟ ಉತ್ತರ "ಅದು ನಿಮ್ಮ ಕೈಯಲ್ಲಿದೆ". ನಿಜ ಹೇಳಬೇಕೆಂದರೆ ಬದುಕು ಒಡ್ಡುವ ಸಂಕೀರ್ಣ ಸಮಸ್ಯೆಗಳ ಉತ್ತರ ನಮ್ಮ ಕೈಯಲ್ಲೇ ಇದ್ದರೂ ಅದಕ್ಕಾಗಿ ನಾವು ಊರೆಲ್ಲಾ ಹುಡುಕಾಡುತ್ತಿರುತ್ತೇವೆ.

ಹಿತ್ತಲಗಿಡದ ಚಂದಾ ವಿವರ		
ವಿಂಗಡಣೆ	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು/ ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ. 500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ. 2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ ಪೋಷಕರ ವಂತಿಕೆ ಪಡೆಯಲಾಗುವುದು)

ಚಂದಾ ಹಣವನ್ನು ಅಂಚೆ (M.O) ಅಥವಾ 'ಸಂಪಾದಕರು, ಹಿತ್ತಲಗಿಡ, ಬೆಂಗಳೂರು' ಈ ಹೆಸರಿನ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Subscription Rates for *Honey bee*		
Category	South Asia* (Indian Rs.)	International (US $ Dollar)
Annual		
Individual	150	30
Supporter	500	50
Institution/Library	2,500	200
Life (15 years)		
Individual	2,500	500
Institution/Library	10,000	1,000
Other publications		
Spirit of sustainability	50	10
Nature Heals	150	20
Profiles of innovators	175	25
Back issues of *Honey Bee*	**(1990-2003)**	
Hard copies (Postage extra)	1,500 Individual	50
	5,000Institution	200
CD	250 Individual	20
	1,000 Institution	60

Includes: India, Nepal, Bhutan, Bangladesh, Pakistan, Sri Lanka and the Maldives.

Please send your contributions through bank draft/cheque in favour of A/c SRISTI Innovations at the editorial address;C/o Prof Anil K Gupta, Editor, *Honey Bee*, Indian Institute of Management, Vastrapur, Ahmedabad -380 015 India. Phone:91-79-26324927, Email:honeybee@sristi.org;

Printed by **M/s. Suhas Printers & Publications,** #12-C, KHB Industrial Area, Yelahanka New Town, Bangalore - 560 064. Ph: 080-28096209, email: suhasprinters@gmail.com

ರಾಷ್ಟ್ರೀಯ ಅನುಶೋಧನ ಪ್ರತಿಷ್ಠಾನ - ಭಾರತ.
ವಿಜ್ಞಾನ ಮತ್ತು ತಂತ್ರಜ್ಞಾನದ ವಿಭಾಗ, ಭಾರತ ಸರ್ಕಾರ

ತಳಮಟ್ಟದ (green grassroots) ಅನುದಾನಿತವಲ್ಲದ ತಾಂತ್ರಿಕತೆಗಳ ಅನುಶೋಧನೆ ಮತ್ತು ಸಾಂಪ್ರದಾಯಿಕ ಜ್ಞಾನದ ಅವಿಷ್ಕಾರಗಳ ರಾಷ್ಟ್ರಮಟ್ಟದ ದ್ವೈವಾರ್ಷಿಕ ಎಂಟನೇ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನವು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನದ ವಿಭಾಗದ, ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು "ಹನಿ ಬೀ" ತತ್ವಾಧಾರಿತವಾಗಿ ಕಾರ್ಯನಿರ್ವಹಿಸುತ್ತಿದೆ. ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಮತ್ತು ಸಾಂಪ್ರದಾಯಿಕ ಜ್ಞಾನ ಪ್ರವೀಣರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿದೆ. ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತ ಅಥವಾ ಸಮುದಾಯದತ್ತ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು, ಕೊಳಗೆರೆ ಪ್ರದೇಶದ ಜನರು, ವಿದ್ಯಾರ್ಥಿಗಳು ಇಂತಹವರೇ ಮೊದಲಾದವರು ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು, ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಗೃಹಪಯೋಗಿ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿ ಮಾಡುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.ಮಹಿಳೆಯರ ಅನುಶೋಧನೆಗಳಿಗೆ ಮತ್ತು ಪ್ರಮುಖ ಸಾಂಪ್ರಾದಾಯಿಕ ಜ್ಞಾನಕ್ಕೆ ವಿಶೇಷ ಬಹುಮಾನ ನೀಡಲಾಗುವುದು. ದೈಹಿಕವಾಗಿ ಅಂಗವಿಕಲರಾಗಿರುವವರ ಪ್ರಮುಖ ಅನುಶೋಧನೆಗಳಿಗೆ ಒಳ್ಳೆಯ ಬಹುಮಾನ ನೀಡಲಾಗುವುದು. ಪೂರ್ಣವಾಗದ ಸೃಜನಾತ್ಮಕ, ಯೋಚನೆ ರೂಪದ ತಾಂತ್ರಿಕ ಅನುಶೋಧನೆಗಳನ್ನು ಅವುಗಳ ಪ್ರತಿ ರೂಪಿಕೆಗಳನ್ನೂ ಸ್ಪರ್ದೆಗೆ ಕಳುಹಿಸಿ ಕೊಡಬಹುದು. ಮಕ್ಕಳ ಶಾಲೆ ಅಥವಾ ಶಾಲೆಯೇತರ ಪ್ರೋತ್ಸಾಹಕ ಸ್ವಕಲ್ಪಿತ ಮಾದರಿಯನ್ನು ಸ್ಪರ್ಧೆಗೆ ಕಳುಹಿಸಿಕೊಡಬಹುದು.

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ದೆಯಲ್ಲಿ ಅತ್ಯುತ್ತಮ ಅನುಶೋಧನೆಗಳಿಗೆ 10,000 ರೂಪಾಯಿಯಿಂದ 7,50,000 ರೂ ಪರಿಮಿತಿಯಲ್ಲಿ ವಿವಿಧ ವಿಭಾಗಗಳಿಗೆ ಬಹುಮಾನ ನೀಡಲಾಗುವುದು. ರಾಷ್ಟ್ರೀಯ ಪ್ರಥಮ, ದ್ವಿತೀಯ, ತೃತೀಯ 'ಜೀವನ ಪರ್ಯಂತ ಸಾಧನೆ' ಪ್ರಶಸ್ತಿ ವಿಜೇತರಿಗೆ ಒಟ್ಟು ಬಹುಮಾನ ಮೊತ್ತದ ಶೇ.35 ರಿಂದ 52 ರವರೆಗೆ ಮಾಸಿಕ ಹಣ (monthly fellowship) ನೀಡಲಾಗುವುದು. ಪಂಗಡ ಅಥವಾ ಸಮುದಾಯ ಸ್ವರೂಪ ಮತ್ತು ಕ್ಷೇಮಾಭಿವೃದ್ಧಿಗೆ ಐಚ್ಛಿಕವಾಗಿ ಸಹಾಯ ಧನ ನೀಡಲು ಅನುಶೋಧಕರಿಗೆ ಒಟ್ಟು ಮೊತ್ತದ ಶೇ. 15 ರಷ್ಟು ನೀಡಲಾಗುವುದು. ವಿಜೇತರು ತಮ್ಮ ಸಮುದಾಯದ ಕಾರ್ಯಚಟುವಟಿಕೆಯನ್ನು ಆಯ್ಕೆ ಮಾಡಿಕೊಂಡು ಮುಂದಾಳತ್ವ ವಹಿಸಿ ಕಾರ್ಯನಿರ್ವಹಿಸಬಹುದು.

ವ್ಯಕ್ತಿ ಮತ್ತು ಗುಂಪುಗಳು : ಸಾಂಪ್ರದಾಯಕ ಜ್ಞಾನ ಮತ್ತು ತಳಮಟ್ಟದ ಅನುಶೋಧನೆಗಳನ್ನು ಶೋಧಿಸುವ ಕಾರ್ಯ ಕೂಡ ಅತ್ಯಂತ ಮಹತ್ವದಾಗಿರುತ್ತದೆ. ಅದನ್ನು ಕೂಡ ಗುರುತಿಸಿ ಪ್ರೋತ್ಸಾಹಿಸಲಾಗುತ್ತದೆ. ಹಾಗೇ ಈ ರೀತಿಯ ತಳಮಟ್ಟದ ಅನುಶೋಧನೆಗಳಿಗೆ ಮೌಲ್ಯವರ್ಧನೆಗೆ ನೆರವಾಗುವ ತಂತ್ರಜ್ಞರು, ಸಮೂಹ ಮಾಧ್ಯಮ, ದೂರದರ್ಶನ, ಪತ್ರಿಕಾವಲಯದ ವ್ಯಕ್ತಿಗಳನ್ನು ಗುರುತಿಸಲಾಗುವುದು. ಶೋಧಕರ ಶೋಧನೆಗಳ ಚಿತ್ರಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ವ್ಯಕ್ತಿ ಮತ್ತು ಗುಂಪುಗಳು ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನ ಪ್ರತಿಷ್ಠಾನಕ್ಕೆ ಮಾರ್ಚ 31, 2013 ರ ಒಳಗೆ ಕಳುಹಿಸಿ ಕೊಡಬಹುದು.

ಪ್ರವೇಶ ಪತ್ರಕಳುಹಿಸುವ ವಿಳಾಸ :- National Innovation Foundation, Bungalow no.1, Satellite complex, Premchand Nagar road, Ahmedabad -380015 Gujarat. phone : (079)26732456,2095, Fax: (079)26731903, Email: campaign @nifindia.org. website: www. nifindia.org

(**ಸೂಚನೆ :** ವೃತ್ತಿನಿರತ ಹಿನ್ನೆಲೆಯುಳ್ಳ ಜನರ ಮತ್ತು ವೃತ್ತಿನಿರತ ಅನುಭವವುಳ್ಳ ವಿದ್ಯಾರ್ಥಿಗಳ ಜೀವನ ಮಾರ್ಗ ಹೊಂದಿರುವ ಶೋಧನೆಗಳು ಅರ್ಹತೆ ಹೊಂದಿರುವುದಿಲ್ಲ. ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದ ಜನರ ತಳಮಟ್ಟದ ಅನುಶೋಧನೆಗಳು ಅರ್ಹತೆ ಪಡೆದುಕೊಂಡಿರುತ್ತವೆ.ಹೆಚ್ಚಿನ ಮಾಹಿತಿಗಾಗಿ ವೆಬ್ ಅನ್ನು ಸಂಪರ್ಕಿಸಿ : http://www.nif.org.in/announcement.)

ಪತ್ರಿಕೆ ನೋಂದಣಿ ಸಂಖ್ಯೆ 66842/96

ತೆರೆದ ಅಂಚೆ

ಗೆ ....
....
....
....

ವಿಳಾಸ,
ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ
ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025
email: prakashtnk@yahoo.com